ಮಂಗಳವಾರ, ಆಗಸ್ಟ್ 13, 2024 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕಣ್ಗಾವಲು...

ಸ್ವಾತಂತ್ರ್ಯೋತ್ಸವ ಸಮೀಪಿಸುತ್ತಿದ್ದು, ಜಮ್ಮು ಮತ್ತು ಕಾಶ್ಮೀರದ ರಜೌರಿ ಜಿಲ್ಲೆಯ ಗಡಿ ನಿಯಂತ್ರಣ ರೇಖೆಯಲ್ಲಿ ಸೋಮವಾರ ಸೈನಿಕರೊಬ್ಬರು ಕಣ್ಗಾವಲಿರಿಸಿದ್ದರು



ರಾಜಕಾಲುವೆಗಳಲ್ಲಿ ತ್ಯಾಜ್ಯ; ಪೂರ್ವಭಾಗದಲ್ಲಿ ನೀರುಗಾಲುವೆಗಳಾದ ರಸ್ತೆಗಳು • ಸೋಮವಾರ ಮಧ್ಯಾಹ್ನದವರೆಗೂ ವಾಹನ ದಟ್ಟಣೆ

ಮಳೆ: ರಸ್ತೆ ಜಲಾವೃತ, ಸಂಚಾರಕ್ಕೆ ಸಂಕಷ್ಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಸೋಮವಾರ ಬೆಳಗಿನ ಜಾವ ಸುರಿದ ಭಾರಿ ಮಳೆಗೆ ರಸ್ತೆ ಚರಂಡಿ ಹಾಗೂ ರಾಜಕಾಲುವೆಯಲ್ಲಿ ನೀರು ಸರಾಗವಾಗಿ ಹರಿಯಲು ಸಾಧ್ಯವಾಗದೆ, ಕೆಲವು ಪ್ರದೇಶಗಳು, ಹಲವು ರಸ್ತೆಗಳು ಜಲಾವೃತವಾಗಿದ್ದವು. ಮಧ್ಯಾಹ್ನದವರೆಗೂ ವಾಹನ ಸಂಚಾರಕ್ಕೆ ಅಡಚಣೆಯಾಗಿತ್ತು.

ನಗರದ ಪೂರ್ವ ಭಾಗದಲ್ಲಿ ಅತಿ ಹೆಚ್ಚಿನ ಮಳೆಯಾಗದಿದ್ದರೂ, ರಸ್ತೆಗಳು ಜಲಾವೃತಗೊಂಡು ವಾಹನ ಸಂಚಾರಕ್ಕೆ ಬಹಳಷ್ಟು ತೊಂದರೆಯಾಯಿತು. ರಾಜಕಾಲುವೆ ಒತ್ತುವರಿ ಹಾಗೂ ಕಟ್ಟಡ ತ್ಯಾಜ್ಯ, ಇತರೆ ತ್ಯಾಜ್ಯ ತುಂಬಿಕೊಂಡಿದ್ದರಿಂದ ನೀರು ಹರಿಯಲು ಸಾಧ್ಯವಾಗದೆ ಕೆಲವು ಪ್ರದೇಶಗಳಲ್ಲಿ ಮನೆಗಳಿಗೆ ನೀರು ನುಗ್ಗಿತ್ತು.

ರಾಮಮೂರ್ತಿನಗರದಿಂದ ಕಸ್ತೂರಿ ನಗರ, ಬಿಇಎಲ್‌– ಕಿಮ್ಕೊ ಜಂಕ್ಷನ್, ಬನ್ನೇರುಘಟ್ಟ ರಸ್ತೆಯ ಜಯದೇವ ಆಸ್ಪತ್ರೆ ಬಳಿಯ ಕೆಳಸೇತುವೆಯ ಎರಡೂ ಬದಿ, ರೂಪೇನ ಅಗ್ರಹಾರದಿಂದ ರೇಷ್ಮೆ ಮಂಡಳಿ, ಎಂ.ಎಸ್‌. ಪಾಳ್ಯದಿಂದ ಯಲಹಂಕ, ಹೊರ ವರ್ತುಲ ರಸ್ತೆಯ ಮಾರತ್‌ ಹಳ್ಳಿ, ಕಾರ್ತಿಕ್ ನಗರ, ಕಲ್ಯಾಣನಗರ, ಪುಟ್ಟೇನಹಳ್ಳಿ, ವರ್ತೂರು ಕೋಡಿ, ಸಕ್ರಾ ಆಸ್ಪತ್ರೆಯಿಂದ ಬೆಳ್ಳಂದೂರು, ನಾಗವಾರ ಜಂಕ್ಷನ್, ಹೆಬ್ಬಾಳ– ಹೊರ ವರ್ತುಲ ರಸ್ತೆ, ಹೆಬ್ಬಾಳ ಮೇಲ್ಸೇತುವೆ, ಎಸ್ಟೀಮ್‌ ಮಾಲ್‌ನಿಂದ ಮೇಖ್ರಿ ವೃತ್ತ, ಎಲೆಕ್ಟ್ರಾನಿಕ್ ಸಿಟಿ ಎಲಿವೇಟೆಡ್‌ ರಸ್ತೆಯಿಂದ ವೀರಸಂದ್ರದವರೆಗಿನ ರಸ್ತೆಗಳಲ್ಲಿ ಸೋಮವಾರ ಮಧ್ಯಾಹ್ನದವರೆಗೂ ನೀರು ನಿಂತಿತು. ಇದರಿಂದಾಗಿ ವಾಹನ ಸಂಚಾರ ನಿಧಾನಗತಿಯಲ್ಲಿತ್ತು.

ಕೆ.ಆರ್‌. ಮಾರುಕಟ್ಟೆಯ ನೆಲ ಮಾಳಿಗೆಯಲ್ಲಿ(ಸೆಲ್ಲಾರ್) ಸುಮಾರು ಎರಡು ಅಡಿ ಮಳೆ ನೀರು ತುಂಬಿಕೊಂಡು, ವ್ಯಾಪಾರಸ್ಥರು ಸಂಗ್ರಹಿಸಿದ್ದ ತರಕಾರಿಗೆ ಹಾನಿಯಾಯಿತು.


ಜಯದೇವ ಆಸ್ಪತ್ರೆ ಸಮೀಪದ ಕೆಳಸೇತುವೆಯಲ್ಲಿ ನಿಂತಿದ್ದ ಮಳೆ ನೀರಿನಲ್ಲಿ ವಾಹನ ಸವಾರರು ಪ್ರಯಾಸಪಟ್ಟು ಸಂಚರಿಸಿದರು ಪ್ರಜಾವಾಣಿ ಚಿತ್ರ/ ವಿ. ಪುಷ್ಕರ್


ವರ್ತೂರು – ಬಳಗೆರೆ ಮತ್ತು ಹೊರ ವರ್ತುಲ ರಸ್ತೆಗೆ ಸಂಪರ್ಕಿಸುವ ಮುಖ್ಯರಸ್ತೆ ಸಂಪೂರ್ಣ ಜಲಾವೃತಗೊಂಡು, ನಾಗರಿಕರು ಪರದಾಡಿದರು

ಎಲ್ಲೆಲ್ಲಿ ಎಷ್ಟು ಮಳೆ?

(ಸೋಮವಾರ ಬೆಳಿಗ್ಗೆ 6ರವರೆಗೆ ಸೆಂ.ಮೀಟರ್‌ನಲ್ಲಿ)

ವಾರ್ಡ್	ಪ್ರಮಾಣ
ಕೊಡಿಗೇಹಳ್ಳಿ	6.15
ರಾಧಾಕೃಷ್ಣ ದೇವಸ್ಥಾನ	6.15
ವಿಶ್ವೇಶ್ವರಪುರ	5.75
ಸಂಪಂಗಿರಾಮನಗರ	5.75
ಬಸವನಗುಡಿ	5.6
ವಿದ್ಯಾಪೀಠ	5.6
ಕುಮಾರಸ್ವಾಮಿ ಲೇಔಟ್	5.6
ಗರುಡಾಚಾರ್‌ಪಾಳ್ಯ	5.5
ನಾಯಂಡಹಳ್ಳಿ	5.5
ಹಗದೂರು	5.4
ವರ್ತೂರು	5.4
ಜ್ಞಾನಭಾರತಿ	5.3
ರಾಜರಾಜೇಶ್ವರಿನಗರ	5.3
ಚೌಡೇಶ್ವರಿನಗರ	5.15
ಯಲಹಂಕ	5.15
ಮನೋರಾಯನಪಾಳ್ಯ	5.05
ವಿಶ್ವನಾಥ ನಾಗೇನಹಳ್ಳಿ	5.05
ಪುಲಕೇಶಿನಗರ	4.95
ಅಟ್ಟೂರು	4.9
ಅರಕೆರೆ	4.85
ಬೇಗೂರು	4.85
ದೊಡ್ಡನೆಕ್ಕುಂದಿ	4.5
ಎಚ್‌ಎಸ್‌ಆರ್ ಲೇಔಟ್	4.5
ನಾಗಪುರ	4.4
ಕಾಟನ್‌ಪೇಟೆ	4.35
ಚಾಮರಾಜಪೇಟೆ	4.35
ಜಕ್ಕೂರು	4.3
ಬ್ಯಾಟರಾಯನಪುರ	4.3
ಬಿಟಿಎಂ ಲೇಔಟ್	4.2

ಮರದ ರೆಂಬೆಗಳು ಬಿದ್ದು ಆರು ಜನರಿಗೆ ಗಾಯ

ಬಾಣಸವಾಡಿಯಲ್ಲಿ ದ್ವಿಚಕ್ರ ವಾಹನಗಳಲ್ಲಿ ಸೋಮವಾರ ಬೆಳಿಗ್ಗೆ ತೆರಳುತ್ತಿದ್ದ ಆರು ಜನರ ಮೇಲೆ ಮರವೊಂದರ ರೆಂಬೆಗಳು ಬಿದ್ದು ಗಾಯಗಳಾಗಿವೆ. ಎಲ್ಲರಿಗೂ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಬಿಬಿಎಂಪಿ ತಿಳಿಸಿದೆ.

ಸುಬ್ಬಣ್ಣಪಾಳ್ಯ ನಿವಾಸಿ ಮಾಣಿಕ್ಯ ವೇಲು ಅವರ ಮೇಲೆ ಕೊಂಬೆ ಬಿದ್ದು, ಮೂರು ಪಕ್ಕೆಲುಬುಗಳು ಮುರಿದಿವೆ. ಬೆನ್ನು ಮೂಳೆಗೂ ಪೆಟ್ಟಾಗಿದೆ. ಇವರೊಂದಿಗಿದ್ದ ಒಂಬತ್ತು ವರ್ಷದ ಹರಿಣಿ ಮತ್ತು 13 ವರ್ಷದ ಭವಧರನ್ ಅವರಿಗೂ ಸಣ್ಣಪುಟ್ಟ ಗಾಯಗಳಾಗಿವೆ.

ಸುಬ್ಬಣ್ಣಪಾಳ್ಯ ನಿವಾಸಿ ವಿಶಾಲಾಕ್ಷಿ ಅವರು 13 ವರ್ಷದ ಪ್ರಣತಿ ಹಾಗೂ ಏಳು ವರ್ಷದ ತನಿಷ್ಕ ಅವರೊಂದಿಗೆ ದ್ವಿಚಕ್ರ ವಾಹನದಲ್ಲಿ ಸಂಚರಿಸುತ್ತಿದ್ದಾಗ, ಮರದ ಕೊಂಬೆ ಬಿದ್ದು ವಿಶಾಲಾಕ್ಷಿ ಅವರಿಗೆ ತೊಡೆಯ ಭಾಗದ ಮೂಳೆ ಮುರಿದಿದೆ. ಪ್ರಣತಿ ಮತ್ತು ತನಿಷ್ಕ ಅವರಿಗೆ ಸಣ್ಣಪುಟ್ಟ ಗಾಯಗಳಾಗಿವೆ ಎಂದು ವೈದ್ಯರು ಮಾಹಿತಿ ನೀಡಿದ್ದಾರೆ ಎಂದು ಬಿಬಿಎಂಪಿಯ ಉಪ ಅರಣ್ಯ ಸಂರಕ್ಷಣಾಧಿಕಾರಿ ವಿವರ ನೀಡಿದ್ದಾರೆ.

21 ಮರ ಧರೆಗೆ: ನಗರದಲ್ಲಿ ಭಾನುವಾರ ರಾತ್ರಿಯಿಂದ ಸೋಮವಾರದ ಸಂಜೆವರೆಗೆ 21 ಮರಗಳು ಧರೆಗುರುಳಿವೆ. ಯಲಹಂಕ ವಲಯದಲ್ಲಿ ಏಳು, ಪಶ್ಚಿಮದಲ್ಲಿ ಐದು, ಪೂರ್ವದಲ್ಲಿ ನಾಲ್ಕು, ದಕ್ಷಿಣ, ರಾಜರಾಜೇಶ್ವರಿನಗರದಲ್ಲಿ ತಲಾ ಎರಡು, ದಾಸರಹಳ್ಳಿ ವಲಯದಲ್ಲಿ ಒಂದು ಮರ ಉರುಳಿದೆ. 31 ಸ್ಥಳಗಳಲ್ಲಿ ಮರದ ಕೊಂಬೆಗಳು ಬಿದ್ದಿವೆ.

ಅಪಾರ್ಟ್‌ಮೆಂಟ್‌ಗಳಿಗೆ ನುಗ್ಗಿದ ನೀರು

ಯಲಹಂಕ: ಅಮೃತಹಳ್ಳಿಯ ಮುನಿಸ್ವಾಮಪ್ಪ ಬಡಾವಣೆಯಲ್ಲಿ ಭಾರಿ ಮಳೆಯಿಂದ ರಸ್ತೆಗಳೆಲ್ಲಾ ಜಲಾವೃತಗೊಂಡು, ಮನೆಗಳಿಗೆ ನೀರುನುಗ್ಗಿ ನಿವಾಸಿಗಳು ತೊಂದರೆ ಅನುಭವಿಸಿದರು.

ಕುಟುಂಬ ಸದಸ್ಯರೆಲ್ಲ ರಾತ್ರಿಯೆಲ್ಲ ಮನೆಯಲ್ಲಿದ್ದ ಸಾಮಗ್ರಿಗಳನ್ನು ದಿವಾನ ಮತ್ತು ಮಂಚದ ಮೇಲಿಟ್ಟುಕೊಂಡು ರಕ್ಷಿಸಿಕೊಂಡರು. ಜೊತೆಗೆ ಸೋಮವಾರ ಮಧ್ಯಾಹ್ನದವರೆಗೂ ಮನೆಗೆ ನುಗ್ಗಿದ್ದ ನೀರನ್ನು ಹೊರಹಾಕಲು ಪ್ರಯಾಸಪಟ್ಟರು.

ಮಳೆ ನೀರಿನಿಂದ ಜಕ್ಕೂರು ರೈಲ್ವೆ ಕೆಳಸೇತುವೆ ಸಂಪೂರ್ಣ ಮುಳುಗಡೆಯಾಗಿತ್ತು. ಇದರಿಂದ ಜಕ್ಕೂರು-ಯಲಹಂಕ ಮುಖ್ಯರಸ್ತೆಯಿಂದ ವಿವಿಧ ಬಡಾವಣೆಗಳಿಗೆ ಸಂಚರಿಸಬೇಕಾಗಿದ್ದ ವಾಹನಸವಾರರು ಪರ್ಯಾಯ ಮಾರ್ಗಗಳ ಮೂಲಕ ತಮ್ಮ ಬಡಾವಣೆಗಳಿಗೆ ತೆರಳಬೇಕಾಯಿತು. ಯಲಹಂಕದ ರಮಣಶ್ರೀ ಕ್ಯಾಲಿಫೋರ್ನಿಯಾ ಗಾರ್ಡನ್ ಅಪಾರ್ಟ್‌ಮೆಂಟ್ ಪ್ರದೇಶಕ್ಕೆ ರಾಜಕಾಲುವೆ ನೀರು ನುಗ್ಗಿ ಪಾರ್ಕಿಂಗ್ ಪ್ರದೇಶ ಹಾಗೂ ಸುತ್ತಲಿನ ರಸ್ತೆಗಳು ಸಂಪೂರ್ಣ ಜಲಾವೃತಗೊಂಡಿದ್ದವು.


ಜಕ್ಕೂರು ರೈಲ್ವೆ ಕೆಳಸೇತುವೆ ಸಂಪೂರ್ಣ ಜಲಾವೃತಗೊಂಡಿತ್ತು

ಹೊಸೂರು ರಸ್ತೆಯಲ್ಲಿ 5 ಕಿ.ಮೀ. ವಾಹನ ದಟ್ಟಣೆ

ಬೊಮ್ಮನಹಳ್ಳಿ: ಸೋಮವಾರ ಬೆಳಗಿನಜಾವ ಸುರಿದ ಭಾರಿ ಮಳೆಯಿಂದ ಹೊಸೂರು ರಸ್ತೆ ಮತ್ತು ಬನ್ನೇರುಘಟ್ಟ ರಸ್ತೆಗಳಲ್ಲಿ ನೀರು ನಿಂತು ಸಂಚಾರ ದಟ್ಟಣೆ ಉಂಟಾಯಿತು.

ರೇಷ್ಮೆ ಮಂಡಳಿ ಜಂಕ್ಷನ್‌ನಲ್ಲಿ ಮಳೆ ನೀರು ಶೇಖರಣೆಗೊಂಡು ವಾಹನಗಳು ಚಲಿಸಲಾಗದೇ ಸಾಲುಗಟ್ಟಿ ನಿಂತಿದ್ದವು. ಇದರಿಂದಾಗಿ ಹೊಸೂರು ರಸ್ತೆಯಲ್ಲಿ ಐದು ಕಿಲೊಮೀಟರ್ ಉದ್ದಕ್ಕೂ ಸಂಚಾರ ದಟ್ಟಣೆ ಉಂಟಾಗಿತ್ತು. ಮಧ್ಯಾಹ್ನ 12 ಗಂಟೆಯವರೆಗೂ ದಟ್ಟಣೆ ಇತ್ತು.

ಬೊಮ್ಮನಹಳ್ಳಿ, ಹೊಂಗಸಂದ್ರ, ಬಿಳೇಕಹಳ್ಳಿ, ಮೈಕೋ ಬಡಾವಣೆ, ಬೇಗೂರಿನ ಕೆಲ ರಸ್ತೆಗಳಲ್ಲಿ ನೀರು ನಿಂತು ಸಂಚಾರಕ್ಕೆ ಅಡ್ಡಿ ಆಯಿತು.

‘16ರಿಂದ ಮುಂಗಾರು ಮತ್ತೆ ಚುರುಕು’

ಬೆಂಗಳೂರು: ಇದೇ 16ರಿಂದ ಮುಂಗಾರು ಮತ್ತೆ ಚುರುಕಾಗುವ ಮಾಹಿತಿಯನ್ನು ಹವಾಮಾನ ಇಲಾಖೆ ನೀಡಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಬೆಂಗಳೂರು ವಿಭಾಗದ ಕಂದಾಯ ಇಲಾಖೆಯ ಪ್ರಗತಿ ಪರಿಶೀಲನೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕರ್ನಾಟಕ-ಮಹಾರಾಷ್ಟ್ರ ಗಡಿಭಾಗ ಹಾಗೂ ಕೃಷ್ಣ-ಕಾವೇರಿ ನದಿಪಾತ್ರದ ಪ್ರದೇಶಗಳಲ್ಲಿ ಹೆಚ್ಚಿನ ಮಳೆಯಾಗುವ ಸಾಧ್ಯತೆ ದಟ್ಟವಾಗಿದೆ. ಈ ಭಾಗಗಳಲ್ಲಿ ಮುಂಜಾಗ್ರತೆ ವಹಿಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ. ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಬುಧವಾರ ಸಭೆ ನಡೆಯಲಿದೆ’ ಎಂದು ಹೇಳಿದರು.

ಮುಂಗಾರು ಮಳೆಗೆ ರಾಜ್ಯದಾದ್ಯಂತ 80 ಸಾವಿರ ಹೆಕ್ಟೇರ್ ಬೆಳೆ ನಾಶವಾಗಿದೆ ಎಂದು ಮಾಹಿತಿ ನೀಡಿದರು.

ಇಂದಿನಿಂದ ಮೆಟ್ರೊ ಸಂಚಾರದಲ್ಲಿ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಮ್ಮ ಮೆಟ್ರೊ’ ಹಸಿರು ಮಾರ್ಗದ ವಿಸ್ತರಿತ ಪ್ರದೇಶದಲ್ಲಿ ಸಿಗ್ನಲಿಂಗ್ ಪರೀಕ್ಷೆಗಳನ್ನು ಹಮ್ಮಿಕೊಂಡಿರುವುದರಿಂದ ಆ.13ರಿಂದ 15ರವರೆಗೆ ಪೀಣ್ಯ ಇಂಡಸ್ಟ್ರಿ–ನಾಗಸಂದ್ರ ನಡುವೆ ರೈಲು ಸಂಚಾರದಲ್ಲಿ ವ್ಯತ್ಯಯವಾಗಲಿದೆ.

ಆ.13 ಮತ್ತು 14ರಂದು ರಾತ್ರಿ ನಾಗಸಂದ್ರದಿಂದ ರಾತ್ರಿ 11.05ರ ಬದಲು 10ಕ್ಕೆ ಕೊನೇ ರೈಲು ಇರಲಿದೆ. ಮೆಜೆಸ್ಟಿಕ್‌ನಿಂದ ನಾಗಸಂದ್ರಕ್ಕೆ ರಾತ್ರಿ 9.34ಕ್ಕೆ ಕೊನೇ ರೈಲು ಸಂಚರಿಸಲಿದೆ.

ಆ.14 ಮತ್ತು 15ರಂದು ಬೆಳಿಗ್ಗೆ 5ರ ಬದಲು 6ರಿಂದ ನಾಗಸಂದ್ರ–ರೇಷ್ಮೆ ಸಂಸ್ಥೆ ರೈಲು ಸಂಚಾರ ಆರಂಭವಾಗಲಿದೆ.

ರೇಷ್ಮೆ ಸಂಸ್ಥೆ–ಪೀಣ್ಯ ಇಂಡಸ್ಟ್ರಿ ನಿಲ್ದಾಣಗಳ ನಡುವೆ ಸಂಚಾರದಲ್ಲಿ ಯಾವುದೇ ವ್ಯತ್ಯಯ ಇರುವುದಿಲ್ಲ. ನೇರಳೆ ಮಾರ್ಗದಲ್ಲಿಯೂ ಯಾವುದೇ ಬದಲಾವಣೆಗಳಿರುವುದಿಲ್ಲ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಫಲಪುಷ್ಪ ಪ್ರದರ್ಶನ– ಮೆಟ್ರೊ ಪೇಪರ್ ಟಿಕೆಟ್: ಲಾಲ್‌ಬಾಗ್‌ನಲ್ಲಿ ನಡೆಯುತ್ತಿರುವ ಫಲಪುಷ್ಪ ಪ್ರದರ್ಶನಕ್ಕೆ ಆ.15, 17 ಮತ್ತು 18ರಂದು ಭೇಟಿ ನೀಡಲಿರುವ ಜನರ ಅನುಕೂಲಕ್ಕಾಗಿ ‘ನಮ್ಮ ಮೆಟ್ರೊ’ ರಿಟರ್ನ್ ಜರ್ನಿ ಪೇಪರ್ ಟಿಕೆಟ್‌ಗಳನ್ನು ನೀಡುತ್ತಿದೆ.

ಈ ದಿನಗಳಲ್ಲಿ ನಿತ್ಯ ಬೆಳಿಗ್ಗೆ 10ರಿಂದ ರಾತ್ರಿ 8ರವರೆಗೆ ಲಾಲ್‌ಬಾಗ್ ಮೆಟ್ರೊ ನಿಲ್ದಾಣದಿಂದ ಯಾವುದೇ ಮೆಟ್ರೊ ನಿಲ್ದಾಣಕ್ಕೆ ಪ್ರಯಾಣಿಸಲು ₹30 ದರ ನಿಗದಿಪಡಿಸಲಾಗಿದೆ. ಆಯಾ ದಿನದ ಟಿಕೆಟ್, ಆಯಾ ದಿನಕ್ಕೆ ಮಾತ್ರ ಮಾನ್ಯ ಆಗಿರುತ್ತದೆ.

ಎಲ್ಲ ಮೆಟ್ರೊ ನಿಲ್ದಾಣಗಳಲ್ಲಿ ಪೇಪರ್ ಟಿಕೆಟ್ ಖರೀದಿಸಬಹುದು. ಈ ಮೂರೂ ದಿನಗಳಲ್ಲಿ ಮೆಟ್ರೊ ಲಾಲ್‌ಬಾಗ್ ನಿಲ್ದಾಣದಲ್ಲಿ ಟೋಕನ್‌ಗಳನ್ನು ನೀಡಲಾಗುವುದಿಲ್ಲ

ಎಂದಿನಂತೆ ಸ್ಮಾರ್ಟ್ ಕಾರ್ಡ್, ಎನ್‌ಸಿಎಂಸಿ ಕಾರ್ಡ್‌ಗಳು, ಕ್ಯೂಆರ್ ಟಿಕೆಟ್‌ಗಳ ಮೂಲಕ ಪ್ರಯಾಣಿಸಬಹುದು ಎಂದು ಮೆಟ್ರೊ ಅಧಿಕಾರಿಗಳು ತಿಳಿಸಿದ್ದಾರೆ.

ರಸ್ತೆಗಳಿಂದ ಕಟ್ಟಡ ತ್ಯಾಜ್ಯ ತೆರವಿಗೆ ಸೂಚನೆ

ಒಳಚರಂಡಿ, ಚರಂಡಿ ಸ್ವಚ್ಛಗೊಳಿಸಲು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಾಕೀತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ರಸ್ತೆ, ಪಾದಚಾರಿ ಮಾರ್ಗಗಳಲ್ಲಿ ಸುರಿದಿರುವ ಕಟ್ಟಡ ನಿರ್ಮಾಣ ತ್ಯಾಜ್ಯವನ್ನು ತೆರವುಗೊಳಿಸಲು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಧಿಕಾರಿಗಳಿಗೆ ಸೂಚಿಸಿದರು.

ತಗ್ಗು ಪ್ರದೇಶಗಳಲ್ಲಿ ನೀರು ನಿಲ್ಲದಂತೆ ಕ್ರಮ ವಹಿಸಬೇಕು. ಎಲ್ಲಾ ಕಡೆ ರಸ್ತೆ ಬದಿ ಚರಂಡಿಗಳು ಹಾಗೂ ಒಳಚರಂಡಿಗಳನ್ನು ಸ್ವಚ್ಛಗೊಳಿಸಬೇಕು ಎಂದು ಬಿಬಿಎಂಪಿ ಅಧಿಕಾರಿಗಳಿಗೆ ಆದೇಶಿಸಿದರು.

ಸೋಮವಾರ ಬೆಳಗಿನ ಜಾವ ಸುರಿದ ಮಳೆಯಿಂದ ಹಾನಿಗೊಳಗಾದ ಪ್ರದೇಶಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದರು.

ಹೆಬ್ಬಾಳ ಸಮೀಪದ ಯೋಗೇಶ್ವರ ನಗರ, ನಾಗವಾರ ಜಂಕ್ಷನ್ ಹಾಗೂ ಎಚ್‌ಬಿಆರ್ ಲೇಔಟ್ 5ನೇ ಬ್ಲಾಕ್, ಸಿಲ್ಕ್ ಬೋರ್ಡ್, ಜಯದೇವ ಜಂಕ್ಷನ್ ಸೇರಿದಂತೆ ಹಾನಿಗೊಳಗಾದ ಪ್ರದೇಶಗಳಿಗೆ ಭೇಟಿ ನೀಡಿದರು.

‘ರಾಜಕಾಲುವೆ ಸ್ವಚ್ಛತೆಯಲ್ಲಿ ನಿರ್ಲಕ್ಷ್ಯ’: ‘ಬಿಬಿಎಂಪಿ ಅಧಿಕಾರಿಗಳು ರಾಜಕಾಲುವೆ ಸ್ವಚ್ಛತೆಯಲ್ಲಿ ನಿರ್ಲಕ್ಷ್ಯ ವಹಿಸಿದ್ದಾರೆ. ಅಲ್ಲದೆ, ಎಲ್ಲೆಲ್ಲಿ ಬಿಎಂಆರ್‌ಸಿಎಲ್ ಅವರು ಕಾಮಗಾರಿ ನಡೆಸುವಾಗ ಕಟ್ಟಡ ತ್ಯಾಜ್ಯಗಳು ರಾಜಕಾಲುವೆಯಲ್ಲಿ ಉಳಿದಿದ್ದರೆ ಕೂಡಲೇ ತೆರವು ಮಾಡಬೇಕು. ಕೆಲವೊಂದು ಕಡೆ ನೀರು ಹರಿಯುವ ಜಾಗಗಳು ಕಿರಿದಾಗಿದ್ದು, ಅವುಗಳನ್ನು ವಿಸ್ತರಿಸುವಂತೆ ಸೂಚಿಸಲಾಗಿದೆ’ ಎಂದು ಶಿವಕುಮಾರ್ ತಿಳಿಸಿದರು.

ಬಾಣಸವಾಡಿ ಖಾಸಗಿ ಆಸ್ಪತ್ರೆಗೆ ಭೇಟಿ ನೀಡಿ, ಮರದ ಕೊಂಬೆ ಬಿದ್ದು ಗಾಯಗೊಂಡಿರುವವರ ಆರೋಗ್ಯ ವಿಚಾರಿಸಿದರು. ಚಿಕಿತ್ಸೆ ವೆಚ್ಚವನ್ನು ಬಿಬಿಎಂಪಿಯಿಂದ ಭರಿಸಲಾಗುವುದು ಎಂದರು.

ನಗರದಾದ್ಯಂತ ಒಣಗಿದ ಮರಗಳನ್ನು ಕೂಡಲೇ ತೆರವು ಮಾಡಲಾಗುವುದು. ನಿರ್ಲಕ್ಷ್ಯ ವಹಿಸಿರುವ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಹೇಳಿದರು.


ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹೆಬ್ಬಾಳದಲ್ಲಿ ತ್ಯಾಜ್ಯ ತುಂಬಿದ್ದ ರಾಜಕಾಲುವೆಯನ್ನು ವೀಕ್ಷಿಸಿದರು

ಕಾಡಿದ ರಸ್ತೆ ಗುಂಡಿಗಳು

ಮಳೆಯಿಂದ ಹಾನಿ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ರಸ್ತೆ ಗುಂಡಿಗಳು ಕಾಡಿದವು. ಗುಂಡಿಗಳು ಯಾವ ರೀತಿಯಲ್ಲಿವೆ, ಎಷ್ಟು ಸಂಕಷ್ಟ ತಂದೊಡ್ಡುತ್ತಿವೆ ಎಂಬ ಅರಿವೂ ಅವರಿಗಾಯಿತು.

‘ನಗರ ಸಂಚಾರದ ವೇಳೆ ಸಾಕಷ್ಟು ರಸ್ತೆಗುಂಡಿಗಳು ಕಂಡು ಬಂದವು. ಮಳೆ ಹೆಚ್ಚಾದ ಕಾರಣಕ್ಕೆ ಸುಮಾರು ಅರ್ಧ ಅಡಿಗೂ ಆಳದ ಗುಂಡಿಗಳಾಗಿವೆ. ಇವುಗಳನ್ನು ಕೂಡಲೇ ಮುಚ್ಚಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಎಲ್ಲೆಲ್ಲಿ ರಸ್ತೆಗುಂಡಿಗಳಿವೆ ಅದರ ಬಗ್ಗೆ ಮಾಹಿತಿ ನೀಡಬೇಕು ಎಂದು ಪೊಲೀಸರಿಗೂ ತಿಳಿಸಿದ್ದೇನೆ. ಈಗಾಗಲೇ ಆ್ಯಪ್ (ರಸ್ತೆ ಗುಂಡಿ ಗಮನ) ಬಿಡುಗಡೆ ಮಾಡಿದ್ದು ಅಲ್ಲಿ ಫೋಟೊ ತೆಗೆದು ಹಾಕಿದರೆ ಕೂಡಲೇ ಕ್ರಮ ತೆಗೆದುಕೊಳ್ಳಲಾಗುವುದು’ ಎಂದು ಶಿವಕುಮಾರ್ ಸುದ್ದಿಗಾರರಿಗೆ ತಿಳಿಸಿದರು.

ಸಂಪುಟ ಪುನರ್ ರಚನೆಗೆ ‘ಕೈ’ ವರಿಷ್ಠರ ಚಿಂತನೆ?

ಬೆಂಗಳೂರು: ರಾಜ್ಯದಲ್ಲಿ ಸಚಿವ ಸಂಪುಟ ಪುನರ್ ರಚನೆಗೆ ಕಾಂಗ್ರೆಸ್ ಹೈಕಮಾಂಡ್ ಮುಂದಾಗಿದೆ ಎಂಬ ಚರ್ಚೆ ಕಾಂಗ್ರೆಸ್ ವಲಯದಲ್ಲಿ ದಟ್ಟವಾಗಿದೆ.

ಕೆಲವು ಹಿರಿಯ ಸಚಿವರು ತಮ್ಮ ಖಾತೆ ಬದಲಿಸುವಂತೆ ಪಟ್ಟು ಹಿಡಿದಿದ್ದು, ಸಂಪುಟ ಪುನರ್ ರಚನೆಯ ಜೊತೆಗೆ ಖಾತೆಗಳ ಬದಲಾವಣೆಗೂ ವರಿಷ್ಠರು ಚಿಂತನೆ ನಡೆಸಿದ್ದಾರೆ ಎನ್ನಲಾಗಿದೆ.

ಸಚಿವರ ಕಾರ್ಯಕ್ಷಮತೆ ಆಧಾರವಾಗಿಟ್ಟು ಕೆಲವರನ್ನು ಕೈಬಿಡಲು ಹೈಕಮಾಂಡ್ ನಾಯಕರು ಮುಂದಾಗಿದ್ದಾರೆ. ಎಲ್ಲ ಸಚಿವರು ತಮ್ಮ ತಮ್ಮ ಇಲಾಖೆಗಳಲ್ಲಿ ಸಾಧಿಸಿರುವ ಪ್ರಗತಿಯ ವರದಿಯನ್ನು ಈಗಾಗಲೇ ತರಿಸಿಕೊಂಡಿರುವ ಹೈಕಮಾಂಡ್ ನಾಯಕರು, ವರ್ಷಾಂತ್ಯದೊಳಗೆ ಸಂಪುಟ ಪುನರ್ ರಚನೆ ಮಾಡುವುದು ಬಹುತೇಕ ಖಚಿತ ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

ಸಭೆ ಇಂದು: ಎಲ್ಲ ರಾಜ್ಯಗಳ ಕಾಂಗ್ರೆಸ್ ಉಸ್ತುವಾರಿ ಕಾರ್ಯದರ್ಶಿಗಳು ಹಾಗೂ ಪ್ರದೇಶ ಕಾಂಗ್ರೆಸ್ ಸಮಿತಿಗಳ ಅಧ್ಯಕ್ಷರ ಸಭೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನೇತೃತ್ವದಲ್ಲಿ ದೆಹಲಿಯಲ್ಲಿ ಮಂಗಳವಾರ (ಆಗಸ್ಟ್ 13) ನಡೆಯಲಿದೆ.

ಸುದ್ದಿಗಾರರಿಗೆ ಸೋಮವಾರ ಈ ವಿಷಯ ತಿಳಿಸಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ‘ಸಭೆಯಲ್ಲಿ ಭಾಗವಹಿಸಲು ನಾನು ದೆಹಲಿಗೆ ಹೋಗುತ್ತಿದ್ದೇನೆ. ಮಂಗಳವಾರ ಸಂಜೆ ಅಥವಾ ಬುಧವಾರ ವಾಪಸಾಗುತ್ತೇನೆ’ ಎಂದರು.

‘ರಾಜ್ಯಪಾಲರು ನಮ್ಮ ಮಾತಿಗೆ ಗೌರವ ಕೊಡುತ್ತಾರೆ’

ಬೆಂಗಳೂರು: ‘ರಾಜ್ಯಪಾಲರು ಪ್ರಜ್ಞಾವಂತರು ಮತ್ತು ಬುದ್ಧಿವಂತರಿದ್ದಾರೆ. ಅವರು ಕಾನೂನು ಚೌಕಟ್ಟಿನಲ್ಲಿ ಕೆಲಸ ಮಾಡುತ್ತಾರೆ. ನಮ್ಮ ಮಾತಿಗೆ ಗೌರವ ಕೊಡುತ್ತಾರೆ ಎಂದು ನಂಬಿದ್ದೇನೆ’ ಎಂದು ಡಿ.ಕೆ.ಶಿವಕುಮಾರ್ ಅವರು ಹೇಳಿದರು.

ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, ‘ನಾನು ಅವರ ಮೇಲೆ ವಿಶ್ವಾಸವಿಟ್ಟಿದ್ದೇನೆ. ಅವರು ಸಹ ಹಿರಿಯ ರಾಜಕಾರಣಿಯಾಗಿದ್ದು, ಸಚಿವ ಸಂಪುಟ ಸಭೆ ತೀರ್ಮಾನ ಗೌರವಿಸುತ್ತಾರೆ ಎಂದು ಅಂದುಕೊಂಡಿದ್ದೇನೆ’ ಎಂದು ಅವರು ಅಭಿಪ್ರಾಯಪಟ್ಟರು.

ಮಂಗಳವಾರ, ಆಗಸ್ಟ್ 13, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 225 | ಪುಟ 14

• www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
79,648	24,347	₹71,800 (ಬೆಂಗಳೂರು)	₹82,200 (ಬೆಂಗಳೂರು)	83.97



ನುಡಿ ಬೆಳಗು
ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ
ಗವಿಮಠ, ಕೊಪ್ಪಳ

ಅದಾನಿ ಪ್ರಕರಣದ ತನಿಖೆ ಸಿಬಿಐಗೆ ಒಪ್ಪಿಸಿ: 'ಸುಪ್ರೀಂ'ಗೆ ಕಾಂಗ್ರೆಸ್ ಮನವಿ 9

ಚಿನಕುರುಳಿ
ಪ್ರಕಾಶ್ ಶೆಟ್ಟಿ



ಬಿಎಸ್‌ವೈ ವಿರೋಧಿ ಬಣ ಮತ್ತೆ ಸಕ್ರಿಯ • ವಿಜಯೇಂದ್ರ ಇಳಿಸುವ ಪ್ರಯತ್ನಕ್ಕೆ ಮರು ಚಾಲನೆ

ಬಿಜೆಪಿಯಲ್ಲಿ ಹೆಚ್ಚಿದ ಒಡಲ ಉರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿಯ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ವಿರೋಧಿ ಬಣ ಮತ್ತೆ ಸಕ್ರಿಯಗೊಂಡಿದ್ದು, ಪಕ್ಷದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರನ್ನು ಹುದ್ದೆಯಿಂದ ಇಳಿಸುವ ಪ್ರಯತ್ನವನ್ನು ಆರಂಭಿಸಿದೆ.


ವಿಜಯೇಂದ್ರ

ವಿಜಯೇಂದ್ರ ನೇತೃತ್ವದಲ್ಲಿ ಮಿತ್ರ ಪಕ್ಷ ಜೆಡಿಎಸ್ ಜತೆಗೂಡಿ ನಡೆಸಿದ 'ಮೈಸೂರು ಚಲೋ' ಪಾದಯಾತ್ರೆ ಪೂರ್ಣಗೊಂಡ ಬೆನ್ನಲ್ಲೇ ನಾಯಕತ್ವದ ವಿರುದ್ಧ ಕೂಗು ಜೋರಾಗುತ್ತಿದೆ. ವರ್ಚಸ್ಸು ಬೆಳೆಸಿಕೊಂಡು, ಪಕ್ಷದಲ್ಲಿ ಹಿಡಿತ ಸಾಧಿಸಲು ಪ್ರಯತ್ನಿಸುತ್ತಿರುವ ವಿಜಯೇಂದ್ರ ಅವರಿಗೆ ಭಿನ್ನರ ಗುಂಪು ಅಡ್ಡಗಾಲು ಹಾಕಿದೆ. ಶಾಸಕ ಬಸನಗೌಡ ಪಾಟೀಲ ಯತ್ನಾಳ ನೇತೃತ್ವದಲ್ಲಿ ಭಿನ್ನರ ಗುಂಪು ಕಳೆದ ಒಂದು ವಾರದಲ್ಲಿ ಎರಡು ಸಭೆಗಳನ್ನು ನಡೆಸಿದೆ.

9ನೇ ಪುಟ ನೋಡಿ

'ರಾಜೀನಾಮೆ ಕೊಟ್ಟು ಚುನಾವಣೆ ಎದುರಿಸಲಿ'



ದಾವಣಗೆರೆ: 'ಶಾಸಕ ಸ್ಥಾನಕ್ಕೆ ವಿಜಯೇಂದ್ರ ರಾಜೀನಾಮೆ ನೀಡಿ ಶಿಕಾರಿಪುರ ಕ್ಷೇತ್ರದಲ್ಲಿ ಮರುಚುನಾವಣೆ ಎದುರಿಸಲಿ' ಎಂದು ಹರಿಹರ ಶಾಸಕ ಬಿ.ಪಿ. ಹರೀಶ್ ಒತ್ತಾಯಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ವಿಜಯೇಂದ್ರ ಶಾಸಕ ಸ್ಥಾನ ಕಾಂಗ್ರೆಸ್ ಭಿಕ್ಷೆ' ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಆರೋಪ ಮಾಡಿದ್ದಾರೆ. ಕಾಂಗ್ರೆಸ್ ಮತ್ತು ಬಿಜೆಪಿ ನಾಯಕರ ನಡುವಿನ ಹೊಂದಾಣಿಕೆ ರಾಜಕಾರಣದ ಆರೋಪಕ್ಕೆ ಇದು ಪುಷ್ಟಿ ನೀಡಿದೆ. ಇಂತಹ ಬ್ಲ್ಯಾಕ್‌ಮೇಲ್‌ಗೆ ಬಿ.ಎಸ್.ಯಡಿಯೂರಪ್ಪ ಕುಟುಂಬ ಸರಿಯಾಗಿ ಪ್ರತಿಕ್ರಿಯಿಸಬೇಕು. ಕಾಂಗ್ರೆಸ್ ಭಿಕ್ಷೆಯಿಂದ ಶಾಸಕರಾಗುವ ಅನಿವಾರ್ಯ ಬಿಜೆಪಿ ನಾಯಕರಿಗೆ ಇಲ್ಲ ಎಂಬುದನ್ನು ತೋರಿಸಬೇಕು' ಎಂದರು.

'ಹೋರಾಟ, ಪಕ್ಷ ಸಂಘಟನೆಯಿಂದ ವಿಮುಖರಾಗಿರುವ ಯಡಿಯೂರಪ್ಪ ಶ್ರೀಮಂತ ಕುಟುಂಬಗಳ ಸಖ್ಯ ಬಯಸುತ್ತಿದ್ದಾರೆ. ದಾವಣಗೆರೆ ಜಿಲ್ಲೆಯಲ್ಲಿ ಶಾಮನೂರು ಶಿವಶಂಕರಪ್ಪ ಕುಟುಂಬದೊಂದಿಗೆ ಹೊಂದಾಣಿಕೆ ಮಾಡಿಕೊಂಡಿದ್ದಾರೆ. ಸಂಸದ ಬಸವರಾಜ ಬೊಮ್ಮಾಯಿ ಕೂಡ ಇವರೊಂದಿಗೆ ಕೈಜೋಡಿಸಿದ್ದಾರೆ. ಈ ಬಗ್ಗೆ ಪಕ್ಷದ ವರಿಷ್ಠರಿಗೆ ದೂರು ನೀಡಿದರೂ ಪ್ರಯೋಜನವಾಗಿಲ್ಲ' ಎಂದು ಹೇಳಿದರು.

'ರಾಜ್ಯದಲ್ಲಿ ನಡೆಯುತ್ತಿರುವ ಹೊಂದಾಣಿಕೆ ರಾಜಕಾರಣ ಅಸಹ್ಯ ಹುಟ್ಟಿಸಿದೆ. ಕಾಂಗ್ರೆಸ್ ಮತ್ತು ಬಿಜೆಪಿ ನಾಯಕರು ಭ್ರಷ್ಟಾಚಾರ ಮುಚ್ಚಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಚುನಾವಣೆಯಲ್ಲಿ ಹೊಂದಾಣಿಕೆ ಮಾಡಿಕೊಳ್ಳುತ್ತಿರುವ ಮುಖಂಡರಿಗೆ ತಕ್ಕ ಪಾಠ ಕಲಿಸಲಿದ್ದೇವೆ' ಎಂದರು.


'ವಿಜಯೇಂದ್ರ ಮಾಡಿರುವ ತಪ್ಪುಗಳನ್ನು ಪಕ್ಷದ ವರಿಷ್ಠರ ಗಮನಕ್ಕೆ ತರಲಾಗುತ್ತದೆ. ಪಕ್ಷಕ್ಕೆ ಪರ್ಯಾಯ ನಾಯಕರ ಅಗತ್ಯವಿದ್ದು, ಹೈಕಮಾಂಡ್ ಒಪ್ಪಿಗೆ ಪಡೆದು ಮುಂದುವರಿಯುತ್ತೇವೆ' ಎಂದು ಹೇಳಿದರು.

'ಭಿನ್ನರ 'ರಾಗ'; ಕೆಲವು ವಿಚಾರ ಸರಿ'



ಧಾರವಾಡ: 'ಬಸನಗೌಡ ಪಾಟೀಲ ಯತ್ನಾಳ, ರಮೇಶ ಜಾರಕಿಹೊಳಿ ಹಾಗೂ ಜಿ.ಎಂ.ಸಿದ್ಧೇಶ್ವರ ಅವರು ಹೇಳಿರುವ ಕೆಲವು ವಿಚಾರಗಳು ಸರಿ ಇವೆ. ಅವರ ನಡೆಗೆ ಸಂಬಂಧಿಸಿದಂತೆ ಪಕ್ಷದ ಆಂತರಿಕ ವೇದಿಕೆಯಲ್ಲಿ ಚರ್ಚಿಸಲಾಗುವುದು' ಎಂದು ವಿರೋಧಪಕ್ಷದ ಉಪನಾಯಕ ಅರವಿಂದ ಬೆಲ್ಲದ ಪ್ರತಿಕ್ರಿಯಿಸಿದರು. 'ಎಲ್ಲ ಪಕ್ಷಗಳಲ್ಲೂ ಸಮಸ್ಯೆಗಳು ಇರುತ್ತವೆ. ಪಕ್ಷದ ಆಂತರಿಕ ವೇದಿಕೆಯಲ್ಲಿ ಚರ್ಚಿಸಿ ಸಮಸ್ಯೆ ಪರಿಹರಿಸಲು ಪ್ರಯತ್ನಿಸಲಾಗುವುದು' ಎಂದರು.

'ವರಿಷ್ಠರು ಒಪ್ಪಿದರೆ ಬಳ್ಳಾರಿಗೆ ಪಾದಯಾತ್ರೆ'



ಹೊಸಪೇಟೆ: 'ನಮಗೆ ಇರುವುದು ಒಂದೇ ಹೈಕಮಾಂಡ್. ಪಕ್ಷದ ವರಿಷ್ಠರಾದ ನಡ್ಡಾ, ಸಂತೋಷ್ ಸಮ್ಮತಿಸಿದರೆ ಮಾತ್ರ ಪಾದಯಾತ್ರೆ ಮಾಡುತ್ತೇವೆ' ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದರು. 'ಬಿಜೆಪಿಯ ಕೆಲ ನಾಯಕರು ಬಳ್ಳಾರಿಗೆ ಪಾದಯಾತ್ರೆ ನಡೆಸುವ ಬಗ್ಗೆ ಪಕ್ಷದ ವೇದಿಕೆಯಲ್ಲಿ ಚರ್ಚೆ ಆಗಿಲ್ಲ. ವರಿಷ್ಠರಿಂದ ಒಪ್ಪಿಗೆ ಸಿಕ್ಕಿಲ್ಲ' ಎಂದೂ ಹೇಳಿದರು.



ಗೇಟ್‌ಗೆ ಅಳವಡಿಸಲು ಸೋಮವಾರ ಪ್ಲೇಟ್‌ಗಳ ತಯಾರಿಕೆಯಲ್ಲಿ ಕಾರ್ಮಿಕರು ತೊಡಗಿದ್ದರು —ಪ್ರಜಾವಾಣಿ ಚಿತ್ರ/ಭರತ್ ಕಂದಕೂರ

ಸಿದ್ಧವಾಗುತ್ತಿದೆ ತಾತ್ಕಾಲಿಕ ಗೇಟ್

• ಪ್ರಮೋದ ಕುಲಕರ್ಣಿ

ಕೊಪ್ಪಳ: ತುಂಗಭದ್ರಾ ಜಲಾಶಯದ 19ನೇ ಕ್ರಸ್ಟ್‌ಗೇಟ್ ಎರಡು ದಿನಗಳ ಹಿಂದೆ ನೀರಿನಲ್ಲಿ ಕೊಚ್ಚಿಹೋಗಿದ್ದರಿಂದ ಹೊಸ ಗೇಟ್ ಅಳವಡಿಸಲು ಎರಡು ಕಂಪನಿಗಳ 60ಕ್ಕೂ ಹೆಚ್ಚು ಕಾರ್ಮಿಕರು ಪ್ರತ್ಯೇಕ ಸ್ಥಳಗಳಲ್ಲಿ ಹಗಲಿರುಳು ಕೆಲಸ ಮಾಡುತ್ತಿದ್ದಾರೆ.

ಕೊಚ್ಚಿ ಹೋಗಿರುವ ಗೇಟ್ 20 ಅಡಿ ಎತ್ತರ, 60 ಅಡಿ ಅಗಲವಿತ್ತು. ಈಗ ಇದನ್ನು ಹೊಸಪೇಟೆಯ ನಾರಾಯಣ ಎಂಜಿನಿಯರಿಂಗ್ ಕಂಪನಿ ಹೊಸಪೇಟೆಯಲ್ಲಿ, ಹಿಂದೂಸ್ತಾನ್ ಎಂಜಿನಿಯರಿಂಗ್ ಕಂಪನಿ ಕೊಪ್ಪಳ ತಾಲ್ಲೂಕಿನ ಹೊಸಳ್ಳಿಯ ಶೆಡ್‌ನಲ್ಲಿ ತಯಾರು ಮಾಡುತ್ತಿವೆ.

ಶರವೇಗದಲ್ಲಿ ಗೇಟ್ ತಯಾರಿಸಲು ನಮ್ಮ ಕಾರ್ಮಿಕರು ಹಗಲಿರುಳು ಕೆಲಸ ಮಾಡುತ್ತಿದ್ದಾರೆ. 3-4 ದಿನಗಳಲ್ಲಿ ಕೆಲಸ ಮುಗಿಯುವ ವಿಶ್ವಾಸವಿದೆ
ಆಶ್ರಫ್ ಖಲೀಮ್,
ಹಿಂದೂಸ್ತಾನ್ ಕಂಪನಿ ವ್ಯವಸ್ಥಾಪಕ

ಗೇಟ್‌ಗೆ ಒಟ್ಟು ಐದು ಬಾಕ್ಸ್‌ಗಳನ್ನು ಅಳವಡಿಸಲಾಗುತ್ತಿದ್ದು, ಪ್ರತಿ ಬಾಕ್ಸ್ ನಾಲ್ಕು ಅಡಿ ಎತ್ತರ ಇರಲಿದೆ. ನೀರು ರಭಸದಿಂದ ಹರಿದು ಹೋಗುವುದಕ್ಕೆ ತ್ವರಿತವಾಗಿ ಕಡಿವಾಣ ಹಾಕಲು ಶಾಶ್ವತ ಗೇಟ್ ಬದಲಿಗೆ ತಾತ್ಕಾಲಿಕವಾಗಿ 'ಸ್ಟಾಪ್ ಲಾಗ್ ಗೇಟ್' ಮಾತ್ರ ಅಳವಡಿಸುವ ಸಾಧ್ಯತೆಯಿದೆ ಎಂದು ತುಂಗಭದ್ರಾ ಮಂಡಳಿಯ ಮೂಲಗಳು ತಿಳಿಸಿವೆ.

8ನೇ ಪುಟ ನೋಡಿ

ನಗರದಲ್ಲಿ ಇಂದು

'ಮಾಧವನ ವಿಜಯ' ನಾಟಕ ಪ್ರದರ್ಶನ: ಉದ್ಘಾಟನೆ: ರಮೇಶ್ ಡಿ.ಎಸ್., ಅತಿಥಿಗಳು: ಎಂ. ಜಗದೀಶ್, ಜಿ. ಕುಸುಮ, ಅಧ್ಯಕ್ಷತೆ: ಲಾವಣ್ಯ, ಆಯೋಜನೆ: ವಿನಾಯಕ ಕಲಾ ಬಳಗ ಟ್ರಸ್ಟ್, ಸ್ಥಳ: ಎಂ.ಆರ್. ಮರಿಗೌಡ ಸಭಾಂಗಣ, ಲಾಲ್‌ಬಾಗ್, ಬೆಳಿಗ್ಗೆ 10.30

ದೇವರನಾಮಗಳು: ದಿವ್ಯಾ ಗಿರಿಧರ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಆರನೇ ಅಡ್ಡ ರಸ್ತೆ, ಈಜುಕೊಳ ಬಡಾವಣೆ, ಸಂಜೆ 6.30

'ಫೂಲನ್ ದೇವಿ' ನಾಟಕ ಪ್ರದರ್ಶನ : ಆಯೋಜನೆ: ರಂಗಪಯಣ ಟ್ರಸ್ಟ್, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 7

ಸುಧಾ, ಮಯೂರ ಓದಿ

ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ ಯೋಜನೆ • ನೂರು ಪುಸ್ತಕಗಳನ್ನು ಪ್ರಕಟಿಸಿ ವಿತರಣೆ

ಶಾಲೆ, ಕಾಲೇಜುಗಳಲ್ಲಿ 'ಸೌಹಾರ್ದ ಸಂಸ್ಕೃತಿ'

• ವರುಣ ಹೆಗಡೆ

ಬೆಂಗಳೂರು: ರಾಜ್ಯದ ಶಾಲೆ, ಕಾಲೇಜುಗಳಲ್ಲಿನ ವಿದ್ಯಾರ್ಥಿಗಳಲ್ಲಿ ಪರಸ್ಪರ ಸೌಹಾರ್ದ ಮೂಡಿಸಲು ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಮುಂದಾಗಿದೆ. ಇದಕ್ಕಾಗಿ ಪುಸ್ತಕಗಳನ್ನು ಪ್ರಕಟಿಸಿ ವಿತರಿಸುವ ಜತೆಗೆ ಸೌಹಾರ್ದ ಸಮಾವೇಶಗಳನ್ನು ಹಮ್ಮಿಕೊಳ್ಳಲು ಕಾರ್ಯಯೋಜನೆ ರೂಪಿಸಿದೆ.

'ಸರ್ವಜನಾಂಗದ ಶಾಂತಿಯ ತೋಟ' ಎಂಬ ಪರಿಕಲ್ಪನೆಯಡಿ ಈ ಯೋಜನೆಯನ್ನು ಪ್ರಾಧಿಕಾರ ಹಮ್ಮಿಕೊಂಡಿದೆ. ಕರ್ನಾಟಕ ಸಂಸ್ಕೃತಿಯಲ್ಲಿ ಬೇರೆ ಬೇರೆ ಸಮುದಾಯದವರು, ಧರ್ಮದವರು ಒಟ್ಟಿಗೆ ಬದುಕಿರುವುದು ಹಾಗೂ ಅವರು ನೀಡಿದ ಕೊಡುಗೆಗಳನ್ನು ತಿಳಿಸುವುದು ಈ ಯೋಜನೆಯ ಉದ್ದೇಶ.

'ಕರ್ನಾಟಕ ಸೌಹಾರ್ದ ಸಂಸ್ಕೃತಿ' ಮಾಲಿಕೆಯಡಿ ತಲಾ 72 ಪುಟಗಳ ನೂರು ಪುಸ್ತಕಗಳನ್ನು ಪ್ರಕಟಿಸಲು ಪ್ರಾಧಿಕಾರ ಮುಂದಾಗಿದೆ. ಈ ಪುಸ್ತಕಗಳನ್ನು ತಲಾ ₹10ಕ್ಕೆ ಪ್ರೌಢಶಾಲೆ ಹಾಗೂ ಕಾಲೇಜು ವಿದ್ಯಾರ್ಥಿಗಳಿಗೆ ವಿತರಿಸಲಿದೆ. ಇದಕ್ಕೆ ಪೂರಕವಾಗಿ ರಾಜ್ಯದ ವಿವಿಧೆಡೆ ಉಪನ್ಯಾಸ ಹಾಗೂ ಸೌಹಾರ್ದ ಸಮಾವೇಶವನ್ನೂ ಹಮ್ಮಿಕೊಳ್ಳಲು ನಿರ್ಧರಿಸಿದೆ.

ಮೈಲಾರಲಿಂಗ ಸೇರಿ ವಿವಿಧ ಮಹಾಪುರುಷರು, ಮಲೆ ಮಹದೇಶ್ವರ ಬೆಟ್ಟ, ಮೇಲುಕೋಟೆ ಸೇರಿ ಹಲವು ಐತಿಹಾಸಿಕ ಸ್ಥಳಗಳ ಬಗ್ಗೆ ಪ್ರಾಧಿಕಾರವು ಪುಸ್ತಕ ಪ್ರಕಟಿಸಲಿದೆ. ಇದರ ಜತೆಗೆ ಜೈನ, ಬೌದ್ಧ ಸೇರಿ ವಿವಿಧ ಧರ್ಮಗಳು ನಾಡಿಗೆ ನೀಡಿದ ಕೊಡುಗೆಗಳ ಬಗ್ಗೆಯೂ ಪುಸ್ತಕಗಳನ್ನು ಹೊರತರಲಿದೆ.

ಪಿಎಚ್‌.ಡಿ. ಅಭ್ಯರ್ಥಿಗಳ ಬಳಕೆ: ಪುಸ್ತಕಗಳ ಪ್ರಕಟಣೆಗೆ ಸಂಬಂಧಿಸಿದಂತೆ ಪ್ರಾಧಿಕಾರವು ಪಿಎಚ್‌.ಡಿ. ಅಭ್ಯರ್ಥಿಗಳಿಗೆ ಕಾರ್ಯಾಗಾರ ನಡೆಸಿ, ಬರವಣಿಗೆಗೆ ಸಾಹಿತ್ಯ ಕ್ಷೇತ್ರದ ಪ್ರಮುಖರಿಂದ ಮಾರ್ಗದರ್ಶನ ಒದಗಿಸಲಿದೆ. ನವೆಂಬರ್ ಅಥವಾ ಡಿಸೆಂಬರ್ ವೇಳೆಗೆ ಪುಸ್ತಕ ಪ್ರಕಟಣೆ ಕಾರ್ಯ ಪೂರ್ಣಗೊಳಿಸುವ ಗುರಿ ಇದೆ.

'ಶಾಲಾ–ಕಾಲೇಜು ಹಂತದಲ್ಲಿಯೇ ಪರಸ್ಪರ ಸೌಹಾರ್ದ ಮೂಡಿಸಬೇಕಿದೆ. ಆದ್ದರಿಂದ ಪುಸ್ತಕ ವಿತರಣೆ ಹಾಗೂ ಸಮಾವೇಶ ನಡೆಸಲು ಯೋಜನೆ ರೂಪಿಸಲಾಗಿದೆ. ಸಂಶೋಧನಾ ಅಭ್ಯರ್ಥಿಗಳಿಂದ ಸರಳ ಭಾಷೆಯಲ್ಲಿ ಪುಸ್ತಕಗಳನ್ನು ಹೊರತರಲಾಗುತ್ತದೆ' ಎಂದು ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ತಿಳಿಸಿದರು.

ಊರಿನ ಹೆಸರು ಉಳಿಸುವ ಅಭಿಯಾನ

ಮರೆಯಾಗುತ್ತಿರುವ ಊರಿನ ಹೆಸರುಗಳನ್ನು ಉಳಿಸುವ ಅಭಿಯಾನ ಹಮ್ಮಿಕೊಳ್ಳಲು ಪ್ರಾಧಿಕಾರವು ಮುಂದಾಗಿದೆ. ಕನ್ನಡದಲ್ಲಿ ಸುಮಾರು 65 ಸಾವಿರ ಊರಿನ ಹೆಸರುಗಳಿವೆ ಎಂಬುದನ್ನು ಪ್ರಾಧಿಕಾರ ಗುರುತಿಸಿದ್ದು, ಆ ಹೆಸರನ್ನು ಶಾಶ್ವತವಾಗಿ ಉಳಿಸಲು ಕ್ರಮವಹಿಸಿದೆ. ಇದಕ್ಕೆ ಎನ್‌ಎಸ್‌ಎಸ್ ಘಟಕಗಳಲ್ಲಿ ಸಕ್ರಿಯವಾಗಿರುವ ವಿದ್ಯಾರ್ಥಿಗಳನ್ನು ಬಳಸಿಕೊಳ್ಳಲಿದೆ. ಅವರ ನೆರವಿನಿಂದ ಸರ್ಕಾರಿ ಕಚೇರಿಗಳು, ಶಾಲೆಗಳು, ಅಂಗಡಿಗಳು ಸೇರಿ ವಿವಿಧೆಡೆ ನಾಮಫಲಕಗಳಲ್ಲಿ ಆಯಾ ಊರುಗಳ ಹೆಸರನ್ನು ಅಳವಡಿಕೆ ಮಾಡಲಿದೆ.



ಕರ್ನಾಟಕ ಹಿಂದೆ ಸರ್ವಜನಾಂಗದ ಶಾಂತಿಯ ತೋಟವಾಗಿತ್ತು. ಅದನ್ನು ಹೊಸ ತಲೆಮಾರಿನವರಿಗೆ ತಿಳಿಸಬೇಕಿದೆ. ಆ ಕೆಲಸ ಮಾಡುತ್ತಿದ್ದೇವೆ.

ಪುರುಷೋತ್ತಮ ಬಿಳಿಮಲೆ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ

'ಕೇಬಲ್‌ಗೆ ಹಾನಿ: ದಂಡ ವಿಧಿಸಲು ನಿಯಮ ರೂಪಿಸಿ'

ಪ್ರಜಾವಾಣಿ

ಬೆಂಗಳೂರು: ನಗರದಲ್ಲಿ ಬೆಸ್ಕಾಂ ಅಳವಡಿಸಿರುವ ವಿದ್ಯುತ್ ಪೂರೈಕೆಯ ಭೂಗತ ಕೇಬಲ್‌ಗಳಿಗೆ ಹಾನಿ ಮಾಡುವವರಿಗೆ ದಂಡ ವಿಧಿಸಲು ನಿಯಮ ರೂಪಿಸುವಂತೆ ಇಂಧನ ಸಚಿವ ಕೆ.ಜೆ.ಜಾರ್ಜ್ ಅಧಿಕಾರಿಗಳಿಗೆ ಸೂಚಿಸಿದರು.

'ಕೆಲವು ಖಾಸಗಿ ಕಂಪನಿಗಳು ರಸ್ತೆ ಅಗೆದು ತಮ್ಮ ಕೇಬಲ್ ಅಳವಡಿಸುವಾಗ ಬೆಸ್ಕಾಂನ ಭೂಗತ ಕೇಬಲ್‌ಗಳಿಗೆ ಹಾನಿ ಮಾಡುತ್ತಿವೆ. ಇದರಿಂದ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗುತ್ತಿದೆ. ಆರ್ಥಿಕ ನಷ್ಟ ಆಗುತ್ತದೆ. ಹೀಗಾಗಿ ಬೆಸ್ಕಾಂ ಕೇಬಲ್ ಇರುವ ಜಾಗವನ್ನು ಗುರುತು ಮಾಡಬೇಕು. ಅದಕ್ಕೆ ಹಾನಿ ಮಾಡುವವರಿಗೆ ಹೆಚ್ಚು ಮೊತ್ತದ ದಂಡ ವಿಧಿಸಲು ನಿಯಮ ರೂಪಿಸಬೇಕು. ತಕ್ಷಣದಿಂದಲೇ ಇದನ್ನು ಜಾರಿಗೊಳಿಸಲು ಕ್ರಮ ಕೈಗೊಳ್ಳಬೇಕು' ಎಂದರು.

ನಗರದಲ್ಲಿ ವಿದ್ಯುತ್ ಪೂರೈಸುವ ಭೂಗತ ಕೇಬಲ್ ಮತ್ತು ಏರಿಯಲ್ ಬಂಚ್ಡ್ ಕೇಬಲ್ ಅಳವಡಿಕೆ ಕಾರ್ಯ ಶೇ 97ರಷ್ಟು ಆಗಿದ್ದು, ಬಾಕಿ ಕೆಲಸ ತ್ವರಿತಗೊಳಿಸುವಂತೆ ಸೂಚಿಸಿದರು.

ಸರ್ಕಾರಿ ಎಂಜಿನಿಯರಿಂಗ್, ಪಾಲಿಟೆಕ್ನಿಕ್: ಗೌರವಧನ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಾಂತ್ರಿಕ ಶಿಕ್ಷಣ ಇಲಾಖೆ ವ್ಯಾಪ್ತಿಯ ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳು, ಸರ್ಕಾರಿ ಪಾಲಿಟೆಕ್ನಿಕ್‌ಗಳು ಮತ್ತು ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳ ಅರೆಕಾಲಿಕ ಉಪನ್ಯಾಸಕರ ವಿದ್ಯಾರ್ಹತೆ ಮತ್ತು ಸಲ್ಲಿಸಿದ ಸೇವಾ ಅವಧಿ ಪರಿಗಣಿಸಿ, ತಿಂಗಳ ಗೌರವಧನವನ್ನು ಹೆಚ್ಚಿಸಿ ಉನ್ನತ ಶಿಕ್ಷಣ ಇಲಾಖೆ ಸೋಮವಾರ ಆದೇಶ ಹೊರಡಿಸಿದೆ.

ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳು, ಪಾಲಿಟೆಕ್ನಿಕ್‌ಗಳು ಮತ್ತು ಕಿರಿಯ ತಾಂತ್ರಿಕ ಶಾಲೆಗಳಲ್ಲಿ ಕೆಲಸ ಮಾಡುವ ಅರೆಕಾಲಿಕ ಉಪನ್ಯಾಸಕರಿಗೆ ಕ್ರಮವಾಗಿ ಹಾಲಿ ಗರಿಷ್ಠ 8, 9, 9 ಗಂಟೆಗಳ ಕಾರ್ಯಭಾರಕ್ಕೆ ಬದಲಾಗಿ, ವಾರಕ್ಕೆ 15, 17, 14 ಗಂಟೆಗಳ ಕಾರ್ಯಭಾರ ನಿಗದಿಪಡಿಸಿ ಗೌರವಧನ ಪರಿಷ್ಕರಿಸಲಾಗಿದೆ ಎಂದೂ ಆದೇಶದಲ್ಲಿ ವಿವರಿಸಲಾಗಿದೆ.

ಪ್ರಸಕ್ತ ಸಾಲಿನಲ್ಲಿ ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳಿಗೆ 294, ಪಾಲಿಟೆಕ್ನಿಕ್, ಕಿರಿಯ ತಾಂತ್ರಿಕ ಶಾಲೆಗಳಿಗೆ 1,600 ಸೇರಿ ಒಟ್ಟು 1,894 ಅರೆಕಾಲಿಕ ಉಪನ್ಯಾಸಕರನ್ನು ಮಾತ್ರ ನೇಮಕ ಮಾಡಿಕೊಳ್ಳಬೇಕು. ಗೌರವಧನ ಹೆಚ್ಚಳದಿಂದ ಆಗುವ ವೆಚ್ಚವನ್ನು ಪ್ರಸಕ್ತ ಸಾಲಿನಲ್ಲಿ ಒದಗಿಸಿದ ಅನುದಾನದಿಂದ ಭರಿಸಿ, ಆ ಅನುದಾನ ಸಂಪೂರ್ಣ ವೆಚ್ಚವಾದ ಬಳಿಕ ಹೆಚ್ಚುವರಿ ಅನುದಾನ ಅಗತ್ಯವಿದ್ದರೆ ಪ್ರಸ್ತಾವ ಸಲ್ಲಿಸಬೇಕು ಎಂದೂ ಷರತ್ತು ವಿಧಿಸಲಾಗಿದೆ.

ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳ ಅರೆಕಾಲಿಕ ಉಪನ್ಯಾಸಕರು ಪ್ರತಿ ತಿಂಗಳು ಗರಿಷ್ಠ 56 ಗಂಟೆ ಕಾರ್ಯಭಾರ ನಿಭಾಯಿಸಬೇಕಿದ್ದು, ₹18 ಸಾವಿರ ಗೌರವಧನ ನಿಗದಿಪಡಿಸಲಾಗಿದೆ.

ಅರೆಕಾಲಿಕ ಉಪನ್ಯಾಸಕರ ಪರಿಷ್ಕೃತ ಗೌರವಧನ (₹ಗಳಲ್ಲಿ)

ವಿದ್ಯಾರ್ಹತೆ	ಎಂಜಿನಿಯರಿಂಗ್ ಕಾಲೇಜು	ಪಾಲಿಟೆಕ್ನಿಕ್
5 ವರ್ಷಕ್ಕಿಂತ ಹೆಚ್ಚಿನ ಅವಧಿ ಸೇವೆ, ಎಐಸಿಟಿಇ ವಿದ್ಯಾರ್ಹತೆ	32 ಸಾವಿರ	28 ಸಾವಿರ
5 ವರ್ಷಕ್ಕಿಂತ ಕಡಿಮೆ ಅವಧಿ ಸೇವೆ, ಎಐಸಿಟಿಇ ವಿದ್ಯಾರ್ಹತೆ	30 ಸಾವಿರ	26 ಸಾವಿರ
5 ವರ್ಷಕ್ಕಿಂತ ಹೆಚ್ಚಿನ ಅವಧಿ ಸೇವೆ, ಎಐಸಿಟಿಇ ವಿದ್ಯಾರ್ಹತೆ ಇಲ್ಲದವರು	28 ಸಾವಿರ	24 ಸಾವಿರ
5 ವರ್ಷಕ್ಕಿಂತ ಕಡಿಮೆ ಅವಧಿ ಸೇವೆ, ಎಐಸಿಟಿಇ ವಿದ್ಯಾರ್ಹತೆ ಇಲ್ಲದವರು	26 ಸಾವಿರ	22 ಸಾವಿರ

ಸುದ್ದಿ 2 ನಿಮಿಷ

ನಾನು ದಲಿತನೆಂದು ಹೀಗೆ ನಡೆದುಕೊಳ್ಳುತ್ತಿದ್ದಾರಾ?: ಛಲವಾದಿ

ಬೆಂಗಳೂರು: 'ವಿರೋಧ ಪಕ್ಷದ ನಾಯಕನಿಗೆ ಒದಗಿಸಬೇಕಾದ ಸೌಲಭ್ಯ ನೀಡದೇ ಶಿಷ್ಟಾಚಾರ ಉಲ್ಲಂಘಿಸಲಾಗಿದೆ. ನಾನು ದಲಿತ ಎನ್ನುವ ಕಾರಣಕ್ಕೆ ಹೀಗೆ ನಡೆದುಕೊಳ್ಳುತ್ತಿದ್ದಾರಾ' ಎಂದು ವಿಧಾನ ಪರಿಷತ್‌ನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಪ್ರಶ್ನಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, 'ನನಗೆ ಸರ್ಕಾರಿ ಮನೆ ಕೊಟ್ಟಿಲ್ಲ. ಕೇವಲ ಒಬ್ಬ ಗನ್ ಮ್ಯಾನ್ ನೀಡಿದ್ದಾರೆ. ಬೆಂಗಾವಲು ಪಡೆ ನೀಡುವಂತೆ ಡಿಐಜಿಗೆ ಪತ್ರ ಬರೆದಿದ್ದೇನೆ. ಸಭೆ ಮಾಡಿ ಪರಿಶೀಲಿಸುವುದಾಗಿ ಅವರು ತಿಳಿಸಿದ್ದಾರೆ. ನನಗೆ ಗನ್ ಮ್ಯಾನ್, ಕಾರು ಯಾವುದೂ ಬೇಡ. ಕೊಟ್ಟಿರುವ ಒಬ್ಬ ಗನ್ ಮ್ಯಾನ್‌ನನ್ನೂ ವಾಪಸ್ ಕಳುಹಿಸುತ್ತೇನೆ' ಎಂದರು.

'ನನ್ನ ಸ್ಥಾನಮಾನಕ್ಕೆ ತಕ್ಕಂತೆ ಶಿಷ್ಟಾಚಾರ ಪಾಲಿಸಿಲ್ಲ. ಹೀಗಾಗಿ, ನಾನು ಹಕ್ಕುಚ್ಯುತಿ ಮಂಡಿಸುತ್ತೇನೆ' ಎಂದು ಹೇಳಿದರು.

'ನನ್ನ ಮೇಲೆ ಹಗೆತನ ಯಾಕೆ? ನನಗೆ ಕೊಡಬೇಕಾದ ಸವಲತ್ತು ನೀಡಲು ಯಾವಾಗ ಸಭೆ ನಡೆಸುತ್ತೀರಿ? ಇದೆಲ್ಲವನ್ನು ಉದ್ದೇಶಪೂರ್ವಕವಾಗಿ ಮಾಡುತ್ತಿದ್ದಾರೆ' ಎಂದರು.

'ಸಚಿವರಾಗುತ್ತಿದ್ದಂತೆ ಬೆಂಗಾವಲು ಪಡೆ, ಗನ್ ಮ್ಯಾನ್, ಕಾರು ಬರುತ್ತದೆ. ಆದರೆ, ನಾನು ವಿರೋಧ ಪಕ್ಷದ ನಾಯಕನಾಗಿ ಅಧಿಕಾರ ವಹಿಸಿಕೊಂಡು 20 ದಿನ ಕಳೆದರೂ ಯಾವ ಸೌಲಭ್ಯಗಳನ್ನೂ ಕೊಟ್ಟಿಲ್ಲ' ಎಂದರು.



ಆನಂದನಗರ ಮ್ಯಾಜಿಕ್ ಬಾಕ್ಸ್ ಬಳಿ ಸಂಚಾರ ನಿರ್ಬಂಧ

ಬೆಂಗಳೂರು: ಬಳ್ಳಾರಿ ರಸ್ತೆಯ ಆನಂದನಗರ ಮ್ಯಾಜಿಕ್ ಬಾಕ್ಸ್ ಸರ್ವಿಸ್ ರಸ್ತೆ ಬಳಿ (ನಗರದ ಕಡೆಗೆ ಅಂತರರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಡೆಗೆ) ರಸ್ತೆ ಡಾಂಬರೀಕರಣ ಕಾಮಗಾರಿ ಆರಂಭವಾಗಿದ್ದು, ಆಗಸ್ಟ್ 14ರ ವರೆಗೆ ಆನಂದನಗರದ ಮ್ಯಾಜಿಕ್ ಬಾಕ್ಸ್ ಬಳಿ ವಾಹನ ಸಂಚಾರ ಸಂಪೂರ್ಣ ನಿರ್ಬಂಧಿಸಲಾಗಿದೆ.

ವಾಹನ ಸಂಚಾರಕ್ಕೆ ಪರ್ಯಾಯ ಮಾರ್ಗ ಕಲ್ಪಿಸಲಾಗಿದೆ ಎಂದು ನಗರ ಸಂಚಾರ ಪೊಲೀಸರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಜಯನಗರ ಕ್ರಾಸ್ ಕಡೆಯಿಂದ ಆನಂದನಗರಕ್ಕೆ ಹೋಗುವ ವಾಹನಗಳು ಪಶುವೈದ್ಯಕೀಯ ಕಾಲೇಜು ಬಳಿ ಸರ್ವಿಸ್ ರಸ್ತೆಯ ಮೂಲಕ ಚಲಿಸಿ, ಕೆ–2 ಬಸ್ ನಿಲ್ದಾಣದ ಬಳಿ ಯು–ಟರ್ನ್ ಪಡೆದು, ನಂತರ ಸರ್ವಿಸ್ ರಸ್ತೆ ಮೂಲಕ ಬ್ಯಾಪ್ಟಿಸ್ಟ್ ಆಸ್ಪತ್ರೆ ಎದುರು ಸಾಗಿ ಆನಂದನಗರ ಕ್ರಾಸ್ ಬಳಿ ಎಡಕ್ಕೆ ತಿರುವು ಪಡೆದು ಸಾಗಬೇಕು.

ಆನಂದನಗರ ಕ್ರಾಸ್‌ನಿಂದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಡೆಗೆ ಚಲಿಸುವವರು ಸಿಬಿಐ ಸರ್ವಿಸ್ ರಸ್ತೆಯಲ್ಲಿ ಎಡಕ್ಕೆ ಚಲಿಸಿ ಸಿಬಿಐ ಜಂಕ್ಷನ್ ಬಳಿಯಿರುವ ಮ್ಯಾಜಿಕ್ ಬಾಕ್ಸ್ ಬಳಿ ಬಲಕ್ಕೆ ತಿರುಗಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಡೆಗೆ ಸಾಗಬೇಕು ಎಂದು ಸೂಚಿಸಿದ್ದಾರೆ.

ವರ್ಣ ಜಾತಿಗಳಲ್ಲ, ಮನು ಬ್ರಾಹ್ಮಣ ಅಲ್ಲ: ನ್ಯಾ.ದೀಕ್ಷಿತ್



ಹೈಕೋರ್ಟ್ ನ್ಯಾಯಮೂರ್ತಿ ಕೃಷ್ಣ ಎಸ್‌. ದೀಕ್ಷಿತ್ 'ಕಾನೂನು ಮತ್ತು ಧರ್ಮ' ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ಹಿರಿಯ ವಕೀಲ ಡಿ.ಎಲ್‌.ಎನ್‌. ರಾವ್, ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್‌.ವಿ.ಅಂಜಾರಿಯಾ, ಆಂಧ್ರಪ್ರದೇಶದ ರಾಜ್ಯಪಾಲ ಎಸ್‌. ಅಬ್ದುಲ್ ನಜೀರ್ ಇದ್ದರು.

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವರ್ಣಗಳು ಜಾತಿಗಳಲ್ಲ. ಮನು ಬ್ರಾಹ್ಮಣ ಅಲ್ಲ. ಅದೊಂದು ಹುದ್ದೆ. ಮನುಸ್ಮೃತಿ ಅನೇಕ ಹಿರಿದಾದ ತತ್ವಗಳನ್ನು ಒಳಗೊಂಡಿದೆ. ಭಾರತದ ಮಹಾಕಾವ್ಯಗಳು, ವೇದ, ಉಪನಿಷತ್ತುಗಳು ಅತಿ ಶೂದ್ರರಿಂದಲೇ ರಚಿತವಾಗಿವೆ. ಖಡ್ಗ ಸಂಸ್ಕಾರದಿಂದ ಶೂದ್ರರು, ರಾಜರೂ ಆಗಿ ಹೋಗಿದ್ದಾರೆ. ವಿಶ್ವದ ಬೇರೆಲ್ಲಾ ಧರ್ಮಗಳಿಗಿಂತಲೂ ನಮ್ಮ ಕಾನೂನುಗಳು ರೂಪುಗೊಳ್ಳುವಲ್ಲಿ ಹಿಂದೂ ಧರ್ಮದ ಹಿರಿಮೆ ಸದಾ ಗಾಢವಾದ ಪಾತ್ರ ವಹಿಸಿದೆ' ಎಂದು ಹೈಕೋರ್ಟ್ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅಭಿಪ್ರಾಯಪಟ್ಟರು.

ಹೈಕೋರ್ಟ್‌ನ ಹಿರಿಯ ವಕೀಲ ದಿವಂಗತ ವಿ.ತಾರಕರಾಮ್ ಸ್ಮರಣಾರ್ಥ ಸೋಮವಾರ 'ಕಾನೂನು ಮತ್ತು ಧರ್ಮ' ಕುರಿತು ಉಪನ್ಯಾಸ ನೀಡಿದ ಅವರು, 'ಎಲ್ಲ ದೇಶಗಳಲ್ಲಿನ ಕಾನೂನುಗಳೂ ಸ್ಥಳೀಯ ಶಾಸನಗಳು, ಆಚರಣೆ ಮತ್ತು ಪೂರ್ವನಿದರ್ಶನಗಳ ತಹಳಹದಿಯ ಮೇಲೆ ರೂಪುಗೊಳ್ಳುತ್ತಾ ಬಂದಿವೆ. ತರತಮಗಳಿಲ್ಲದ ವ್ಯವಸ್ಥೆಯೇ ಧರ್ಮ' ಎಂದರು.

'ಎಲ್ಲ ಧರ್ಮಗಳಲ್ಲೂ ಕರ್ಮಠರಿದ್ದಾರೆ. ಅವರ ಪ್ರಮಾಣ ಹೆಚ್ಚು ಕಡಿಮೆ ಇದೆ ಅಷ್ಟೇ. ಧರ್ಮ ಭಾವನಾತ್ಮಕ ಅಂಶಗಳನ್ನು ಒಳಗೊಂಡಿದೆ. ಅದಕ್ಕೆಂದೇ ಕಾರ್ಲ್ ಮಾರ್ಕ್ಸ್ ಧರ್ಮ ಅಫೀಮು ಇದ್ದಂತೆ ಎಂದ. ಆದಾಗ್ಯೂ ಯಾವುದೇ ಧರ್ಮವೂ ಟೀಕೆಗೆ ಹೊರತಾಗಿಲ್ಲ. ಯುದ್ಧ ಆರಂಭಕ್ಕೂ ಮುನ್ನ ಯುದ್ಧದ ನಿಯಮಗಳನ್ನು ರೂಪಿಸಿಕೊಂಡ ಬಗೆಯನ್ನು ಮಹಾಭಾರತದಲ್ಲಿ ಕಾಣಬಹುದು. ಆದರೆ, ಯುದ್ಧ ಮತ್ತು ಪ್ರೀತಿಯಲ್ಲಿ ಎಲ್ಲವೂ ಸಲ್ಲುತ್ತದೆ ಎಂಬ ನೀತಿ ಯುರೋಪಿನದ್ದು' ಎಂದರು.

₹5 ಲಕ್ಷಕ್ಕೆ ಅಪರಿಚಿತರಿಂದ ಬೇಡಿಕೆ: ಕಾಡಿ, ಬೇಡಿದ ನಂತರ ಎಫ್ಐಆರ್ ದಾಖಲು

ಟೆಕಿ ಅಪಹರಣ ಶಂಕೆ: ಪತ್ನಿ ಅಳಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಫ್ಟ್‌ವೇರ್ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿರುವ ವಿಪಿನ್ ಗುಪ್ತಾ (37) ಅವರು ಕೆಲವು ದಿನಗಳಿಂದ ನಾಪತ್ತೆ ಆಗಿದ್ದು, ಈ ಸಂಬಂಧ ಕೊಡಿಗೇಹಳ್ಳಿ ಪೊಲೀಸ್ ಠಾಣೆಗೆ ಅವರ ಪತ್ನಿ ದೂರು ನೀಡಿದ್ದಾರೆ.

‘ಬೈಕ್ ತೆಗೆದುಕೊಂಡು ಮನೆಯಿಂದ ಹೋದವರು ಎಂಟು ದಿನ ಕಳೆದರೂ ವಾಪಸ್ ಬಂದಿಲ್ಲ. ದಯವಿಟ್ಟು ಹುಡುಕಿಕೊಡಿ’ ಎಂದು ಹೇಳಿ ವಿಪಿನ್ ಅವರ ಪತ್ನಿ ಶ್ರೀಪರ್ಣಾ ದತ್ ದೂರು ನೀಡಿದ್ದಾರೆ. ಅಲ್ಲದೇ ಅಪಹರಣ ಶಂಕೆ ವ್ಯಕ್ತಪಡಿಸಿದ್ದಾರೆ. ಅಪರಿಚಿತರು ಹಣಕ್ಕೂ ಬೇಡಿಕೆ ಇಟ್ಟಿದ್ದಾರೆ ಎಂದು ‘ಎಕ್ಸ್’ನಲ್ಲಿ ಬರೆದುಕೊಂಡಿದ್ದಾರೆ. ಅಲ್ಲದೇ ತನಿಖೆಗೂ ಆಗ್ರಹಿಸಿದ್ದಾರೆ.

‘ಲಖನೌದ ವಿಪಿನ್ ಗುಪ್ತಾ, ಶ್ರೀಪರ್ಣಾ ಹಾಗೂ ಇಬ್ಬರು ಪುತ್ರಿಯರ ಜತೆಗೆ ಟಾಟಾನಗರದ ಅಪಾರ್ಟ್‌ಮೆಂಟ್‌ನಲ್ಲಿ ನೆಲಸಿದ್ದರು. ವೃತ್ತಿಯಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿರುವ ವಿಪಿನ್ ಗುಪ್ತಾ ಕಳೆದ ಜೂನ್‌ನಲ್ಲಿ ಉದ್ಯೋಗ ತೊರೆದಿದ್ದರು. ಹೊಸ ಉದ್ಯೋಗಕ್ಕಾಗಿ ಹುಡುಕಾಟ ನಡೆಸುತ್ತಿದ್ದರು. ಆ.4ರಂದು ಮಧ್ಯಾಹ್ನ 12.42ಕ್ಕೆ ಮನೆಯಿಂದ ದ್ವಿಚಕ್ರ ವಾಹನ ತೆಗೆದುಕೊಂಡು ಹೊರಗೆ ಹೋಗಿದ್ದರು. ಇದಾದ, 25 ನಿಮಿಷಕ್ಕೆ ಖಾತೆಯಿಂದ ₹1.80 ಲಕ್ಷ ಹಣ ಡ್ರಾ ಆಗಿದೆ. ಅದಾದ ಮೇಲೆ ಅವರು ಮನೆಗೆ ಬಂದಿಲ್ಲ. ಮೊಬೈಲ್ ಸಹ ಸ್ವಿಚ್ಡ್ ಆಫ್ ಆಗಿದೆ’ ಎಂದು ದೂರು ನೀಡಲಾಗಿದೆ.

ವಿಪಿನ್ ಗುಪ್ತಾ ಪತ್ತೆಗೆ ವಿವಿಧ ಆಯಾಮಗಳಲ್ಲಿ ಶೋಧ ಕಾರ್ಯ ನಡೆಯುತ್ತಿದೆ ಎಂದು ಪೊಲೀಸರು ಹೇಳಿದರು.

‘ನನ್ನ ಮೊಬೈಲ್‌ಗೆ ಬ್ಲ್ಯಾಕ್‌ಮೇಲ್ ಸಂದೇಶ ಬರುತ್ತಿದೆ. ಅಪರಿಚಿತರು ₹5 ಲಕ್ಷಕ್ಕೆ ಬೇಡಿಕೆ ಇಡುತ್ತಿದ್ದಾರೆ. ಹಣ ಕೊಡದಿದ್ದಲ್ಲಿ ನಿನ್ನ ಪತಿಯನ್ನು ಕೊಲೆ ಮಾಡುವುದಾಗಿ ಬೆದರಿಸುತ್ತಿದ್ದಾರೆ’ ಎಂದು ಶ್ರೀಪರ್ಣಾ ದತ್ ತಮ್ಮ ‘ಎಕ್ಸ್’ ಖಾತೆಯಲ್ಲಿ ಸ್ಕ್ರೀನ್ ಶಾಟ್ ಹಂಚಿಕೊಂಡು ಆತಂಕ ವ್ಯಕ್ತಪಡಿಸಿದ್ದಾರೆ.

‘ಟೆಕಿ ವಿಪಿನ್ ಗುಪ್ತಾ ಅವರು ಈ ಹಿಂದೆಯೂ ಒಮ್ಮೆ ನಾಪತ್ತೆ ಆಗಿದ್ದರು. ಮೊಬೈಲ್ ಸಹ ಸ್ವಿಚ್ಡ್ ಆಫ್ ಮಾಡಿಕೊಂಡಿದ್ದರು. ಗೋವಾದಲ್ಲಿ ಅವರನ್ನು ಪತ್ತೆ ಹಚ್ಚಲಾಗಿತ್ತು. ಈಗ, ಮತ್ತೆ ಸಹಕಾರ ನಗರದ ಬ್ಯಾಂಕ್‌ನ ತಮ್ಮ ಖಾತೆಯಿಂದ ಹಣ ಡ್ರಾ ಮಾಡಿಕೊಂಡು ನಾಪತ್ತೆ ಆಗಿದ್ದಾರೆ. ತನಿಖೆ ಮುಂದುವರಿದಿದೆ’ ಎಂದು ಈಶಾನ್ಯ ವಿಭಾಗದ ಡಿಸಿಪಿ ವಿ.ಜೆ.ಸಜಿತ್ ತಿಳಿಸಿದ್ದಾರೆ.

ಪೊಲೀಸರ ವಿರುದ್ಧವೂ ಆರೋಪ: ‘ನಾಪತ್ತೆಯಾದ ದಿನವೇ ಠಾಣೆಗೆ ದೂರು ನೀಡಲು ತೆರಳಿದ್ದೆ. ಆದರೆ, ಪೊಲೀಸರು ಸರಿಯಾಗಿ ಸ್ಪಂದಿಸಲಿಲ್ಲ. ಕಾಡಿಬೇಡಿದ ಬಳಿಕ ಆ.6ರಂದು ಎಫ್ಐಆರ್ ದಾಖಲಿಸಿದ್ದಾರೆ. ಈವರೆಗೂ ಪತಿ ಪತ್ತೆಗೆ ಯಾವುದೇ ಕ್ರಮ ಕೈಗೊಂಡಿಲ್ಲ’ ಎಂದು ದೂರುದಾರ ಮಹಿಳೆ ‘ಎಕ್ಸ್’ ಖಾತೆಯಲ್ಲಿ ಪೊಲೀಸರ ವಿರುದ್ಧವೇ ಆರೋಪಿಸಿದ್ದಾರೆ.

ಅಪಘಾತ: ವೃದ್ಧೆ, ಟೈಲರ್ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕುಮಾರಸ್ವಾಮಿ ಲೇಔಟ್ ಹಾಗೂ ಜ್ಞಾನಭಾರತಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ಎರಡು ಪ್ರತ್ಯೇಕ ಅಪಘಾತಗಳಲ್ಲಿ ವೃದ್ಧೆ ಹಾಗೂ ಟೈಲರ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಕುಮಾರಸ್ವಾಮಿ ಲೇಔಟ್ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಜಂಬೂಸವಾರಿ ದಿಣ್ಣೆ ಬಳಿ ಬಸ್ ಹತ್ತಲು ರಸ್ತೆ ದಾಟುವಾಗ ಬಿಬಿಎಂಪಿಗೆ ಸೇರಿದ ಕಸ ತುಂಬಿಸುವ ಟಿಪ್ಪರ್ ಡಿಕ್ಕಿಯಾಗಿ ವೃದ್ಧೆಯೊಬ್ಬರು ಮೃತಪಟ್ಟಿದ್ದಾರೆ.

ಆಂಧ್ರಪ್ರದೇಶದ ಚಿತ್ತೂರಿನ ಆದಿಲಕ್ಷ್ಮಮ್ಮ(69) ಮೃತಪಟ್ಟ ವೃದ್ಧೆ.

‘ ಆದಿಲಕ್ಷ್ಮಮ್ಮ ರಸ್ತೆ ದಾಟುವಾಗ ಅಪಘಾತ ಸಂಭವಿಸಿದ್ದು, ಲಾರಿ ಚಾಲಕ ಮಹಮ್ಮದ್ ಅವರನ್ನು ವಶಕ್ಕೆ ಪಡೆಯಲಾಗಿದೆ’ ಎಂದು ಸಂಚಾರ ಪೊಲೀಸರು ಹೇಳಿದರು.

ಎರಡನೇ ಅಪಘಾತ: 15 ದಿನಗಳ ಅಂತರದಲ್ಲಿ ಬಿಬಿಎಂಪಿ ಕಸ ಸಾಗಿಸುವ ವಾಹನದಿಂದ ಎರಡನೇ ಅಪಘಾತ ಸಂಭವಿಸಿದೆ. ಇತ್ತೀಚೆಗಷ್ಟೇ ಕೆ.ಆರ್. ವೃತ್ತದಲ್ಲಿ ಟಿಪ್ಪರ್ ಡಿಕ್ಕಿಯಿಂದ ಇಬ್ಬರು ಸಾಫ್ಟ್‌ವೇರ್ ಎಂಜಿನಿಯರ್‌ಗಳು ಮೃತಪಟ್ಟಿದ್ದರು.

ಅತಿ ವೇಗ ತಂದ ಆಪತ್ತು: ಜ್ಞಾನಭಾರತಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ 80 ಅಡಿ ರಸ್ತೆಯ ಮಂಗಳನಹಳ್ಳಿ ಕ್ರಾಸ್ ಬಳಿ ಬೈಕ್‌ವೊಂದು ನಿಯಂತ್ರಣ ತಪ್ಪಿ ಉರುಳಿ ಬಿದ್ದ ಪರಿಣಾಮ ಟೈಲರ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ತುಮಕೂರಿನ ವಿಶ್ವನಾಥ್ 34) ಮೃತಪಟ್ಟವರು.

‘ಟೈಲರ್ ವೃತ್ತಿ ಮಾಡುತ್ತಿದ್ದ ವಿಶ್ವನಾಥ್ ಭಾನುವಾರ ರಾತ್ರಿ ಬೈಕ್‌ನಲ್ಲಿ ಕೆಂಗೇರಿ ಕಡೆಯಿಂದ ಸುಂಕದಕಟ್ಟೆ ಕಡೆಗೆ ತೆರಳುತ್ತಿದ್ದ ವೇಳೆ ಬೈಕ್ ನಿಯಂತ್ರಣ ತಪ್ಪಿದೆ. ಅವರು ಹೆಲ್ಮೆಟ್ ಧರಿಸಿರಲಿಲ್ಲ. ಕೆಳಕ್ಕೆ ಬಿದ್ದ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ’ ಎಂದು ಪೊಲೀಸರು ಹೇಳಿದರು.

ವೈದ್ಯ ವಿದ್ಯಾರ್ಥಿನಿ ಕೊಲೆ ಮೋಂಬತ್ತಿ ಮೆರವಣಿಗೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋಲ್ಕತ್ತದ ವೈದ್ಯ ವಿದ್ಯಾರ್ಥಿನಿ ಕೊಲೆ ಪ್ರಕರಣದ ತನಿಖೆ ನಡೆಸಿ, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಭಾರತ ವೈದ್ಯಕೀಯ ಸಂಘ (ಐಎಂಎ) ಆಗ್ರಹಿಸಿದೆ.

‘ಪೊಲೀಸರ ಪ್ರಕಾರ ವಿದ್ಯಾರ್ಥಿನಿಯನ್ನು ಮೊದಲು ಕೊಲೆ ಮಾಡಿ ನಂತರ ಅತ್ಯಾಚಾರ ಮಾಡಲಾಗಿದೆ. ಈ ಪ್ರಕರಣ ಕುರಿತು ಸಮಗ್ರ ತನಿಖೆ ನಡೆಸಬೇಕು. ಮಹಿಳಾ ವೈದ್ಯರು ಕರ್ತವ್ಯ ನಿರ್ವಹಿಸುವ ಸ್ಥಳಗಳಲ್ಲಿ ಸುರಕ್ಷತೆಗೆ ಕ್ರಮ ಕೈಗೊಳ್ಳಬೇಕು’ ಎಂದು ಸಂಘದ ರಾಜ್ಯಶಾಖೆ ಅಧ್ಯಕ್ಷ ಡಾ.ಎಸ್ ಶ್ರೀನಿವಾಸ್ ಪ್ರಕಟಣೆಯಲ್ಲಿ ಆಗ್ರಹಿಸಿದ್ದಾರೆ. ವಿದ್ಯಾರ್ಥಿನಿ ಕೊಲೆ ಖಂಡಿಸಿ ಮಂಗಳವಾರ ರಾಜ್ಯದಾದ್ಯಂತ ಮೋಂಬತ್ತಿ ಮೆರವಣಿಗೆ ನಡೆಸಲಾಗುವುದು ಎಂದು ಅವರು ಹೇಳಿದ್ದಾರೆ.

ಅಡುಗೆ ಸರಿಯಿಲ್ಲವೆಂದು ಗಲಾಟೆ: ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಡುಗೆ ವಿಚಾರಕ್ಕೆ ಪದೇ ಪದೇ ನಿಂದನೆ ಮಾಡುತ್ತಿದ್ದರು ಎಂಬ ಕಾರಣಕ್ಕಾಗಿ ಲಾರಿ ಚಾಲಕನನ್ನು ಜತೆಗಿದ್ದವರೇ ಕಬ್ಬಿಣದ ರಾಡ್ ಹಾಗೂ ಸುತ್ತಿಗೆಯಿಂದ ಹಲ್ಲೆ ನಡೆಸಿ, ಕೊಲೆ ಮಾಡಿದ್ದು, ಐವರು ಆರೋಪಿಗಳನ್ನು ಪರಪ್ಪನ ಅಗ್ರಹಾರ ಠಾಣೆ ಪೊಲೀಸರು ಬಂಧಿಸಿದ್ದಾರೆ.



ಸುರೇಶ್

ತಮಿಳುನಾಡಿನ ತಿರುಚ್ಚಿಯ ಚಾಲಕ ಸುರೇಶ್(47) ಕೊಲೆಯಾದವರು.

ಕೃತ್ಯ ಎಸಗಿದ ಆರೋಪದ ಅಡಿ ಮಧ್ಯಪ್ರದೇಶದ ಸಹದೇವ್(32), ಸುನೀಲ್ ನಾವ್ಡೆ(30), ದಿನೇಶ್(31) ಮತ್ತು ಅಲಕೇಶ್(30), ಸಂಜಯ್(28) ಹಾಗೂ ರಾಜೇಶ್(35) ಎಂಬುವವರನ್ನು ಬಂಧಿಸಲಾಗಿದೆ.

ಕೊಲೆಯಾದ ಸುರೇಶ್ ಅವರ ಸಂಬಂಧಿ ರವಿಚಂದ್ರನ್ ಅವರು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಮುಖ್ಯಾಂಶಗಳು

- ಒಟ್ಟಿಗೆ ಊಟ ಮಾಡಿ ಮಲಗಿದ ಮೇಲೆ ಕೃತ್ಯ ಎಸಗಿದರು
- ಮುಖ, ತಲೆ, ದೇಹದ ಇತರ ಭಾಗಗಳ ಮೇಲೆ ತೀವ್ರ ಪೆಟ್ಟು

‘ಅಡುಗೆ ಸರಿಯಾಗಿ ಮಾಡುವುದಿಲ್ಲ. ಅಲ್ಲದೇ ಕೆಲಸವನ್ನೂ ಜವಾಬ್ದಾರಿಯಿಂದ ನಿರ್ವಹಿಸಿಲ್ಲ’ ಎಂದು ತಮಿಳಿನಲ್ಲಿ ನಿಂದಿಸುತ್ತಿದ್ದರು ಎಂಬ ವಿಚಾರಕ್ಕೆ ಸುರೇಶ್ ಅವರನ್ನು ಕೊಲೆ ಮಾಡಿದ್ದಾರೆ ಎಂದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿರುವುದಾಗಿ ಪೊಲೀಸ್ ಮೂಲಗಳು ಹೇಳಿವೆ.

ಅಮೃತ ಬೋರ್‌ವೆಲ್ ಕಲ್ಕಿ ಎಂಟರ್‌ಪ್ರೈಸಸ್‌ನಲ್ಲಿ ಲಾರಿ ಚಾಲಕರಾಗಿ ಸುರೇಶ್ ಹಾಗೂ ಡ್ರಿಲ್ಲರ್ ಆಗಿ ರವಿಚಂದ್ರನ್ ಅವರು ಕೆಲಸ ಮಾಡುತ್ತಿದ್ದರು. ಭಾನುವಾರ ಸಿಂಗಸಂದ್ರದ ಎಇಸಿಎಸ್ ಲೇಔಟ್‌ನ ನಿವೇಶನವೊಂದರಲ್ಲಿ ಬೋರ್‌ವೆಲ್ ಕೊರೆಯಲು ಆರೋಪಿಗಳು, ಸುರೇಶ್ ಹಾಗೂ ದೂರುದಾರ ಬಂದಿದ್ದರು. ಭಾನುವಾರ ಕೆಲಸ ಸ್ಥಗಿತಗೊಳಿಸಿ ನಿವೇಶನದ ಶೆಡ್‌ನಲ್ಲಿ ಎಲ್ಲರೂ ತಂಗಿದ್ದರು. ರಾತ್ರಿ ಆರೋಪಿಗಳ ಪೈಕಿ ಸಹದೇವ್ ಅಡುಗೆ ಮಾಡುತ್ತಿದ್ದ. ಆಗ ಸುರೇಶ್, ‘ನಿನಗೆ ಸರಿಯಾಗಿ ಅಡುಗೆ ಮಾಡುವುದಕ್ಕೆ ಬರುವುದಿಲ್ಲ’ ಎಂದು ನಿಂದಿಸಿದ್ದರು ಎನ್ನಲಾಗಿದೆ.

ಗಲಾಟೆ ವಿಕೋಪಕ್ಕೆ ಹೋದಾಗ, ಉಳಿದವರು ಬಿಡಿಸಿದ್ದರು. ಎಲ್ಲರೂ ಒಟ್ಟಿಗೆ ಊಟ ಮಾಡಿ, ಶೆಡ್‌ನಲ್ಲೇ ಮಲಗಿದ್ದರು. ನಂತರ, ಸಂಚು ರೂಪಿಸಿ ಕೊಲೆ ಮಾಡಿದ್ದರು ಎಂದು ಪೊಲೀಸರು ಹೇಳಿದರು.

‘ತಡರಾತ್ರಿ 11.30ರ ಸುಮಾರಿಗೆ ಸಹದೇವ್ ಹಾಗೂ ಇತರರು ಕಬ್ಬಿಣದ ರಾಡ್ ಮತ್ತು ಸುತ್ತಿಗೆಯಿಂದ ಸುರೇಶ್‌ನ ಮುಖ, ತಲೆ ಹಾಗೂ ದೇಹದ ಇತರೆ ಭಾಗಕ್ಕೆ ಹೊಡೆದಿದ್ದು, ತೀವ್ರ ರಕ್ತಸ್ರಾವದಿಂದ ಸುರೇಶ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ’ ಎಂದು ಪೊಲೀಸರು ಹೇಳಿದರು.

‘ಆರೋಪಿಗಳನ್ನು ಬಂಧಿಸಿ ಕಸ್ಟಡಿಗೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

ಮೈಸೂರು ರೇಸ್

ರಾಂಕ್ವೆಲಿನೊ ಗೆಲ್ಲುವ ನಿರೀಕ್ಷೆ

ಮೈಸೂರ್ ಕೋಲ್ಟ್ಸ್ ಟ್ರಯಲ್ ಸ್ಟೇಕ್ಸ್ ಮಂಗಳವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ರಾಂಕ್ವೆಲಿನೊ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:45ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಡೀಮ್ಡ್ ಟು ಫ್ಲೈರ್ 5, ನ್ಯಾಚುರಲ್ ಫ್ಲೈ 1, ಡಿ ಫೈಟರ್ 3
2ನೇ ರೇಸ್: ಶೀಈಸ್ ಅನ್‌ಸ್ಟಾಪಬಲ್ 3, ಹೀರೊ ಆಫ್ ದಿ ಈಸ್ಟ್ 1, ಮಾಸ್ಟರಿ 5
3ನೇ ರೇಸ್: ವಂದನ್ 5, ಡಿ ಅಡ್ಮಿರಲ್ 4, ಲೀಡ್ ಸಿಂಗರ್ 7
4ನೇ ರೇಸ್: ಫೆಸೆಟ್ಸ್ ಆಫ್ ಲೈಫ್ 2, ಡಿ ಫ್ಲೈರ್ 4, ಕ್ವೀನ್ ಸ್ಟಾರ್ 3
5ನೇ ರೇಸ್: ನೆವಾಡ ಗೋಲ್ಡ್ 12, ಸೆರಾಯ್ 14, ಅತುಲ್ಯ 11
6ನೇ ರೇಸ್: ರಾಂಕ್ವೆಲಿನೊ 6, ಮಸಾಟೊ 5, ಕಿಂಗ್ಸ್ ಬೆಟಾಲಿಯನ್ 4
7ನೇ ರೇಸ್: ರಾವಿಶಿಂಗ್ ಫಾರ್ಮ್ 3, ಮೂನ್‌ಲೈಟ್ ಕ್ವೀನ್ 7, ಮಿಸ್ಟಿಕ್ ಡಿವೈನ್ 6
8ನೇ ರೇಸ್: ರೀಪ್ ದಿ ಬೌಂಟಿ 1, ಮಿಸ್ಟಿಕಲ್ ಮರ್ಲಿನ್ 9, ಡಿ ಗೋಲ್ಡನ್ ಕಪ್ 4

ಉತ್ತಮ ಬೆಟ್: ವಂದನ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	1,2,3	3,4,5	6,7,8

ಬೆಂಗಳೂರಿಗೆ ಶರಾವತಿ ನೀರು; ಕಾರ್ಯಸಾಧ್ಯತಾ ವರದಿಗೆ ಸಿದ್ಧತೆ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಜಿಲ್ಲೆಯ ಕಾರ್ಗಲ್‌ನ ಬಳಿಯ ಲಿಂಗನಮಕ್ಕಿ ಜಲಾಶಯದ ಹಿನ್ನೀರಿನಿಂದ ಬೆಂಗಳೂರು ಮಹಾನಗರಕ್ಕೆ ಕುಡಿಯುವ ನೀರು ಪೂರೈಸುವ ಯೋಜನೆಯ ಕಾರ್ಯಸಾಧ್ಯತಾ ವರದಿ ಸಿದ್ಧಪಡಿಸಲು ವಿಶ್ವೇಶ್ವರಯ್ಯ ಜಲನಿಗಮ (ವಿಜೆಎನ್‌ಎಲ್) ಮುಂದಾಗಿದೆ.

ವಿಜೆಎನ್‌ಎಲ್ ಕಾರ್ಯಸಾಧ್ಯತಾ ವರದಿ ಸಲ್ಲಿಕೆಗೆ ಬೆಂಗಳೂರಿನ ಈಐ ಟೆಕ್ನಾಲಜೀಸ್ ಸಂಸ್ಥೆಗೆ ಹೊಣೆ ವಹಿಸಿದೆ. ಮೂರರಿಂದ ನಾಲ್ಕು ತಿಂಗಳಲ್ಲಿ ಸಂಸ್ಥೆ ವರದಿ ನೀಡಬಹುದು ಎಂದು ತಿಳಿದುಬಂದಿದೆ.

ಅಪಘಾತ: ಬೈಕ್ ಸವಾರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೊಮ್ಮನಹಳ್ಳಿ ಜಂಕ್ಷನ್ ಬಳಿ ಸೋಮವಾರ ಬೆಳಿಗ್ಗೆ ಟಿಪ್ಪರ್ ಹಾಗೂ ಬೈಕ್ ನಡುವೆ ಸಂಭವಿಸಿದ ಅಪಘಾತದಲ್ಲಿ ಬೈಕ್ ಸವಾರ ಮೃತಪಟ್ಟಿದ್ದಾರೆ.

ಕೂಡ್ಲು ನಿವಾಸಿ ವೇಣುಗೋಪಾಲ್(53) ಮೃತರು. ಸೋಮವಾರ ಬೆಳಿಗ್ಗೆ 11.30ರ ಸುಮಾರಿಗೆ ಬೊಮ್ಮನಹಳ್ಳಿ ಜಂಕ್ಷನ್ ಬಳಿ ದುರ್ಘಟನೆ ನಡೆದಿದೆ.

ಸೀರೆ ವ್ಯಾಪಾರಿ ವೇಣುಗೋಪಾಲ್ ಅವರು ಬೈಕ್‌ನಲ್ಲಿ ಬೊಮ್ಮನಹಳ್ಳಿ ಜಂಕ್ಷನ್ ಕಡೆಯಿಂದ ಮಡಿವಾಳ ಕಡೆಗೆ ತೆರಳುತ್ತಿದ್ದರು. ಮೆಟ್ರೊ ಪಿಲ್ಲರ್ ನಂ. 232ರ ಬಳಿ, ಹಿಂಬದಿಯಿಂದ ಬಂದ ಟಿಪ್ಪರ್ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಕೆಳಗೆ ಬಿದ್ದ ವೇಣುಗೋಪಾಲ್ ಮೇಲೆ ಟಿಪ್ಪರ್ ಲಾರಿ ಹರಿದು, ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಈ ಸಂಬಂಧ ಚಾಲಕ ಚೆಲುವೇಗೌಡ(35) ಎಂಬಾತನನ್ನು ಬಂಧಿಸಲಾಗಿದೆ. ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹವನ್ನು ಕುಟುಂಬಕ್ಕೆ ಹಸ್ತಾಂತರಿಸಲಾಗಿದೆ ಎಂದು ಸಂಚಾರ ಪೊಲೀಸರು ಮಾಹಿತಿ ನೀಡಿದರು.

ಮಡಿವಾಳ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕ್ಷೇಮ ಕುಶಲ



ಸಹಜ ಹೆರಿಗೆಯ ಲಾಭಗಳು

ಡಾ. ಜಯಲಕ್ಷ್ಮಿ ಎಂ. ನಾಯ್ಕ್

ತಾಯ್ತನ ಹೆಣ್ಣಿನ ಜೀವನದ ಅವಿಸ್ಮರಣೀಯ ಅನುಭವ. ಹೆಣ್ಣು ತಾನು ಗರ್ಭಿಣಿ ಎಂದು ತಿಳಿದಂದಿನಿಂದಲೇ ತನ್ನ ಆರೋಗ್ಯದ ಬಗ್ಗೆ, ಆಹಾರದ ಬಗ್ಗೆ ವಿಶೇಷ ಕಾಳಜಿಯನ್ನು ತೆಗೆದುಕೊಳ್ಳಲಾರಂಭಿಸುತ್ತಾಳೆ. ವೈದ್ಯರ ಸಲಹೆಯನ್ನು ತಪ್ಪದೆ ಪಾಲಿಸುತ್ತಾಳೆ. ಏಕೆಂದರೆ ಅವಳಿಗೆ ತನಗೆ ಹುಟ್ಟುವ ಮಗು ಗರ್ಭದಲ್ಲಿ ಸದೃಢವಾಗಿ ಬೆಳೆಯಬೇಕೆಂಬ ಆಸೆ. ಆದರೆ ಇದೇ ಕಾಳಜಿಯನ್ನು ಹೆರಿಗೆಯ ಬಗ್ಗೆಯಾಗಲೀ, ನಂತರದಲ್ಲಿ ಮಗುವಿನ ಪೋಷಣೆಯಲ್ಲಾಗಲೀ ಕಂಡುಬರುವುದಿಲ್ಲ. ಹೆರಿಗೆಯ ಪ್ರಕ್ರಿಯೆ ಹಾಗೂ ಸಂಪೂರ್ಣ ಎದೆಹಾಲು ನೀಡುವಿಕೆ – ಇವೆರಡು ಮಗುವಿನ ಸರ್ವತೋಮುಖ ಬೆಳವಣಿಗೆಯ ಮೇಲೆ ತುಂಬಾ ಪರಿಣಾಮವನ್ನು ಬೀರುತ್ತದೆ ಎಂಬುದನ್ನು ಗರ್ಭಿಣಿ ಹಾಗೂ ಅವಳ ಮನೆಯವರೆಲ್ಲರೂ ತಿಳಿಯಬೇಕಾಗಿದೆ.

ಅಧ್ಯಯನದ ಪ್ರಕಾರ ಶೇ 85ರಷ್ಟು ಗರ್ಭವತಿಯರಿಗೆ ಸಹಜ ಹೆರಿಗೆಯಾಗುವ ಸಾಧ್ಯತೆಯಿರುತ್ತದೆ. ಉಳಿದ ಶೇ 15ರಷ್ಟು ಗರ್ಭವತಿಯರಿಗೆ ಮಾತ್ರವೇ ‘ಸಿಸೆರಿಯನ್’ ಅಥವಾ ‘ಸಿ–ಸೆಕ್ಷನ್’ ಹೆರಿಗೆಯ ಅಗತ್ಯ ಎದುರಾಗಬಹುದು. ಈ ಹಿಂದೆ, ‘ಸಿಸೆರಿಯನ್ ಹೆರಿಗೆ’ ಎಂದರೆ ಬಹು ದೊಡ್ಡ ಆಪರೇಶನ್ ಎಂಬ ಕಲ್ಪನೆ ಇತ್ತು; ಅದು ವಿರಳವೂ ಆಗಿತ್ತು. ಆದರೆ ಈಗ ಶೇ 70-80ರಷ್ಟು ಹೆರಿಗೆಗಳು ಸಿಸೆರಿಯನ್‌ಗಳಾಗುತ್ತಿವೆ.

ಇದಕ್ಕೆ ಕಾರಣ ವೈದ್ಯಕೀಯ ಅಡೆತಡೆಗಳು ಕೆಲವಾದರೆ, ಸಹಜ ಹೆರಿಗೆಯ ಜೊತೆಯಲ್ಲಿರುವ ನೋವಿನ ಕಾರಣ ಎಷ್ಟೋ ಮಹಿಳೆಯರು ‘ಸಿ-ಸೆಕ್ಷನ್ ಡೆಲಿವರಿ’ಯನ್ನು ಆರಿಸಿಕೊಳ್ಳುತ್ತಾರೆ. ಸಿಸೆರಿಯನ್ ಪ್ರಕ್ರಿಯೆಯು ಕಡಿಮೆ ನೋವು ಮತ್ತು ಹೆರಿಗೆಯ ಸುಲಭತೆಯ ಭರವಸೆಯನ್ನು ಕೊಡುತ್ತದೆ. ಹೀಗಾಗಿ ಇದು ತಾಯಂದಿರು ಮತ್ತು ವೈದ್ಯರ ಮೊದಲ ಆಯ್ಕೆಯಾಗಿದೆ. ಬಹುಶಃ ಈಗಿನ ವೈದ್ಯರಿಗೆ ಸಹಜ ಹೆರಿಗೆ ಮಾಡಿಸುವಷ್ಟು ತಾಳ್ಮೆ ಇಲ್ಲ ಹಾಗೂ ಈಗಿನ ಗರ್ಭಿಣಿಯರಿಗೆ ಹೆರಿಗೆಯ ನೋವನ್ನು ತಡೆದುಕೊಳ್ಳುವಷ್ಟು ಶಕ್ತಿ ಇಲ್ಲ ಎನಿಸುತ್ತದೆ. ಈ ಕಾರಣದಿಂದ ಸಹಜ ಹೆರಿಗೆಗಳು ಬಹಳಷ್ಟು ಕಡಿಮೆಯಾಗಿವೆ; ಅವುಗಳಿಂದ ಆಗುವ ಲಾಭಗಳಿಂದ ಇಂದಿನ ಪೀಳಿಗೆ ವಂಚಿತವಾಗುತ್ತಿದೆ.

ಮಹಿಳೆಯ ದೇಹವು ಸಾಮಾನ್ಯ ಹೆರಿಗೆಯನ್ನು ನಿಭಾಯಿಸಲು ವಿನ್ಯಾಸಗೊಂಡಿದೆ. ಸರಿಯಾದ ಸಮಯಕ್ಕೆ ಅವಧಿ ತುಂಬಿದ ಮಗುವಿಗೆ ಸಹಜ ಹೆರಿಗೆಯಿಂದ ಜನ್ಮವಾಗುವುದು ಪ್ರಕೃತಿಯ ನಿಯಮ. ಯೋನಿಯ ಮೂಲಕ ಆಗುವ ಜನನದಿಂದ ತಾಯಿ–ಮಗುವಿಗಿಬ್ಬರಿಗೂ ಅನೇಕ ಪ್ರಯೋಜನಗಳಿವೆ:

ತಾಯಿಗೆ ಆಗುವ ಲಾಭಗಳು

- ವೇಗವಾಗಿ ಚೇತರಿಸಿಕೊಳ್ಳುವುದು.
- ಒಂದು ಅಥವಾ ಎರಡು ದಿನಗಳಲ್ಲಿ ಆಸ್ಪತ್ರೆಯಿಂದ ಮನೆಗೆ ತೆರಳಬಹುದು.
- ಯಾವುದೇ ಸೋಂಕುಗಳು ಅಥವಾ ತೊಡಕುಗಳಿಲ್ಲದಿರುವುದು.
- ಕನಿಷ್ಠ ನೋವು.
- ಅರಿವಳಿಕೆ ಅಪಾಯವಿಲ್ಲ.
- ಪ್ರಸವಾನಂತರದ ತಕ್ಷಣದ ಆರೈಕೆ
- ಶೀಘ್ರ ಹಾಲು ಉತ್ಪತ್ತಿ; ಮಗುವಿಗೆ ಬೇಗ ಹಾಲುಣಿಸಬಹುದು.
- ತಾಯಿ–ಮಗುವಿನ ತಡೆರಹಿತ ಗಟ್ಟಿಸಂಬಂಧದ ಬೆಸುಗೆ.

ಮಗುವಿಗೆ ಆಗುವ ಲಾಭಗಳು

1 ಉಸಿರಾಟದ ಸಮಸ್ಯೆಗಳ ಕಡಿಮೆ ಅಪಾಯ: ಯೋನಿಯ ಮೂಲಕ ಜನನವಾಗುವಾಗ ಮಗುವಿನ ಎದೆಯು ಸಂಕುಚಿತಗೊಂಡು, ಎದೆಯಲ್ಲಿ ಇರುವ ‘ಆಮ್ನಿಯೋಟಿಕ್ ದ್ರವ’ವನ್ನು ಹೊರಹಾಕಲು ಸಹಾಯ ಮಾಡುತ್ತದೆ. ಇದರಿಂದ ಮಗುವಿನ ಶ್ವಾಸಕೋಶವು ಸ್ವಚ್ಛವಾಗುತ್ತದೆ. ಉಸಿರಾಟದ ಸಮಸ್ಯೆಗಳ ಅಪಾಯವು ಬಹಳವಾಗಿ ಕಡಿಮೆಯಾಗುತ್ತದೆ.

2 ರೋಗಗಳಿಂದ ನೈಸರ್ಗಿಕ ರಕ್ಷಣೆ: ಯೋನಿಯ ಮೂಲಕ ಜನಿಸಿದ ಶಿಶುಗಳು ತಾಯಿಯ ಜನನ ಕಾಲುವೆಯಿಂದ ‘ಮೈಕ್ರೋಬಯೋಮ್’ ಅನ್ನು ಪಡೆಯುತ್ತವೆ. ಇದು ರಕ್ಷಣಾತ್ಮಕ ಬ್ಯಾಕ್ಟೀರಿಯಂ. ಇದು ಮಗುವನ್ನು ಹೊಟ್ಟೆಗೆ ಸೇರಿ ಹಲವಾರು ಕಾಯಿಲೆಗಳಿಂದ ರಕ್ಷಿಸುತ್ತದೆ ಮತ್ತು ಶಕ್ತಿಯುತವಾದ ಪ್ರತಿರಕ್ಷಣಾ ವ್ಯವಸ್ಥೆಯನ್ನು ನಿರ್ಮಿಸಲು ಸಹಾಯ ಮಾಡುತ್ತದೆ. ಇದರಿಂದ ಮಗುವಿನ ರೋಗ ನಿರೋಧಕಶಕ್ತಿ ಹೆಚ್ಚಾಗಿ, ಮುಂದೆ ಮಗು ಪದೆ ಪದೆ ಕಾಯಿಲೆ ಬೀಳುವುದು ಕಡಿಮೆಯಾಗುತ್ತದೆ.

3 ಅರಿವಳಿಕೆ ಶೂನ್ಯ ಅಡ್ಡಪರಿಣಾಮಗಳು: ಯೋನಿಪ್ರಸವಗಳಲ್ಲಿ ತಾಯಿಗೆ ಯಾವುದೇ ಅರಿವಳಿಕೆಯ ಅಗತ್ಯವಿಲ್ಲ. ಆದ್ದರಿಂದ ಅರವಳಿಕೆ ಔಷಧಗಳ ಹಾಗೂ ಇತರೆ ಔಷಧಗಳ ಅಡ್ಡಪರಿಣಾಮ ಮಗುವಿನ ಮೇಲಾಗಲಿ, ಎದೆಹಾಲಿನ ಉತ್ಪತ್ತಿಯ ಮೇಲಾಗಲಿ ಇರುವುದಿಲ್ಲ.

4 ಸ್ತನ್ಯಪಾನ ವಿಳಂಬವಾಗುವುದಿಲ್ಲ: ‘ಸಿ-ಸೆಕ್ಷನ್’ಗೆ ಒಳಗಾದ ತಾಯಂದಿರು ಹೆರಿಗೆಯಾದ ತಕ್ಷಣ ಮಗುವಿಗೆ ಹಾಲುಣಿಸಲು ಸಾಧ್ಯವಾಗುವುದಿಲ್ಲ. ಶಸ್ತ್ರಚಿಕಿತ್ಸೆಯಿಂದ ಚೇತರಿಸಿಕೊಳ್ಳಲು ಅವರಿಗೆ ಸಮಯ ಬೇಕಾಗುತ್ತದೆ. ಹೀಗಾಗಿ ಇದು ಮೊದಲ ಸ್ತನ್ಯಪಾನದ ಅವಧಿಯನ್ನು ವಿಳಂಬಗೊಳಿಸುತ್ತದೆ. ನೈಸರ್ಗಿಕ ಹೆರಿಗೆಯಲ್ಲಿ ತಾಯಿ ತನ್ನ ಮಗುವಿಗೆ ತಕ್ಷಣವೇ ಆಹಾರವನ್ನು ನೀಡಬಹುದು. ಮೊದಲ 1-2 ಗಂಟೆ ಮಗು ತುಂಬಾ ಚುರುಕಾಗಿರುತ್ತದೆ; ಹಾಲು ಕುಡಿಯುವ ಆತುರದಲ್ಲಿರುತ್ತದೆ. ಹುಟ್ಟಿ ಅರ್ಧ ಗಂಟೆಯಲ್ಲಿ ಹಾಲುಣಿಸಿದರೆ ನಂತರದಲ್ಲಿ ಮಗುವು ಸದೃಢವಾಗಿ ಆರೋಗ್ಯವಾಗಿರುತ್ತದೆ; ತಾಯಿಯ ಎದೆಯಲ್ಲಿ ಹೆಚ್ಚಿನ ಹಾಲು ಉತ್ಪತ್ತಿಯಾಗುತ್ತದೆ; ಜೊತೆಗೆ ರಕ್ತಸ್ರಾವವೂ ಕಡಿಮೆಯಾಗುತ್ತದೆ. ನಂತರದಲ್ಲಿ ಅದು ನಿದ್ದೆಗೆ ಜಾರುತ್ತದೆ. ಯಾವುದೇ ವಿಳಂಬವಿಲ್ಲದೆ ತಾಯಿ–ಮಗುವಿನ ಸಂಬಂಧ ಗಟ್ಟಿಯಾಗುತ್ತದೆ.

5 ಉತ್ತಮ ಎಪಿಜಿಎಆರ್ ಸ್ಕೋರ್: ‘ಎಪಿಜಿಎಆರ್’ ಸ್ಕೋರಿಂಗ್ ಪರೀಕ್ಷೆಯ ಮೂಲಕ ಮಗುವಿನ ಶಾರೀರಿಕ ಸ್ಥಿತಿಯನ್ನು ನಿರ್ಣಯಿಸಲಾಗುತ್ತದೆ. ಇದು ಮಗುವಿನ ಅಳು, ಚಟುವಟಿಕೆ, ಸ್ಪಂದಿಸುವಿಕೆ, ಉಸಿರಾಟ ಮತ್ತು ಹೃದಯ ಬಡಿತವನ್ನು ಪರಿಶೀಲಿಸುತ್ತದೆ. ಯೋನಿಯ ಮೂಲಕ ಹೆರಿಗೆಯಾದ ಶಿಶುಗಳು ಸಿಸೆರಿಯನ್ ಮಕ್ಕಳಿಗಿಂತ ಚಟುವಟಿಕೆಗಳಲ್ಲಿ ಮೇಲುಗೈಯನ್ನು ತೋರಿಸುತ್ತವೆ.

ಅನಿವಾರ್ಯ ವೈದ್ಯಕೀಯ ಸ್ಥಿತಿ ಇಲ್ಲದಿದ್ದರೆ ಮತ್ತು ವೈದ್ಯರು ಸಿ-ಸೆಕ್ಷನ್ ಅನ್ನು ಶಿಫಾರಸು ಮಾಡದಿದ್ದರೆ, ಯೋನಿಯ ಮೂಲಕ ಸಾಮಾನ್ಯ ಹೆರಿಗೆಯನ್ನು ಆಯ್ಕೆ ಮಾಡದಿರಲು ಯಾವುದೇ ಕಾರಣವಿಲ್ಲ. ಇದು ಸಿ-ಸೆಕ್ಷನ್‌ಗಿಂತಲೂ ಹೆಚ್ಚು ಸುರಕ್ಷಿತ; ಮಾತ್ರಲ್ಲ, ತಾಯಿ–ಮಗು – ಇಬ್ಬರಿಗೂ ಲಾಭಕಾರಿ.



ವ್ಯಾಯಾಮ ಹೃದಯಕ್ಕೆ ಕೊಡುಗೆ

ಡಾ. ಕಿರಣ್ ವಿ. ಎಸ್.

ಹೃದಯದ ಸಮಸ್ಯೆ ಇರುವವರು ವ್ಯಾಯಾಮ ಮಾಡಬಹುದೇ? ಹಾಗಿದ್ದಲ್ಲಿ ಎಷ್ಟು ವ್ಯಾಯಾಮ ಮಾಡಬಹುದು? ಎಂತಹ ವ್ಯಾಯಾಮ ಮಾಡಬಹುದು? ಇದು ಬಹುತೇಕರನ್ನು ಕಾಡುವ ಪ್ರಶ್ನೆ. ಇದಕ್ಕೆ ಉತ್ತರವನ್ನು ಅರಿಯಲು ಮೊದಲು ಹೃದ್ರೋಗದ ಬಗ್ಗೆ ಕೆಲವು ಮೂಲಭೂತ ವಿಷಯಗಳನ್ನು ತಿಳಿದುಕೊಳ್ಳಬೇಕು.

ಹೃದ್ರೋಗಗಳಲ್ಲಿ ಹಲವಾರು ವಿಧಗಳು ಇವೆಯಾದರೂ ಬಹಳ ಜನರ ಸಮಸ್ಯೆ ಹೃದಯಾಘಾತದ್ದು. ಹೃದಯಕ್ಕೆ ರಕ್ತಸರಬರಾಜು ಮಾಡುವ ರಕ್ತನಾಳಗಳಲ್ಲಿ ಕೊಬ್ಬಿನ ಶೇಖರಣೆಯಾದಾಗ ರಕ್ತದ ಹರಿವಿಗೆ ಅಡಚಣೆಯಾಗುತ್ತದೆ. ಇದು ಒಂದು ಪ್ರಮಾಣವನ್ನು ಮೀರಿದಾಗ ಹೃದಯದ ಮಾಂಸಖಂಡಗಳಿಗೆ ರಕ್ತದ ಪೂರೈಕೆ ಇಲ್ಲದಂತಾಗಿ, ಅವು ನಶಿಸುತ್ತವೆ. ಇದೇ ಹೃದಯಾಘಾತ. ಈ ಪ್ರಕ್ರಿಯೆಯಲ್ಲಿ ಎಷ್ಟು ಪ್ರಮಾಣದ ಮಾಂಸಖಂಡಗಳು ಗಾಸಿಯಾಗಿವೆ? ಅದು ಪುನಃ ಕೆಲಸ ಮಾಡಲು ಸಮರ್ಥವಾಗುತ್ತದೆಯೇ ಅಥವಾ ಶಾಶ್ವತವಾಗಿ ಇಲ್ಲದಂತಾಗಿದೆಯೇ? ಹೃದಯಾಘಾತದ ನಂತರ ಉಳಿದಿರುವ ಪ್ರಮಾಣದ ಮಾಂಸಖಂಡ ಶರೀರ ಶ್ರಮವನ್ನು ಎಷ್ಟು ಮಟ್ಟಿಗೆ ಸಹಿಸಬಲ್ಲದು? ಇಂತಹ ಪ್ರಶ್ನೆಗಳನ್ನು ಆಧರಿಸಿ ಹೃದಯತಜ್ಞರು ಆಯಾ ರೋಗಿ ಮಾಡಬಹುದಾದ ವ್ಯಾಯಾಮದ ಮಟ್ಟವನ್ನು ನಿರ್ಧರಿಸುತ್ತಾರೆ. ವ್ಯಾಯಾಮದ ವಿಷಯವಾಗಿ ಕಟ್ಟುನಿಟ್ಟಾಗಿರುವ ರೋಗಿಗಳಿಗೆ ಹೃದಯಾಘಾತದಿಂದ ಸಂಪೂರ್ಣವಾಗಿ ಚೇತರಿಸಿಕೊಂಡ ನಂತರ ವೈದ್ಯರ ಸುಪರ್ದಿಯಲ್ಲಿ ಹೃದಯದ ಸ್ಥಿತಿ-ಗತಿಗಳನ್ನು ಅಳೆಯುತ್ತಾ ವ್ಯಾಯಾಮ ಮಾಡಿಸಿ, ಅವರು ಎಷ್ಟು ಪ್ರಮಾಣದ, ಯಾವ ರೀತಿಯ, ಎಷ್ಟು ಕಾಲಾವಧಿಯ ವ್ಯಾಯಾಮಕ್ಕೆ ಅರ್ಹರಾಗಿದ್ದಾರೆ ಎಂದು ಕೂಡ ತಿಳಿಯಬಹುದು.

ಯಾವುದೇ ಬಗೆಯ ಹೃದ್ರೋಗಿಗಳಿಗೂ ನಿಯಮಿತ ವ್ಯಾಯಾಮ ಔಷಧಗಳಷ್ಟೇ ಮಹತ್ವದ್ದು. ತನಗೆ ಹೃದಯದ ಕಾಯಿಲೆಯಿದೆ ಎನ್ನುವುದು ಕೊರಗೂ ಆಗಬಾರದು; ವ್ಯಾಯಾಮ ಮಾಡದಿರಲು ನೆಪವೂ ಆಗಬಾರದು. ‘ಕೂರುವುದು ಆಧುನಿಕ ಧೂಮಪಾನ’ ಎನ್ನುವ ಮಾತಿದೆ. ಯಾವುದೇ ಚಟುವಟಿಕೆಯಿಲ್ಲದೆ ಕೂರುವುದರಿಂದ ಆರೋಗ್ಯದ ಮೇಲೆ ಆಗುವ ವ್ಯತಿರಿಕ್ತ ಪರಿಣಾಮಗಳು ಧೂಮಪಾನದಿಂದ ಆಗುವಷ್ಟೇ ತೀವ್ರವಾದುವು ಎಂದು ಅಧ್ಯಯನಗಳು ತೋರಿವೆ. ಹೃದಯದ ಕಾಯಿಲೆಯ ಯಾವುದೇ ಮಟ್ಟದಲ್ಲೂ ನಿಯಮಿತ ವ್ಯಾಯಾಮ ಬಹಳ ಮುಖ್ಯ. ಉಸಿರಾಟದ ಗತಿಯನ್ನು ಏರಿಸುವ ಶಾರೀರಿಕ ವ್ಯಾಯಾಮ, ದೇಹದ ಮಾಂಸಖಂಡಗಳ ಬಲವನ್ನು ಹೆಚ್ಚಿಸುವ ವ್ಯಾಯಾಮಗಳನ್ನು ಶಕ್ತ್ಯಾನುಸಾರ ಪ್ರತಿದಿನವೂ ತಪ್ಪದೆ ಮಾಡುವುದು ಸರಿಯಾದ ವಿಧಾನ. ವ್ಯಾಯಾಮದ ಮುನ್ನ ಸ್ನಾಯುಗಳನ್ನು ಕ್ರಮವಾಗಿ ಹಿಗ್ಗಿಸುವ ಚಲನೆಗಳು; ವ್ಯಾಯಾಮದ ನಂತರ ಶರೀರಕ್ಕೆ ನೀಡಬೇಕಾದ ವಿಶ್ರಾಂತಿ ಬಹಳ ಮುಖ್ಯ. ಉಸಿರುಗಟ್ಟಿ ಮಾಡುವ ಯಾವುದೇ ವ್ಯಾಯಾಮವೂ ಹೃದ್ರೋಗಿಗಳಿಗೆ ಸೂಕ್ತವಲ್ಲ.

ಹೃದ್ರೋಗಿಗಳ ವ್ಯಾಯಾಮದ ಪ್ರಕ್ರಿಯೆಯಲ್ಲಿ ಮುಖ್ಯವಾದದ್ದು ಎಷ್ಟು ಪ್ರಮಾಣದಲ್ಲಿ ಮಾಡಬೇಕು ಎಂಬುದಕ್ಕಿಂತಲೂ ನಿಯಮಿತವಾಗಿ, ರೂಢಿ ತಪ್ಪದಂತೆ, ನಿಧಾನವಾಗಿ ಪ್ರಮಾಣವನ್ನು, ಗತಿಯನ್ನು ಹೆಚ್ಚಿಸುತ್ತಾ ಮಾಡುವುದು. ಆರಂಭದಲ್ಲಿ ಸರಳವಾದ ದೀರ್ಘ ಶ್ವಾಸದೊಡನೆ ಮಾಡುವ ಚುರುಕು ನಡಿಗೆ ಸೂಕ್ತ. ಕಾಲಕ್ರಮೇಣ ಯೋಗ ಮತ್ತು ಪ್ರಾಣಾಯಾಮ; ಈಜು; ಬೈಸಿಕಲ್ ಸವಾರಿ; ಸೂರ್ಯನಮಸ್ಕಾರ – ಇಂತಹ ಯಾವುದಕ್ಕಾದರೂ ವ್ಯಾಯಾಮವನ್ನು ವಿಸ್ತರಿಸಬಹುದು. ಏಕತಾನತೆ ಕಾಡದಂತೆ ವಿಧಾನಗಳನ್ನು ಆಗಾಗ್ಗೆ ಬದಲಿಸುತ್ತಾ ವಿವಿಧ ಬಗೆಯ ವ್ಯಾಯಾಮ ಶೈಲಿಗಳನ್ನು ರೂಢಿಸಿಕೊಳ್ಳಬಹುದು. ಕೆಲಸದ ಒತ್ತಡ ಅಥವಾ ಸಮಯದ ಅಭಾವ ವ್ಯಾಯಾಮದಿಂದ ದೂರವಿರಲು ನೆಪ ಆಗಬಾರದು. ಯಾವುದೇ ಕಾರಣಕ್ಕೆ ನಿಯಮಿತ ವ್ಯಾಯಾಮ ಸಾಧ್ಯವಿಲ್ಲ ಎನ್ನುವವರು ದಿನನಿತ್ಯದ ಜೀವನಶೈಲಿಯನ್ನೇ ಮಾರ್ಪಾಡು ಮಾಡಿಕೊಳ್ಳಬೇಕು. ಬಸ್ಸಿನ ಪಯಣಿಗರು ಒಂದೆರಡು ನಿಲ್ದಾಣಗಳ ಮುನ್ನವೇ ಇಳಿದು ಅಲ್ಲಿಂದ ಗಮ್ಯಕ್ಕೆ ನಡೆಯಬಹುದು. ಸ್ವಂತ ವಾಹನ ಬಳಸುವವರು ಹದಿನೈದು ನಿಮಿಷ ಮೊದಲೇ ಕಚೇರಿಗೆ ತಲುಪಿ, ಕೆಲಸಕ್ಕೆ ಧಾವಿಸುವ ಮುನ್ನ ಕಟ್ಟಡದ ಸುತ್ತಮುತ್ತಲ ನಡಿಗೆಯ ಹಾದಿಯಲ್ಲಿ ಒಂದೆರಡು ಸುತ್ತು ಹಾಕಬಹುದು. ಕಚೇರಿಯಲ್ಲೂ ಲಿಫ್ಟ್ ಬದಲಿಗೆ ನಿಧಾನವಾಗಿ ಮೆಟ್ಟಿಲನ್ನೋ ಇಳಿಜಾರನ್ನೋ ಬಳಸಿ ಹತ್ತಿಳಿಯಬಹುದು. ಕೆಲಸದ ನಡುವೆ ಸಮಯ ದೊರೆತಾಗ ಕಚೇರಿಯಲ್ಲೇ ನಡೆದು ನಾಲ್ಕು ಸುತ್ತು ಹಾಕಬಹುದು. ಮನೆಯ ಆಜೂಬಾಜೂ ಅಂಗಡಿಗಳಿಂದ ಅವಶ್ಯಕ ವಸ್ತುಗಳನ್ನು ತರಲು ವಾಹನದ ಬದಲಿಗೆ ನಡೆದು ಹೋಗಬಹುದು. ಇವೆಲ್ಲಾ ನಿಯಮಿತ ಸಮಯಕ್ಕೆ ಮಾಡುವ ಕ್ಲುಪ್ತ ವ್ಯಾಯಾಮದಷ್ಟು ಪ್ರಯೋಜನಕಾರಿ ಅಲ್ಲದಿದ್ದರೂ, ನಿಷ್ಕ್ರಿಯತೆಗಿಂತ ಹಲವಾರು ಪಟ್ಟು ಉತ್ತಮ. ಹೀಗೆ ಶರೀರದ ಚಲನೆಯನ್ನು ಕಾಪಿಟ್ಟುಕೊಳ್ಳುವುದು ಮುಂದೆ ವ್ಯಾಯಾಮಪದ್ಧತಿಯನ್ನು ಬಳಸಿಕೊಳ್ಳುವ ಸ್ಫೂರ್ತಿ ಕೂಡ ಆಗಬಲ್ಲದು.

ಕೇವಲ ಹೃದ್ರೋಗ ಪೀಡಿತರು ಮಾತ್ರ ಎಂದಲ್ಲ; ಅಧಿಕ ರಕ್ತದೊತ್ತಡದ ಸಮಸ್ಯೆ ಅನುಭವಿಸುವವರು ಕೂಡ ವ್ಯಾಯಾಮದ ಮಹತ್ವವನ್ನು ಕಡೆಗಣಿಸಬಾರದು. ಮೂಳೆಗಳ, ಕೀಲುಗಳ, ಸ್ನಾಯುಗಳ ಸರಾಗ ಚಲನೆಗೆ ಎಲ್ಲ ರೀತಿಯ ವ್ಯಾಯಾಮಗಳೂ ಬಹಳ ಸಹಕಾರಿ. ನಿಯಮಿತ ವ್ಯಾಯಾಮದಿಂದ ಶರೀರದ ಮಾಂಸಖಂಡಗಳ ಬಿಗುವು ಸಡಿಲಗೊಳ್ಳುತ್ತದೆ. ಇದರಿಂದ ರಕ್ತನಾಳಗಳ ಮೇಲಿನ ಹೆಚ್ಚಿನ ಒತ್ತಡ ಕಳೆದು ರಕ್ತಸಂಚಾರ ಸರಾಗವಾಗುತ್ತದೆ. ವ್ಯಾಯಾಮದ ಮೂಲಕ ಹೆಚ್ಚಿನ ರಕ್ತ ಸಂಚರಿಸಿ, ಹೃದಯದ ಸ್ನಾಯುಗಳು ಶಕ್ತಿಯುತವಾಗಿ, ಅಧಿಕ ಕಾರ್ಯಕ್ಷಮತೆ ಲಭಿಸುತ್ತದೆ. ಇದರಿಂದ ರಕ್ತವನ್ನು ಒತ್ತುವ ಹೃದಯದ ಸಾಮರ್ಥ್ಯ ವೃದ್ಧಿಸುತ್ತದೆ. ಅಧಿಕ ರಕ್ತದೊತ್ತಡವನ್ನು ನಿಯಮಿತ ವ್ಯಾಯಾಮದಿಂದ ನಿಯಂತ್ರಣದಲ್ಲಿ ಇಡಬಹುದು ಹಾಗೂ ಔಷಧಗಳ ಮೇಲಿನ ಅವಲಂಬನೆಯನ್ನೂ ಕಡಿಮೆ ಮಾಡಬಹುದು. ಹೀಗೆ ಅಧಿಕ ರಕ್ತದೊತ್ತಡದಿಂದ ಬಳಲುವವರಲ್ಲಿ ವ್ಯಾಯಾಮ ಇಬ್ಬಗೆಯಿಂದ ಫಲಕಾರಿ.

ಹೃದ್ರೋಗಿಗಳನ್ನೂ ಸೇರಿಸಿ, ವ್ಯಾಯಾಮವೆಂಬುದು ಯಾರಿಗೂ ಆಯ್ಕೆಯಲ್ಲ; ಅದು ಶರೀರದ ನಿರ್ವಹಣೆಯ ಕಡ್ಡಾಯ ಭಾಗ. ‘ಎಂತಹ, ಎಷ್ಟು ವ್ಯಾಯಾಮ ಮಾಡಬೇಕು’ ಎಂಬುದು ಮಾತ್ರ ಆಯಾ ಕಾಯಿಲೆಗಳನ್ನು ಅನುಸರಿಸಿ ನಿರ್ಧರಿಸಬೇಕಾದ ವೈಯಕ್ತಿಕ ಅಂಶ. ಆರೋಗ್ಯವೆಂಬುದು ಚಟುವಟಿಕೆಯ ದೇಹದಲ್ಲಿರುತ್ತದೆಯೇ ಹೊರತು ಅನಗತ್ಯ ಆರಾಮದಲ್ಲಿ ಇರುವುದಿಲ್ಲ. ನಿಯಮಿತ ವ್ಯಾಯಾಮ ಹೃದಯಕ್ಕೆ ನೀಡಬಹುದಾದ ಮಹತ್ವದ ಕೊಡುಗೆಗಳಲ್ಲಿ ಒಂದು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ಗಣಿತ

ಸಮಾಂತರ ಶ್ರೇಢಿ

ಅಭ್ಯಾಸ – 5.3

10) a_n ಈ ಕೆಳಗಿನಂತೆ ನಿರೂಪಿಸಲ್ಪಟ್ಟಾಗ $a_1, a_2, \ldots, an, \ldots$ ಇದು ಒಂದು ಸಮಾಂತರ ಶ್ರೇಢಿಯನ್ನು ಉಂಟುಮಾಡುತ್ತದೆ ಎಂದು ತೋರಿಸಿ (i) $a_n = 3 + 4n$ (ii) $a_n = 9 - 5n$

ಪರಿಹಾರ: (i) (....ಹಿಂದಿನ ಸಂಚಿಕೆಯಿಂದ)

$a_3 - a_2 = 15 - 11 = 4$
$a_4 - a_3 = 19 - 15 = 4$

ಪ್ರತಿಯೊಂದು ಹಂತದಲ್ಲಿಯೂ $a_{n+1} - a_n$ ಒಂದೇ ಆಗಿದೆ ಮೇಲೆ ತಿಳಿಸಿದ ಸಂಖ್ಯೆಗಳು ಸಾಮಾನ್ಯ ವ್ಯತ್ಯಾಸ $d = 4$ ಹೊಂದಿದ್ದು $a_1, a_2, \ldots, an,$ ಸಮಾಂತರ ಶ್ರೇಢಿಗೆ ಸೇರಿದೆ.

(ii) $a_n = 9 - 5_n$

$n = 1,2,3,4$ ಹಾಕಿದಾಗ ಕ್ರಮವಾಗಿ ಕೆಳಗಿನದ್ದನ್ನು ಪಡೆಯುತ್ತೇವೆ

$a_1 = 9 - 5(1) = 9 - 5 = 4$
$a_2 = 9 + 5(2) = 9 - 10 = -1$
$a_3 = 9 + 5(3) = 9 - 15 = -6$
$a_4 = 9 + 5(4) = 9 - 20 = -11$

$\therefore a_2 - a_1 = -1 - 4 = -5$
$a_3 - a_2 = -6 - (-1) = -6 + 1 = -5$
$a_4 - a_3 = -11 - (-6) = -11 + 6 = -5$

ಪ್ರತಿಯೊಂದು ಹಂತದಲ್ಲಿಯೂ $a_{n+1} - a_n$ ಒಂದೇ ಆಗಿದೆ ಮೇಲೆ ತಿಳಿಸಿದ ಸಂಖ್ಯೆಗಳು ಸಾಮಾನ್ಯ ವ್ಯತ್ಯಾಸ $d = -5$ ಹೊಂದಿದ್ದು $a_1, a_2, \ldots, an,$ ಸಮಾಂತರ ಶ್ರೇಢಿಗೆ ಸೇರಿದೆ.

11) ಒಂದು ಸಮಾಂತರ ಶ್ರೇಢಿಯ ಮೊದಲ n ಪದಗಳವರೆಗಿನ ಮೊತ್ತ $4n - n^2$ ಆದರೆ ಮೊದಲ ಪದ (S_1) ಎಷ್ಟು? ಮೊದಲ ಎರಡು ಪದಗಳ ಮೊತ್ತವೇನು? ಎರಡನೇ ಪದ ಎಷ್ಟು? ಅದೇ ರೀತಿ 3ನೇ ಪದ, 10ನೇ ಪದ ಮತ್ತು nನೇ ಪದಗಳನ್ನು ಕಂಡುಹಿಡಿಯಿರಿ.

ಪರಿಹಾರ:– ಒಂದು ಸಮಾಂತರ ಶ್ರೇಢಿಯ ಮೊದಲ n ಪದಗಳವರೆಗಿನ ಮೊತ್ತ $4n - n^2$

$S_n = 4n - n^2$

$n = 1$ ಹಾಕಿದಾಗ

$S_1 = 4(1) - (1)^2 = 4 - 1 = 3$

$a_1 = 3$

ಮೊದಲ ಪದ = 3

$n = 2$ ಹಾಕಿದಾಗ

$S_2 = 4(2) - (2)^2 = 8 - 4 = 4$

ಪದಗಳ ಮೊತ್ತ = 4

ಎರಡನೇ ಪದ $= S_2 - S_1 = 4 - 3 = 1$

$n = 3$ ಹಾಕಿದಾಗ

$S_3 = 4(3) - (3)^2 = 12 - 9 = 3$

ಮೂರನೇ ಪದ $= a_3 = S_3 - S_2 = 3 - 4 = -1$

$n = 9, 10$ ಹಾಕಿದಾಗ

$S_9 = 4(9) - (9)^2 = 36 - 81 = -45$
$S_{10} = 4(10) - (10)^2 = 40 - 100 = -60$

$\therefore 10^{th}$ ಪದ $= a_{10} = S_{10} - S_9 = -60 - (-45) = -60 + 45 = -15$

$S_{n-1} = 4(n-1)(n-1)^2$
$4n - 4 - (n^2 - 2n + 1)$
$4n - 4 - n^2 + 2n - 1 = 6n - n^2 - 5$

nನೇ ಪದ $= a_n$

$S_n - S_{n-1}$
$(4n - n^2)(6n - n^2 - 5)$
$= 5 - 2n$

12) 6 ರಿಂದ ಭಾಗಿಸಲ್ಪಡುವ ಮೊದಲ 40 ಧನಾತ್ಮಕ ಪೂರ್ಣಾಂಕಗಳ ಮೊತ್ತವೇನು?

ಪರಿಹಾರ: 6 ರಿಂದ ಭಾಗಿಸಲ್ಪಡುವ ಮೊದಲ 40 ಧನಾತ್ಮಕ ಪೂರ್ಣಾಂಕಗಳು 6, 12, 18, 24

ಇಲ್ಲಿ

$\Rightarrow a_2 - a_1 = 12 - 6 = 6$
$\Rightarrow a_3 - a_2 = 18 - 12 = 6$
$\Rightarrow a_4 - a_3 = 24 - 18 = 6$

ಪ್ರತಿಯೊಂದು ಹಂತದಲ್ಲಿಯೂ $a_{n+1} - a_n$ ಒಂದೇ ಆಗಿದೆ ಮೇಲೆ ತಿಳಿಸಿದ ಸಂಖ್ಯೆಗಳು ಸಾಮಾನ್ಯ ವ್ಯತ್ಯಾಸ $d = 6$ ಹೊಂದಿದ್ದು, ಸಮಾಂತರ ಶ್ರೇಢಿಗೆ ಸೇರಿದೆ.

$a = 6 \quad d = 6 \quad n = 40$

$\therefore$ ಮೊದಲ 40 ಧನಾತ್ಮಕ ಪೂರ್ಣಾಂಕಗಳ ಮೊತ್ತ

$$S_n = \frac{n}{2}[2a + (n-1)d]$$

$S_{40} =$

$$S_n = \frac{40}{2}[2xa + (40-1)d]$$

$= 20(2a + 39d)$
$= (20)(2x6 + 39x6)$
$= (20)(12 + 234)$
$= (20)(246) = 4920$

13) ಮೊದಲ 15, 8ರ ಅಪವರ್ತ್ಯಗಳ ಮೊತ್ತವೇನು?

ಪರಿಹಾರ: ಮೊದಲ 15, 8ರ ಅಪವರ್ತ್ಯಗಳು

8, 16, 24, 32................

ಇಲ್ಲಿ

$\Rightarrow a_2 - a_1 = 16 - 8 = 8$
$\Rightarrow a_3 - a_2 = 24 - 16 = 8$
$\Rightarrow a_4 - a_3 = 32 - 24 = 8$

ಪ್ರತಿಯೊಂದು ಹಂತದಲ್ಲಿಯೂ $a_{n+1} - a_n$ ಒಂದೇ ಆಗಿದೆ ಮೇಲೆ ತಿಳಿಸಿದ ಸಂಖ್ಯೆಗಳು ಸಾಮಾನ್ಯ ವ್ಯತ್ಯಾಸ $d = 8$ ಹೊಂದಿದ್ದು, ಸಮಾಂತರ ಶ್ರೇಢಿಗೆ ಸೇರಿದೆ.

ಇಲ್ಲಿ $a = 8 \quad d = 8 \quad n = 15$

$\therefore$ ಮೊದಲ 15, 8ರ ಅಪವರ್ತ್ಯಗಳ ಮೊತ್ತ

$$S_n = \frac{n}{2}[2a + (n-1)d]$$

$S_{15} =$

$$S_n = \frac{15}{2}[2xa + (15-1)d]$$

$= \frac{15}{2}[2a + 14d]$
$= 15(a + 7d)$
$= 15(8 + 7x8) = (15)(8 + 56)$
$= (15)(64) = 960$

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC PHYSICS

CURRENT ELECTRICITY

27. What are the uses of superconductors?

Ans:- The uses of superconductors are -

(.........Contd)

(1) They are used as a means of storing energy.
(2) High temperature superconductors are used in magnetometers and microwave devices.
(3) A thin insulating layer between two superconductors is called a Josephson junction. It is used in extremely sensitive magnetometers called SQUIDS – superconducting quantum interference devices. It is also used as a computer element.
(4) SQUIDS are currently used to measure and interpret the weak magnetic field generated by the brain.
(5) The Meissner effect exhibited by superconductors is used in magnetic levitation. That is, a small permanent magnet can be made to float above a superconductor.
(6) Super conducting magnets are used in MRI-magnetic resonance imaging.

28. The resistance of the conductor is 6 ohms at 50^0C and 7 ohms at 100^0C. Calculate the mean temperature coefficient of resistance of the material. Find the resistance of the conductor at 0^0 C?

Ans:- $R_1 = 6\Omega s,\ t_1 = 50^0C,\ R_2 = 7\Omega s$

$t_2 = 100^0C,\ A = ?,\ R_0 = ?$


$$\alpha = \frac{R_2 - R_1}{R_1 t_2 - R_2 t_1} = \frac{7-6}{6 \times 100 - 7 \times 50} = \frac{1}{250} = 0.004/^0C$$

$$R_0 = \frac{R_2 - R_1}{\alpha(t_2 - t_1)} = \frac{1}{0.004 \times 50} = 5$$

Mean temperature co-efficient of resistance = $0.004/^0C$

Resistance of the conductor at 0^0C is 5 Ωs.

29. The resistances of the four sides of a square ABCD are 10 Ω, 5Ω, 7Ω and 2Ω in that order. A resistance of 10 Ω is connected in between A and C. Calculate the equivalent resistance between A and B.



Consider the part ADC of the network of the resistances.

It shows that the resistances AD and DC are connected in series.

Hence the effective resistance

$R_1 = 2 + 7 = 9\,\Omega$

And now we can see that the resistance of the path ADC and resistance AC are in parallel.

$\therefore$ Their effective resistance is given by,

$$R_2 = \frac{R_1 \times 10}{R_1 + 10} = \frac{9 \times 10}{9 + 10} = \frac{90}{19}\,\Omega$$

And the effective resistance R_2 of the part ADC and resistance BC are in series.

$\therefore$ Their effective resistance is given by,

$$R_3 = R_2 + 5 = \frac{90}{19} + 5 = \frac{185}{19}\,\Omega$$

The effective resistance R_3 and resistance AB are in parallel.

$\therefore$ Their effective resistance is given by

$$R = \frac{R_3 \times 10}{R_3 + 10} = \frac{185/19 \times 10}{185/19 + 10} = 4.933\Omega \approx 5.0\Omega$$

30. The length of a wire of resistance 50 Ω is doubled by stretching it. What is resistance of the stretched wire?

Ans:- The resistance of the wire is given by

$$R = \frac{\rho l}{A}$$

$R_1 = \frac{\rho l_1}{A_1}$ ...(1) and $R_2 = \frac{\rho l_2}{A_2}$ .....(2)

Dividing (2) by (1) we get,

$$\frac{R_2}{R_1} = \frac{A_1}{A_2} \times \frac{l_2}{l_1}$$

$$\Rightarrow R_2 = \frac{A_1}{A_2} \times \frac{l_2}{l_1} \times R_1$$

$l_1 = l\ ;\ l_2 = 2l$

$l_1 \times A_1 = l_2 \times A_2 \Rightarrow l \times A_1 = 2l \times A_2$

$\frac{A_1}{A_2} = 2$ and $\frac{l_2}{l_1} = 2$

$\therefore R_2 = 2 \times 2 \times 50 = 200\Omega$

31. The light of the electric lamp gets dimmer for a moment when the geyser is switched on. Why?

Ans:- The resistance of the coil of the geyser is small and hence it draws a large amount of current when switched on which affects the supply voltage. As a result of this, the voltage drops across the electric lamp for a moment till it is stabilized by the transmission line.

32. Manganin or Eureka is used for making standard resistance coils. Why?

Ans:- Manganin or Eureka has very high resistivity. Therefore,

(Contd......)

ಮಾನವ– ಆನೆ ಸಂಘರ್ಷ ನಿರ್ವಹಣೆ ಸಮಾವೇಶದಲ್ಲಿ ವಿವಿಧ ರಾಜ್ಯಗಳ ಸಚಿವರ ಸಭೆ ನಿರ್ಣಯ

ಕಾಂಪಾ ನಿಧಿಗಾಗಿ ಕೇಂದ್ರಕ್ಕೆ ನಿಯೋಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳಿಗೆ ನೀಡಬೇಕಿರುವ ₹1,000 ಕೋಟಿ ಕಾಂಪಾ (ಅರಣ್ಯೀಕರಣ ಪರಿಹಾರ ನಿಧಿ ನಿರ್ವಹಣೆ ಮತ್ತು ಯೋಜನಾ ಪ್ರಾಧಿಕಾರ) ನಿಧಿಯನ್ನು ಬಿಡುಗಡೆ ಮಾಡಿ, ಮಾನವ ಮತ್ತು ವನ್ಯಜೀವಿ ಸಂಘರ್ಷ ನಿರ್ವಹಣೆಗೆ ನೆರವು ನೀಡಲು ಆಗ್ರಹಿಸಿ ಕೇಂದ್ರ ಸರ್ಕಾರಕ್ಕೆ ನಿಯೋಗ ಕೊಂಡೊಯ್ಯಲು ವಿವಿಧ ರಾಜ್ಯಗಳ ಅರಣ್ಯ ಸಚಿವರ ಸಭೆ ನಿರ್ಣಯ ಕೈಗೊಂಡಿತು.

ಸೋಮವಾರ ಆಯೋಜಿಸಿದ್ದ ಮಾನವ ಮತ್ತು ಆನೆ ಸಂಘರ್ಷ ನಿರ್ವಹಣೆ ಕುರಿತ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ನೇತೃತ್ವದಲ್ಲಿ ನಡೆದ ಕರ್ನಾಟಕ, ಕೇರಳ, ತಮಿಳುನಾಡು, ತೆಲಂಗಾಣ, ಜಾರ್ಖಂಡ್ ರಾಜ್ಯಗಳ ಅರಣ್ಯ ಸಚಿವರ ಸಭೆಯಲ್ಲಿ ಈ ನಿರ್ಣಯಕ್ಕೆ ಬರಲಾಯಿತು.

'ಆನೆಗಳ ನಾಡಿಗೆ ಬಾರದಂತೆ ತಡೆಯಲು ರೈಲ್ವೆ ಬ್ಯಾರಿಕೇಡ್ ಉತ್ತಮ ಸಾಧನ. ಇದರ ನಿರ್ಮಾಣಕ್ಕೆ ಹೆಚ್ಚಿನ ಹಣಕಾಸಿನ ಅಗತ್ಯವಿದೆ. ಆದರೆ, ನಮಗೆ ಬರಬೇಕಿರುವ ಕಾಂಪಾ ಹಣವನ್ನೇ ಕೇಂದ್ರ ಸರ್ಕಾರ ನೀಡುತ್ತಿಲ್ಲ' ಎಂದು ಈಶ್ವರ ಖಂಡ್ರೆ ಬೇಸರ ವ್ಯಕ್ತಪಡಿಸಿದರು.

ಆನೆಗಳ ಸಂಖ್ಯೆ ಹೆಚ್ಚುತ್ತಿದೆ. ಆಫ್ರಿಕಾದಲ್ಲಿರುವಂತೆ ಆನೆ ಗರ್ಭನಿರೋಧಕಗಳನ್ನು ಇಲ್ಲಿಯೂ ಬಳಸಬಹುದು. ಗುಂಪಿನಲ್ಲಿರುವ ಯಾವ ಆನೆಗೆ ಚುಚ್ಚುಮದ್ದು ಮೂಲಕ ಈ ನಿರೋಧಕಗಳನ್ನು ನೀಡಲಾಗಿದೆ ಎಂದು ಪತ್ತೆ ಹಚ್ಚುವುದು ಕಷ್ಟವಾದರೂ ವೈಜ್ಞಾನಿಕ ತಂತ್ರವು ಕಾರ್ಯನಿರ್ವಹಿಸುತ್ತದೆ. ಆದರೆ, ಈ ಯೋಜನೆಗೆ ಕೇಂದ್ರ ಸರ್ಕಾರದ ಅನುಮತಿ ಅಗತ್ಯ ಎಂದು ವಿವಿಧ ರಾಜ್ಯಗಳ ಸಚಿವರು ಸಭೆಯಲ್ಲಿ ಹೇಳಿದರು.

ಸಭೆಯಲ್ಲಿ ನಡೆದ ಚರ್ಚೆಗಳು: ಎಲ್ಲ ರಾಜ್ಯಗಳಲ್ಲಿ ಲಂಟಾನ ಕಳೆಗಿಡದ ಹಾವಳಿ ಹೆಚ್ಚಾಗಿದೆ. ಜೊತೆಗೆ ಕೇರಳದಲ್ಲಿ ಸನ್ನಾ, ತಮಿಳುನಾಡಿನಲ್ಲಿ ಬಳ್ಳಾರಿ ಜಾಲಿ ಹೆಚ್ಚಾಗಿದೆ. ಇದರಿಂದ ಪ್ರಾಣಿಗಳಿಗೆ ಹುಲ್ಲು ಸಿಗುತ್ತಿಲ್ಲ, ಲಂಟಾನ ನಡುವೆ ಪ್ರಾಣಿಗಳಿಗೆ ಸಂಚರಿಸಲು ಆಗುವುದಿಲ್ಲ. ಕಳೆಗಳನ್ನು ನಿರ್ನಾಮ ಮಾಡಬೇಕು. ಲಂಟಾನಗಳಿಂದ ಅಲಂಕಾರಿಕ ವಸ್ತುಗಳನ್ನು ತಯಾರಿಸಲು ಪ್ರೋತ್ಸಾಹ ನೀಡಬೇಕು.

ವನ್ಯಜೀವಿಗಳಿಂದ ಜೀವ-ಹಾನಿಯಾದವರ ಕುಟುಂಬಗಳಿಗೆ ಎಲ್ಲ ರಾಜ್ಯಗಳಲ್ಲಿ ಒಂದೇ ರೀತಿಯ ಪರಿಹಾರ ನೀಡಬೇಕು. ವನ್ಯಜೀವಿಗಳು ಗ್ರಾಮಗಳತ್ತ ಬಂದಾಗ ಎಚ್ಚರಿಸಲು, ಜನರು ಆಗ ಮಾಡಬೇಕಾದ ಕಾರ್ಯಗಳ ಬಗ್ಗೆ ಮಾಹಿತಿಯನ್ನು ನೀಡಲು ಗ್ರಾಮ ಪಂಚಾಯಿತಿ ಸದಸ್ಯರು, ಗ್ರಾಮ ಸಮಿತಿ, ವಿವಿಧ ಇಲಾಖೆಗಳನ್ನು ಒಳಗೊಂಡ ವಾಟ್ಸ್‌ಆ್ಯಪ್ ಗುಂಪುಗಳನ್ನು ರಚಿಸಬೇಕು ಎಂದು ಚರ್ಚಿಸಲಾಯಿತು.



ಮಾನವ ಆನೆ ಸಂಘರ್ಷ ನಿರ್ವಹಣೆ ಕುರಿತು ಸೋಮವಾರ ನಡೆದ ಅಂತರರಾಷ್ಟ್ರೀಯ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಟ್ರ್ಯಾಂಕ್ವಿಲೈಜರ್ ರೈಫಲ್ ಹಿಡಿದು ಗುರಿಯಿಟ್ಟರು. ಇಲಾಖೆ ಪ್ರಧಾನ ಕಾರ್ಯದರ್ಶಿ ಮಂಜುನಾಥ ಪ್ರಸಾದ್, ಮುಖ್ಯಮಂತ್ರಿ ಕಾನೂನು ಸಲಹೆಗಾರ ಎ.ಎಸ್. ಪೊನ್ನಣ್ಣ, ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಜೊತೆಗಿದ್ದರು –ಪ್ರಜಾವಾಣಿ ಚಿತ್ರ / ಬಿ.ಕೆ. ಜನಾರ್ದನ್

ಅಂಕಿ ಅಂಶ

6,395 ರಾಜ್ಯದಲ್ಲಿರುವ ಆನೆಗಳ ಸಂಖ್ಯೆ

₹150 ಕೋಟಿ ಆನೆ-ಮಾನವ ಸಂಘರ್ಷ ತಪ್ಪಿಸಲು ಮಾಡಲಾಗುತ್ತಿರುವ ವೆಚ್ಚ

563 ರಾಜ್ಯದಲ್ಲಿರುವ ಹುಲಿಗಳ ಸಂಖ್ಯೆ

300 ಕಿ.ಮೀ. ರೈಲ್ವೆ ಬ್ಯಾರಿಕೇಡ್ ಅಳವಡಿಸಲಾಗುತ್ತಿದೆ

800 ಕಿ.ಮೀ. ಸೌರ ಬೇಲಿ, ಸೌರ ಟೆಂಟಕಲ್ ಬೇಲಿ, ಕಂದಕ ನಿರ್ಮಾಣ

'ಜೀವ ಹಾನಿ ಶೂನ್ಯಕ್ಕೆ ತನ್ನಿ'

ಜನರು ಆನೆಗಳೊಂದಿಗೆ ಸಹಬಾಳ್ವೆ ನಡೆಸುತ್ತಾ ಬಂದಿದ್ದಾರೆ. ಆದರೆ, ಇತ್ತೀಚೆಗೆ ವಾಸಸ್ಥಿತ್ಯದ ಗಡಿಗಳು ಬದಲಾಗುತ್ತಿರುವುದು, ಅಭಿವೃದ್ಧಿ ಚಟುವಟಿಕೆ ಹೆಚ್ಚಿರುವುದು, ಹವಾಮಾನ ಬದಲಾವಣೆ ಆನೆಗಳ ಮೇಲೆ ಒತ್ತಡವನ್ನು ಉಂಟು ಮಾಡುತ್ತಿದೆ. ಇದರಿಂದ ಸಂಘರ್ಷ ನಡೆಯುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಮಾನವ ಆನೆ ಸಂಘರ್ಷ ಕುರಿತ ಅಂತರರಾಷ್ಟ್ರೀಯ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

10 ವರ್ಷಗಳಲ್ಲಿ, ಮಾನವ-ಆನೆ ಸಂಘರ್ಷದ 2,500ಕ್ಕೂ ಹೆಚ್ಚು ಘಟನೆಗಳು ವರದಿಯಾಗಿವೆ. 350ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ. ಸಾವಿನ ಪ್ರಮಾಣವನ್ನು ಶೂನ್ಯಕ್ಕೆ ತರಲು 'ಸಾಮರಸ್ಯ' ಯೋಜನೆ ರೂಪಿಸಲಾಗುತ್ತಿದೆ ಎಂದರು.

ವಿಷಯ ಪರಿಣತರು ಮಾನವ – ಆನೆ ಸಂಘರ್ಷವನ್ನು ತಪ್ಪಿಸಲು ಕಾರ್ಯತಂತ್ರವನ್ನು ರೂಪಿಸಿ ಸರ್ಕಾರಕ್ಕೆ ವರದಿ ಸಲ್ಲಿಸಬೇಕು. ಕಾಡಂಚಿನ ರೈತರಿಗೆ ಕಿರುಕುಳ ನೀಡುವ ಕೆಲಸಗಳನ್ನು ಮಾಡಬಾರದು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಲಹೆ ನೀಡಿದರು.

'ಇನ್ನೂ 12 ಸಾವಿರ ಶಿಕ್ಷಕರ ನೇಮಕ'

ಪ್ರಜಾವಾಣಿ ವಾರ್ತೆ

ತುಮಕೂರು: ಶಾಲೆಗಳಲ್ಲಿ ಶಿಕ್ಷಕರ ಕೊರತೆ ನೀಗಿಸಲು ಈಗಾಗಲೇ 12 ಸಾವಿರ ಶಿಕ್ಷಕರನ್ನು ನೇಮಕ ಮಾಡಿಕೊಂಡಿದ್ದು, ಮುಂದಿನ ದಿನಗಳಲ್ಲಿ ಇನ್ನೂ 10 ಸಾವಿರದಿಂದ 12 ಸಾವಿರ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗುವುದು ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ತಿಳಿಸಿದ್ದಾರೆ.

ನಗರದಲ್ಲಿ ಸೋಮವಾರ ಕೆಡಿಪಿ ಸಭೆಯಲ್ಲಿ ಮಾತನಾಡಿದ ಅವರು, ಶಿಕ್ಷಕರ ನೇಮಕಕ್ಕೆ ಸಂಬಂಧಿಸಿದ ಪ್ರಸ್ತಾವ ಆರ್ಥಿಕ ಇಲಾಖೆ ಮುಂದಿದ್ದು, ಅನುಮತಿ ಸಿಕ್ಕ ನಂತರ ಪ್ರಕ್ರಿಯೆ ಆರಂಭವಾಗಲಿದೆ ಎಂದು ಹೇಳಿದರು.

ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಸಮಸ್ಯೆ ಪರಿಹರಿಸುವ ಸಲುವಾಗಿ ತಕ್ಷಣಕ್ಕೆ ಪ್ರಸಕ್ತ ಶೈಕ್ಷಣಿಕ ವರ್ಷಾರಂಭದಲ್ಲೇ 50 ಸಾವಿರ ಅತಿಥಿ ಶಿಕ್ಷಕರನ್ನು ನೇಮಿಸಿಕೊಳ್ಳಲಾಗಿದೆ. ಅನುದಾನಿತ ಶಾಲೆಗಳಲ್ಲಿ 2016ರಿಂದ 2020ರವರೆಗೆ ಖಾಲಿ ಇರುವ ಶಿಕ್ಷಕರ ಹುದ್ದೆಗಳ ಭರ್ತಿಗೆ ಆದೇಶ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಇನ್ನುಳಿದ ಹುದ್ದೆಗಳ ಭರ್ತಿಗೆ ಅವಕಾಶ ಮಾಡಿಕೊಡಲಾಗುವುದು ಎಂದರು.

ಪ್ರಸಕ್ತ ಸಾಲಿನಲ್ಲಿ ಎರಡು ಸಾವಿರ ಇಂಗ್ಲಿಷ್ ಮಾಧ್ಯಮ ಶಾಲೆ ತೆರೆಯಲಾಗಿದೆ. 1,008 ಅಂಗನವಾಡಿಗಳಲ್ಲಿ ಎಲ್‌ಕೆಜಿ, ಯುಕೆಜಿ ಆರಂಭಿಸಲಾಗಿದೆ. ಕೇವಲ 28 ದಿನಗಳಲ್ಲಿ 32 ಸಾವಿರ ಮಕ್ಕಳು ದಾಖಲಾಗಿದ್ದು, ಉತ್ತಮ ಸ್ಪಂದನ ಸಿಕ್ಕಿದೆ. ಮುಂದಿನ ವರ್ಷದ ವೇಳೆಗೆ ಇನ್ನೂ 500 ಕರ್ನಾಟಕ ಪಬ್ಲಿಕ್ ಶಾಲೆ (ಕೆಪಿಎಸ್) ತೆರೆಯಲಾಗುವುದು. ನಾಲ್ಕು ವರ್ಷಗಳಲ್ಲಿ ಹಂತಹಂತವಾಗಿ ಇಂತಹ ಮೂರು ಸಾವಿರ ಶಾಲೆ ತೆರೆಯಲು ಉದ್ದೇಶಿಸಲಾಗಿದೆ. ಇದರಿಂದ 45 ಲಕ್ಷ ಮಕ್ಕಳಿಗೆ ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ನೀಡಲು ಸಾಧ್ಯವಾಗಲಿದೆ ಎಂದು ಹೇಳಿದರು.



ಮಧು ಬಂಗಾರಪ್ಪ

ಮುಂದಿನ ದಿನಗಳಲ್ಲಿ 'ನಮ್ಮ ಶಾಲೆ ನನ್ನ ಜವಾಬ್ದಾರಿ' ವ್ಯವಸ್ಥೆ ಜಾರಿಗೆ ಬರಲಿದೆ. ಎಸ್ಎಸ್ಎಲ್‌ಸಿ ಫಲಿತಾಂಶ ಸುಧಾರಣೆಗೆ ಒತ್ತು ನೀಡಲಾಗಿದೆ. ಕ್ಷೇತ್ರ ಶಿಕ್ಷಣಾಧಿಕಾರಿಗಳು (ಬಿಇಒ) ಮತ್ತು ಸಮೂಹ ಸಂಪನ್ಮೂಲ ವ್ಯಕ್ತಿಗಳ (ಸಿಆರ್‌ಪಿ) ಸಭೆ ನಡೆಸಿ ಗುರಿ ನಿಗದಿಪಡಿಸಲಾಗುತ್ತದೆ. ಗುರಿ ಸಾಧನೆ ಮಾಡದಿದ್ದರೆ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದರು.

ಇದಕ್ಕೂ ಮುನ್ನ ಗ್ರಂಥಪಾಲಕರ ದಿನಾಚರಣೆ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಸಚಿವರು, 'ಮುಂದಿನ ವರ್ಷದಿಂದ 50 ಸಾವಿರ ಮಕ್ಕಳಿಗೆ ಸಿಇಟಿ, ನೀಟ್, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡಲಾಗುವುದು. ಈ ವರ್ಷ 25 ಸಾವಿರ ಮಕ್ಕಳು ತರಬೇತಿಗೆ ಆಯ್ಕೆಯಾಗಿದ್ದಾರೆ' ಎಂದು ಹೇಳಿದರು.

'45 ಕಾಲೇಜುಗಳಲ್ಲಿ 4 ಹೊಸ ಕೋರ್ಸ್'

ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್ ಹೇಳಿಕೆ

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಯುವಕರಲ್ಲಿ ಸ್ಪರ್ಧಾತ್ಮಕ ಮತ್ತು ಪ್ರಾಯೋಗಿಕ ಜ್ಞಾನದ ಕೌಶಲ ವೃದ್ಧಿಗಾಗಿ ರಾಜ್ಯದ 45 ಕಾಲೇಜುಗಳಲ್ಲಿ ನಾಲ್ಕು ಹೊಸ ಕೋರ್ಸ್‌ಗಳು ಪ್ರಸಕ್ತ ವರ್ಷದಿಂದ ಆರಂಭವಾಗಲಿದ್ದು, 1,500 ವಿದ್ಯಾರ್ಥಿಗಳಿಗೆ ಪ್ರವೇಶ ಸಿಗಲಿದೆ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ತಿಳಿಸಿದರು.

ಇಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕೇಂದ್ರದ ಸ್ಕಿಲ್ ಸೆಕ್ಟರ್ ಕೌನ್ಸಿಲ್ ಅಡಿ ಬಿ.ಕಾಂ ಇನ್ ಲಾಜಿಸ್ಟಿಕ್, ಬಿ.ಕಾಂ ಇನ್ ಇ-ಕಾಮರ್ಸ್, ಬಿ.ಕಾಂ ಇನ್ ರಿಟೇಲ್ ಹಾಗೂ ಬ್ಯಾಂಕಿಂಗ್ ಆ್ಯಂಡ್ ಫೈನಾನ್ಸ್ ಕೋರ್ಸ್‌ಗಳು ಶುರುವಾಗಲಿವೆ. ಎರಡು ವರ್ಷ ಥಿಯರಿ ಹಾಗೂ ಕೊನೆಯ ವರ್ಷ ಸ್ಟೈಫಂಡ್ ಸಹಿತ ಇಂಟರ್ನ್‌ಶಿಪ್ ಇರಲಿದೆ. ಇದಕ್ಕಾಗಿ ಸ್ಕಿಲ್ ಸೆಕ್ಟರ್ ಕೌನ್ಸಿಲ್ ಜತೆಗೆ ಒಪ್ಪಂದ ಮಾಡಿಕೊಳ್ಳಲಾಗುವುದು' ಎಂದರು.



'ಸಮಸ್ಯೆಗಳಿಂದ ಬಳಲುತ್ತಿರುವ ವಿಶ್ವವಿದ್ಯಾಲಯಗಳನ್ನು ಹೊರತರಲು ಕರ್ನಾಟಕ ವಿಶ್ವವಿದ್ಯಾಲಯ ಕಾಯ್ದೆಗೆ ತಿದ್ದುಪಡಿ ತರಲಾಗುವುದು. ಏಕಕಾಲದಲ್ಲಿ ಪರೀಕ್ಷೆ, ವಿಶ್ವವಿದ್ಯಾಲಯಗಳ ಚಟುವಟಿಕೆಗಳಲ್ಲಿ ಕುಲಪತಿಗಳ ಹೊಣೆಗಾರಿಕೆ ಮತ್ತು ಅವರಿಗೆ ಸಹಾಯಕರ ನಿಯೋಜನೆ, ಸಿಂಡಿಕೇಟ್ ಸದಸ್ಯರ ನೇಮಕಕ್ಕೆ ಶೈಕ್ಷಣಿಕ ಅರ್ಹತೆ, ಸ್ಥಳೀಯ ವಿಚಾರಣೆ ಸಮಿತಿಯಲ್ಲಿ ಸಿಂಡಿಕೇಟ್ ಸದಸ್ಯರ ಪಾಲ್ಗೊಳ್ಳುವಿಕೆಯಂತಹ ವಿಷಯಗಳು ಒಳಗೊಂಡಿರಲಿವೆ. ಮುಂದಿನ ಅಧಿವೇಶನದಲ್ಲಿ ಕಾಯ್ದೆಯನ್ನು ಮಂಡಿಸುವ ಚಿಂತನೆ ಇದೆ' ಎಂದರು.

'ವಿಶ್ವವಿದ್ಯಾಲಯಗಳ ಲೆಕ್ಕಪರಿಶೋಧನೆ ಮಾಹಿತಿಯು ಸರ್ಕಾರದ ಗಮನಕ್ಕೆ ಬರುತ್ತಿಲ್ಲ. ಹೀಗಾಗಿ, ವಿವಿಗಳ ಆಡಳಿತದ ಪಾರದರ್ಶಕತೆ ತರಲು ಪ್ರತಿ ವರ್ಷ ಆಡಿಟ್ ಮಾಡಿಸಿ, ವರದಿಯನ್ನು ತರಿಸಿಕೊಳ್ಳಲಾಗುವುದು' ಎಂದರು.

'ಇತ್ತೀಚಿನ ದಿನಗಳಲ್ಲಿ ಕಾಲೇಜು ಆರಂಭಿಸಿದಂತೆ ವಿಶ್ವವಿದ್ಯಾಲಯಗಳನ್ನೂ ಆರಂಭಿಸಲಾಗುತ್ತಿದೆ. ಇದರಿಂದ ವಿಶ್ವವಿದ್ಯಾಲಯಗಳ ಆರ್ಥಿಕ ಮತ್ತು ಶೈಕ್ಷಣಿಕ ಬೆಳವಣಿಗೆಗೆ ನಾವೇ ಅಡ್ಡಿ ಮಾಡಿದಂತೆ ಆಗುತ್ತಿದೆ' ಎಂದು ಬೇಸರ ವ್ಯಕ್ತಪಡಿಸಿದರು.

ಸಿ.ಎಂ ವಿರುದ್ಧ ಅಬ್ರಹಾಂ ಖಾಸಗಿ ದೂರು ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಬಿ.ಎಂ. ಪಾರ್ವತಿ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ (ಮುಡಾ) 14 ನಿವೇಶನಗಳನ್ನು ಅಕ್ರಮವಾಗಿ ಪಡೆದಿದ್ದಾರೆ. ಹಾಗಾಗಿ, ಪರೋಕ್ಷವಾಗಿ ಅಧಿಕಾರ ದುರ್ಬಳಕೆ ಮಾಡಿಕೊಂಡಿರುವ ಸಿದ್ದರಾಮಯ್ಯ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿ ತನಿಖೆ ನಡೆಸಬೇಕು' ಎಂದು ಕೋರಿ ಸಾಮಾಜಿಕ ಕಾರ್ಯಕರ್ತ ಟಿ.ಜೆ. ಅಬ್ರಹಾಂ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲಿ ಖಾಸಗಿ ದೂರು ಸಲ್ಲಿಸಿದ್ದಾರೆ.

ಈ ದೂರನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಅವರು ಮಂಗಳವಾರ (ಆ.13) ಪರಿಶೀಲನೆ ನಡೆಸಲಿದ್ದಾರೆ.

'ಸಿದ್ದರಾಮಯ್ಯ ವಿರುದ್ಧ ಭಾರತೀಯ ದಂಡ ಸಂಹಿತೆ, ಭಾರತೀಯ ನ್ಯಾಯ ಸಂಹಿತೆ ಹಾಗೂ ಭ್ರಷ್ಟಾಚಾರ ನಿಗ್ರಹ ಕಾಯ್ದೆ ವಿವಿಧ ಕಲಂಗಳಡಿಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲು ನಿರ್ದೇಶಿಸಬೇಕು' ಎಂದು ದೂರುದಾರ ಟಿ.ಜೆ.ಅಬ್ರಹಾಂ ಕೋರಿದ್ದಾರೆ.

ಸಮ್ಮೇಳನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ

ಗ್ರಂಥಾಲಯ ಮೇಲ್ವಿಚಾರಕರಿಗೆ ಕನಿಷ್ಠ ವೇತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಎಲ್ಲಾ ಗ್ರಂಥಾಲಯ ಮೇಲ್ವಿಚಾರಕರನ್ನು ಕನಿಷ್ಠ ವೇತನಕ್ಕೆ ಒಳಪಡಿಸಲು ನಿರ್ಧರಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸೋಮವಾರ ಆಯೋಜಿಸಿದ್ದ ಗ್ರಂಥಾಲಯ ಮೇಲ್ವಿಚಾರಕರ ರಾಜ್ಯ ಸಮ್ಮೇಳನ ಉದ್ಘಾಟಿಸಿ ಹಾಗೂ 6,599 ಹೊಸ ಗ್ರಾಮ ಗ್ರಂಥಾಲಯ– 'ಅರಿವು ಕೇಂದ್ರ'ಗಳಿಗೆ ಸಾಂಕೇತಿಕವಾಗಿ ಚಾಲನೆ ನೀಡಿ ಮಾತನಾಡಿದರು.

'ಪುಸ್ತಕಗಳು ಒಳ್ಳೆಯ ಸ್ನೇಹಿತ ನಿದ್ದಂತೆ. ಜ್ಞಾನ ವಿಕಾಸ ಶಾಲಾ ಶಿಕ್ಷಣದಿಂದ ಮಾತ್ರ ಸಾಧ್ಯವಿಲ್ಲ. ಶಾಲೆಗಳ ಹೊರಗೂ ಕಲಿಕೆ ಅಗತ್ಯ. ಅಕ್ಷರ ಸಂಸ್ಕೃತಿಯಿಂದ ವಂಚಿತರಾಗಿದ್ದ ಸಮುದಾಯಗಳಿಗೆ ಅಂಬೇಡ್ಕರ್ ಅವರ ಸಂವಿಧಾನದ ಕಾರಣದಿಂದ ಶಿಕ್ಷಣ ಪಡೆಯುವ ಅವಕಾಶ ಸಿಕ್ಕಿದೆ' ಎಂದು ಹೇಳಿದರು.

ಓದುವ ಹವ್ಯಾಸ ಬೆಳೆಸುವ ಉದ್ದೇಶದಿಂದಲೇ ಗ್ರಾಮ ಮಟ್ಟದಲ್ಲೂ ಉತ್ತಮ ಗ್ರಂಥಾಲಯಗಳನ್ನು ಆರಂಭಿಸಲಾಗುತ್ತಿದೆ ಎಂದರು.

ಡಿಜಿಟಲ್ ಗ್ರಂಥಾಲಯ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ, ಪ್ರಸ್ತುತ ಗ್ರಾಮ ಪಂಚಾಯಿತಿ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರಗಳನ್ನು 'ಅರಿವು ಕೇಂದ್ರ'ಗಳಾಗಿ ಮೇಲ್ದರ್ಜೆಗೇರಿಸಲಾಗಿದೆ.

5,895 ಗ್ರಾಮ ಪಂಚಾಯಿತಿ ಗ್ರಂಥಾಲಯಗಳ ಪೈಕಿ 5,691 ಗ್ರಂಥಾಲಯಗಳಿಗೆ ತಲಾ 2 ಗಣಕಯಂತ್ರಗಳು ಹಾಗೂ ಪೂರಕ ಸಾಧನಗಳನ್ನು ಒದಗಿಸಿ, ಅಂತರ್ಜಾಲ ವ್ಯವಸ್ಥೆ ಕಲ್ಪಿಸುವ ಮೂಲಕ ಡಿಜಿಟಲೀಕರಣಗೊಳಿಸಲಾಗಿದೆ. ಅಂಗವಿಕಲರಿಗೆ ಅನುಕೂಲ ಮಾಡಿಕೊಡಲು ರಾಜ್ಯಾದ್ಯಂತ 814 ಬೀಕನ್ ಗ್ರಂಥಾಲಯಗಳನ್ನು ಪ್ರಾರಂಭಿಸಲಾಗಿದೆ ಎಂದರು.

'ಓದುವ ಬೆಳಕು' ಕಾರ್ಯಕ್ರಮದಡಿ 6ರಿಂದ 18 ವರ್ಷದ ಮಕ್ಕಳಿಗೆ ಗ್ರಂಥಾಲಯದ ಸದಸ್ಯತ್ವ ನೀಡಿ ಮನೆಗೆ ಪುಸ್ತಕಗಳನ್ನು ತೆಗೆದುಕೊಂಡು ಹೋಗಿ ಓದಲು ಅವಕಾಶ ಕಲ್ಪಿಸಿಕೊಡಲಾಗಿದೆ. ಗ್ರಾಮ ಪಂಚಾಯಿತಿ ಗ್ರಂಥಾಲಯಗಳಲ್ಲಿ ಒಟ್ಟು 48.57 ಲಕ್ಷ ಮಕ್ಕಳು ನೋಂದಣಿಯಾಗಿದ್ದಾರೆ ಎಂದು ವಿವರಿಸಿದರು.

ವಿಧಾನ ಪರಿಷತ್ ಸದಸ್ಯ ಪ್ರಕಾಶ್ ರಾಥೋಡ್ ಅವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

10 ಮಂದಿಗೆ ಉತ್ತಮ ಗ್ರಂಥಪಾಲಕ ಪ್ರಶಸ್ತಿ ಪ್ರದಾನ

ತುಮಕೂರು: ಉತ್ತಮವಾಗಿ ಕಾರ್ಯನಿರ್ವಹಿಸಿದ ಗ್ರಂಥಾಲಯ ಇಲಾಖೆಯ ಹತ್ತು ನೌಕರರು ಮತ್ತು ಅಧಿಕಾರಿಗಳಿಗೆ ನಗರದಲ್ಲಿ ಸೋಮವಾರ ನಡೆದ ಸಮಾರಂಭದಲ್ಲಿ ರಾಜ್ಯ ಮಟ್ಟದ ಉತ್ತಮ ಗ್ರಂಥಪಾಲಕ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಗ್ರಂಥಪಾಲಕರ ದಿನಾಚರಣೆ ಪ್ರಯುಕ್ತ ಗ್ರಂಥಾಲಯ ಇಲಾಖೆ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ಪ್ರಶಸ್ತಿ ಪ್ರದಾನ ಮಾಡಿದರು.

ಪ್ರಶಸ್ತಿ ಪುರಸ್ಕೃತರು: ಬಿ.ಕೆ.ಲಕ್ಷ್ಮಿಕಿರಣ್ (ಮುಖ್ಯ ಗ್ರಂಥಾಲಯಾಧಿಕಾರಿ, ಬಳ್ಳಾರಿ ಕೇಂದ್ರ ಗ್ರಂಥಾಲಯ),

ಗ್ರಂಥಪಾಲಕರು: ಎಚ್.ಡಿ.ಬಸವರಾಜು (ತುಮಕೂರು ಕೇಂದ್ರ ಗ್ರಂಥಾಲಯ), ಬಿ.ನಮಿತಾ (ಉಡುಪಿ ಕೇಂದ್ರ ಗ್ರಂಥಾಲಯ).

ಗ್ರಂಥಾಲಯ ಸಹಾಯಕರು: ಎಲ್.ಲಕ್ಷ್ಮಿಕಾಂತ (ಕೇಂದ್ರ ಗ್ರಂಥಾಲಯ, ಬೆಂಗಳೂರು ಉತ್ತರ ವಲಯ), ಎಸ್.ಎನ್.ಹೇಮಾವತಿ (ಕೇಂದ್ರ ಗ್ರಂಥಾಲಯ, ಕೋಲಾರ), ಎಂ.ಬಿ.ಲೋಕೇಶ್ (ಕೇಂದ್ರ ಗ್ರಂಥಾಲಯ, ಬೆಂಗಳೂರು ದಕ್ಷಿಣ ವಲಯ), ಪಿ.ಜಲಜ (ಬೆಂಗಳೂರು ಪಶ್ಚಿಮ ವಲಯ), ಆರ್.ಮಂಜುನಾಥ್ (ದೇವನಹಳ್ಳಿ ಶಾಖಾ ಗ್ರಂಥಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ), ಪರಮೇಶ್ (ಎಚ್.ಡಿ.ಕೋಟೆ ಶಾಖಾ ಗ್ರಂಥಾಲಯ, ಮೈಸೂರು), ಕುಸುಮಾವತಿ (ಮೇಲ್ವಿಚಾರಕಿ, ಕೇಂದ್ರ ಗ್ರಂಥಾಲಯ, ಬೆಂಗಳೂರು ಪಶ್ಚಿಮ ವಲಯ)

ಕೊಂಕಣಿ ಪುಸ್ತಕ ಪುರಸ್ಕಾರಕ್ಕೆ ಆಯ್ಕೆ

ಮಂಗಳೂರು: ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯ 2022ನೇ ಸಾಲಿನ ಪುಸ್ತಕ ಪುರಸ್ಕಾರಕ್ಕೆ ಬಜಪೆಯ ರೋಶನ್ ಮೆಲ್ಕಿ ಸಿಕ್ವೇರಾ ಅವರ ಕೊಂಕಣಿ ಸಣ್ಣ ಕತೆ 'ಪೇಯಿಂಗ್ ಗೆಸ್ಟ್' ಹಾಗೂ ಪ್ರಾನ್ಸಿಸ್ ಅಲಂಗಾರ್ ಅವರ ಕೊಂಕಣಿ ಲೇಖನ 'ಜಿರೆಂ ಜಿರಿಂ' ಆಯ್ಕೆಯಾಗಿವೆ.

ಪುಸ್ತಕ ಪುರಸ್ಕಾರವು ₹25 ಸಾವಿರ ನಗದು, ಪ್ರಮಾಣಪತ್ರ ಒಳಗೊಂಡಿದೆ. ಇದೇ 20ರಂದು ಸಂಜೆ 4ಕ್ಕೆ ಮಂಗಳೂರಿನ ಪುರಭವನದಲ್ಲಿ ನಡೆಯುವ ಸಮಾರಂಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಅಕಾಡೆಮಿ ಅಧ್ಯಕ್ಷ ಜೋಕಿಂ ಸ್ಟ್ಯಾನಿ ಆಲ್ವಾರಿಸ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಯಾರಿಗೆ ಏನನ್ನೇ ಕೊಟ್ಟರೂ ಎಲ್ಲೇ ಕೊಟ್ಟರೂ ಉದಾಸೀನ ಭಾವದಿಂದ ಕೊಡಬಾರದು.

-ಪು.ತಿ.ನರಸಿಂಹಾಚಾರ್

ಪ್ಯಾರಿಸ್ ಒಲಿಂಪಿಕ್ ಕೂಟಕ್ಕೆ ತೆರೆ ಪ್ರತಿಭಾಶೋಧಕ್ಕೆ ಸಿಗಲಿ ಆದ್ಯತೆ

ಆಧುನಿಕ ಒಲಿಂಪಿಕ್ ಆಂದೋಲನದ ಪಿತಾಮಹ ಪಿಯರೆ ಡಿ ಕೊಬರ್ತಿ ಅವರ ತವರು ದೇಶದಲ್ಲಿ 100 ವರ್ಷಗಳ ನಂತರ ನಡೆದ ಒಲಿಂಪಿಕ್ ಕೂಟ ಇತಿಹಾಸದ ಪುಟದಲ್ಲಿ ಸುವರ್ಣಾಕ್ಷರಗಳಲ್ಲಿ ದಾಖಲಾಯಿತು. 200ಕ್ಕೂ ಹೆಚ್ಚು ದೇಶಗಳ, ವಿವಿಧ ಭಾಷೆ, ಸಂಸ್ಕೃತಿ ಮತ್ತು ಧರ್ಮಗಳ ಕ್ರೀಡಾಪಟುಗಳು ಒಂದೇ ವೇದಿಕೆಯಲ್ಲಿ ಸೇರಿದರು. 19 ದಿನ ನಡೆದ ಒಲಿಂಪಿಕ್ ಕೂಟಕ್ಕೆ ಭವ್ಯ ಕಳೆ ತಂದರು. ಕೋವಿಡ್ ನಂತರದ ಕಾಲಘಟ್ಟದಲ್ಲಿ ನಡೆದ ಮೊದಲ ಒಲಿಂಪಿಕ್ಸ್ ಇದಾಗಿತ್ತು. ಆದ್ದರಿಂದ ಭವಿಷ್ಯದ ಆಯೋಜಕರಿಗೆ ಮಾರ್ಗದರ್ಶಿಯಾಗುವ ಸವಾಲು ಕೂಡ ಆತಿಥೇಯ ಫ್ರಾನ್ಸ್ ಮುಂದಿತ್ತು. ಈ ಸವಾಲನ್ನು ಆತಿಥೇಯರು ಸಮರ್ಥವಾಗಿಯೇ ಎದುರಿಸಿದರು. ಪ್ಯಾರಿಸ್‌ನಲ್ಲಿರುವ ಸೆನ್ ನದಿಯಲ್ಲಿ ಉದ್ಘಾಟನೆ ಸಮಾರಂಭವನ್ನು ನಡೆಸಲಾಯಿತು. ಒಲಿಂಪಿಕ್ಸ್ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಕ್ರೀಡಾಗ್ರಾಮದಿಂದ ಹೊರಗೆ ಕೂಟದ ಅನಾವರಣ ನಡೆದಿದ್ದು ವಿಶೇಷ. ಆಟಗಾರರು, ಅತಿಥಿಗಳು ಮತ್ತು ಅಧಿಕಾರಿಗಳನ್ನು ದೋಣಿಗಳಲ್ಲಿ ಕರೆದೊಯ್ದು ಸಮಾರಂಭ ನಡೆಸಲಾಯಿತು. ಧಾರಾಕಾರ ಮಳೆಯಲ್ಲಿಯೂ ಈ ಕಾರ್ಯಕ್ರಮವನ್ನು ನಿರ್ವಹಿಸಲಾಯಿತು. ಮೂರು ವರ್ಷಗಳ ಹಿಂದೆ ಟೋಕಿಯೊದಲ್ಲಿ ಒಲಿಂಪಿಕ್ಸ್ ನಡೆದಾಗ 'ಬಯೋಬಬಲ್' ನಿಯಮದಿಂದಾಗಿ ಕ್ರೀಡಾಂಗಣಕ್ಕೆ ಜನರ ಪ್ರವೇಶ ಇರಲಿಲ್ಲ. ಈ ಸಲ ಅಂತಹ ನಿಬಂಧನೆಗಳು ಇರಲಿಲ್ಲ. ಆದ್ದರಿಂದ ಬಹುತೇಕ ಎಲ್ಲ ಕ್ರೀಡೆಗಳಿಗೂ ಪ್ರೇಕ್ಷಕರು ಕಿಕ್ಕಿರಿದು ಸೇರಿದ್ದರು. ಸಾವಿರಾರು ಜನರ ಮುಂದೆ ಕ್ರೀಡಾಪಟುಗಳು ತಮ್ಮ ಸಾಮರ್ಥ್ಯ ಮೆರೆದರು. ಅಮೆರಿಕ ಎಂದಿನಂತೆ ತನ್ನ ಪ್ರಾಬಲ್ಯ ಮೆರೆಯಿತು. 126 ಪದಕಗಳನ್ನು ಜಯಿಸಿ ಮೊದಲ ಸ್ಥಾನ ಗಳಿಸಿತು. 2028ರಲ್ಲಿ ಅಮೆರಿಕವೇ ಒಲಿಂಪಿಕ್ಸ್ ಆಯೋಜಿಸಲಿದೆ. ಲಾಸ್ ಏಂಜಲೀಸ್‌ನಲ್ಲಿ ಕೂಟ ಜರುಗಲಿದೆ. ಒಟ್ಟು 91 ಪದಕಗಳೊಂದಿಗೆ ಚೀನಾ ಈ ಸಲ ಎರಡನೇ ಸ್ಥಾನ ಪಡೆಯಿತು. ಆದರೆ ಉಭಯ ದೇಶಗಳೂ ತಲಾ 40 ಚಿನ್ನದ ಪದಕ ಗೆದ್ದು ಸಮಬಲ ಮೆರೆದವು. ಅಮೆರಿಕದ ಜಿಮ್ನಾಸ್ಟ್ ಸಿಮೊನ್ ಬೈಲ್ಸ್, ಈಜುಪಟು ಕೇಟ್ ಲೆಡಕಿ, ವೇಗದ ಓಟಗಾರ ನೊವಾ ಲೈಲ್ಸ್, ಜಪಾನಿನ ಕುಸ್ತಿಪಟು ಹಿಗುಚಿ, ಸರ್ಬಿಯಾದ ಟೆನಿಸ್ ತಾರೆ ನೊವಾಕ್ ಜೊಕೊವಿಚ್ ಸೇರಿದಂತೆ ಹಲವರು ತಮ್ಮ ಹೆಜ್ಜೆಗುರುತು ಮೂಡಿಸಿದರು.



ಕ್ರೀಡಾಪಟುವಾಗಲು ಬಯಸುವವರಿಗೆ ಶೈಕ್ಷಣಿಕ, ಆರ್ಥಿಕ ಮತ್ತು ಜೀವನಭದ್ರತೆ ನೀಡುವ ವ್ಯವಸ್ಥೆ ಬೆಳೆಯಬೇಕು

ಈ ಒಲಿಂಪಿಕ್ಸ್‌ನಲ್ಲಿ ಭಾರತದ 117 ಕ್ರೀಡಾಪಟುಗಳು, 16 ಕ್ರೀಡೆಗಳಲ್ಲಿ ಸ್ಪರ್ಧಿಸಿದ್ದರು. ಆದರೆ ಹತ್ತಕ್ಕಿಂತ ಹೆಚ್ಚು ಪದಕಗಳನ್ನು ಪಡೆಯುವ ಗುರಿ ಈಡೇರಲಿಲ್ಲ. ಭಾರತವು ಒಂದು ಬೆಳ್ಳಿ, ಐದು ಕಂಚಿನ ಪದಕಗಳನ್ನು ಜಯಿಸಿ 71ನೇ ಸ್ಥಾನ ಪಡೆಯಿತು. ಹೋದ ಬಾರಿ ಜಯಿಸಿದ್ದ ಏಳು ಪದಕಗಳ ಸಾಧನೆಯನ್ನೂ ಮೀರಲಿಲ್ಲ. ಆದರೆ, ಆರು ಸ್ಪರ್ಧೆಗಳಲ್ಲಿ ನಾಲ್ಕನೇ ಸ್ಥಾನ ಪಡೆದು ಅತ್ಯಲ್ಪ ಅಂತರದಲ್ಲಿ ಪದಕಗಳನ್ನು ಕೈತಪ್ಪಿಸಿಕೊಂಡಿತು. ಇದಲ್ಲದೇ ಭಾರತಕ್ಕೆ ದೊಡ್ಡ ಆಘಾತವಾಗಿದ್ದು ಕುಸ್ತಿಯಲ್ಲಿ. ಮಹಿಳೆಯರ 50 ಕೆ.ಜಿ. ವಿಭಾಗದಲ್ಲಿ ಫೈನಲ್ ತಲುಪಿ ಇತಿಹಾಸ ಬರೆದ ವಿನೇಶ್ ಫೋಗಟ್ ಅವರು ದೇಹತೂಕದಲ್ಲಿ 100 ಗ್ರಾಂ ಹೆಚ್ಚಾಗಿ ಅನರ್ಹಗೊಂಡರು. ಇದರಿಂದಾಗಿ ಚಿನ್ನ ಜಯಿಸುವ ಅವಕಾಶವೊಂದು ಕೈತಪ್ಪಿತು. ಈ ಪ್ರಕರಣವು ಅಂತರರಾಷ್ಟ್ರೀಯ ಮಟ್ಟದಲ್ಲಿ ದೊಡ್ಡ ಚರ್ಚೆಗೆ ಗ್ರಾಸವಾಯಿತು. ಯುವ ಕುಸ್ತಿಪಟು ಅಮನ್ ಸೆಹ್ರಾವತ್ ಅವರು ಪುರುಷರ ಕುಸ್ತಿಯಲ್ಲಿ ಕಂಚಿನ ಪದಕ ಗೆದ್ದು ಸಮಾಧಾನ ತಂದರು. ಆದರೆ ಅಂತಿಮ್ ಪಂಘಲ್ ಅವರ ಅಶಿಸ್ತಿನ ನಡೆಯು ದೇಶಕ್ಕೆ ಮುಜುಗರ ತಂದಿದ್ದು ಸುಳ್ಳಲ್ಲ. ಟೋಕಿಯೊದಲ್ಲಿ ಚಿನ್ನ ಜಯಿಸಿದ್ದ ಜಾವೆಲಿನ್ ಥ್ರೋ ಅಥ್ಲೀಟ್ ನೀರಜ್ ಚೋಪ್ರಾ ಈ ಬಾರಿ ಬೆಳ್ಳಿ ಗಳಿಸಿದರು. ಪಾಕಿಸ್ತಾನದ ಅರ್ಷದ್ ನದೀಂ ಚಿನ್ನದ ಪದಕ ಜಯಿಸಿದರು. ಪುರುಷರ ಹಾಕಿ ತಂಡವು ಸತತ ಎರಡನೇ ಬಾರಿ ಕಂಚು ಗೆದ್ದಿತು. ಆದರೆ ಪದಕ ಜಯಿಸುವ ಭರವಸೆ ಮೂಡಿಸಿದ್ದ ಬ್ಯಾಡ್ಮಿಂಟನ್, ಬಾಕ್ಸಿಂಗ್ ಹಾಗೂ ಆರ್ಚರಿ ವಿಭಾಗದ ಅಥ್ಲೀಟ್‌ಗಳು ನಿರಾಶೆ ಮೂಡಿಸಿದರು. ಶೂಟಿಂಗ್‌ನಲ್ಲಿ ಮನು ಭಾಕರ್ ಎರಡು ಕಂಚು ಗೆದ್ದು ದಾಖಲೆ ಬರೆದರು. ಸರಬ್ಜೋತ್ ಸಿಂಗ್ (ಮಿಶ್ರ ತಂಡ) ಮತ್ತು ಸ್ವಪ್ನಿಲ್ ಕುಸಾಳೆ ಅವರೂ ಪದಕ ಜಯಿಸಿ ಹೊಸ ಭರವಸೆ ಮೂಡಿಸಿದರು. ಈ ಬಾರಿ ಭಾರತದ ಕ್ರೀಡಾಪಟುಗಳಿಗೆ ತಮ್ಮೊಂದಿಗೆ ವೈಯಕ್ತಿಕ ಕೋಚ್ ಮತ್ತು ನೆರವು ಸಿಬ್ಬಂದಿ ಕರೆದೊಯ್ಯಲು ಅವಕಾಶ ನೀಡಲಾಗಿತ್ತು. ಪೂರ್ವಸಿದ್ಧತೆಗಾಗಿ ವಿದೇಶಗಳಿಗೆ ತರಬೇತಿಗೆ ಕಳುಹಿಸಲಾಗಿತ್ತು. ಟಾಪ್ (ಟಾರ್ಗೆಟ್ ಒಲಿಂಪಿಕ್ಸ್ ಪೋಡಿಯಂ) ಮೂಲಕ ಧನಸಹಾಯವನ್ನೂ ನೀಡಲಾಗಿತ್ತು. ಆದರೂ ಪದಕ ಗಳಿಕೆಯಲ್ಲಿ ಹೆಚ್ಚಳವಾಗಲಿಲ್ಲ. ಈ ಕುರಿತು ಆತ್ಮಾವಲೋಕನ ಅಗತ್ಯ. ಈ ಒಲಿಂಪಿಕ್ಸ್‌ನ ಕೆಲವು ಸ್ಪರ್ಧೆಗಳ ಫಲಿತಾಂಶಗಳು ನಿಕಟ ಪೈಪೋಟಿಯಿಂದ ಕೂಡಿದ್ದವು. ಪುರುಷರ 100 ಮೀಟರ್ ಓಟದ ಫೈನಲ್‌ನಲ್ಲಿ ಎಲ್ಲ ಎಂಟು ಸ್ಪರ್ಧಿಗಳೂ 10 ಸೆಕೆಂಡುಗಳ ಒಳಗೇ ಗುರಿ ಮುಟ್ಟಿದ್ದರು. ಮೊದಲ ಹಾಗೂ ಎರಡನೇ ಸ್ಥಾನದ ನಡುವಿನ ಅಂತರ 0.005 ಸೆಕೆಂಡಿನಷ್ಟು ಮಾತ್ರವಾಗಿತ್ತು. ಅಂದರೆ ಜಾಗತಿಕವಾಗಿ ಸ್ಪರ್ಧೆಯು ಎಷ್ಟು ಕಠಿಣವಾಗಿದೆ ಎಂಬುದನ್ನು ಇದು ತೋರಿಸುತ್ತದೆ. ಆ ಹಂತಕ್ಕೆ ಬೆಳೆಯಲು ಭಾರತದ ಅಥ್ಲೀಟ್‌ಗಳಿಗೆ ಇನ್ನೂ ಹೆಚ್ಚಿನ ತಂತ್ರಜ್ಞಾನ, ಕ್ರೀಡಾ ವಿಜ್ಞಾನ ಮತ್ತು ಮನೋವಿಜ್ಞಾನದ ನೆರವು ಅಗತ್ಯವಿದೆ. ಒಲಿಂಪಿಕ್ಸ್‌ನಲ್ಲಿ ನಡೆಯುವ 30ಕ್ಕಿಂತ ಹೆಚ್ಚು ಕ್ರೀಡೆಗಳಲ್ಲಿ ಸ್ಪರ್ಧಿಸುವ ಪ್ರತಿಭೆಗಳನ್ನು ಸಿದ್ಧಗೊಳಿಸಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಕ್ರೀಡಾಸಂಸ್ಕೃತಿಯನ್ನು ಬೆಳೆಸುವ ತುರ್ತು ಇದೆ. ಇದಕ್ಕೂ 'ಮನೆಯೇ ಮೊದಲ ಶಾಲೆ' ಆಗಬೇಕು. ಶಾಲೆಗಳು ಕ್ರೀಡಾಪಟುಗಳನ್ನು ಬೆಳೆಸುವ ತಾಣಗಳಾಗಬೇಕು. ಕ್ರೀಡಾಪಟುವಾಗಲು ಬಯಸುವವರಿಗೆ ಶೈಕ್ಷಣಿಕ, ಆರ್ಥಿಕ ಮತ್ತು ಜೀವನಭದ್ರತೆ ನೀಡುವ ವ್ಯವಸ್ಥೆ ಬೆಳೆಯಬೇಕು. ಆಗ ಹೆಚ್ಚು ಪದಕ ಜಯಿಸುವ ಕನಸು ನನಸಾಗುವ ಸಾಧ್ಯತೆಗಳೂ ಹೆಚ್ಚುತ್ತವೆ.

ದಿನದ ಟ್ವೀಟ್

ಮೀನು ತಿನ್ನುವ ಮುನ್ನ...



ಶ್ವಾಸಾಂಗದಲ್ಲಿ ಅಮೋನಿಯಾ ಫಾರ್ಮಲಿನ್ ಮಾತ್ರೆಗಳನ್ನು ಇರಿಸುವುದರಿಂದ ಮೀನುಗಳು ನಾಲ್ಕೈದು ದಿನ ತಾಜಾ ಆಗಿ ಇರುತ್ತವೆ. ಮಾತ್ರೆಯು ಕರಗಿ ಅದರಲ್ಲಿನ ರಾಸಾಯನಿಕ ಅಂಶವು ಮೀನಿನ ದೇಹ ಸೇರಿ, ಅದು ಕೊಳೆಯುವುದನ್ನು ತಡೆಯುತ್ತದೆ. ಆದರೆ ಅಂತಹ ಫಾರ್ಮಲಿನ್ ಸಹಿತ ಮೀನನ್ನು ನಿರಂತರವಾಗಿ ಸೇವಿಸುವುದು ಮೂತ್ರಕೋಶಕ್ಕೆ ಹಾನಿಯುಂಟು ಮಾಡುತ್ತದೆ. ಇದು ಅಪರಾಧ ಕೃತ್ಯ. ಮುಗ್ಧ ಗ್ರಾಹಕರಿಗೆ ನಿಧಾನವಾಗಿ ವಿಷವುಣಿಸುವ ಪ್ರಕ್ರಿಯೆ...

ರಾಕೇಶ್ ಕೃಷ್ಣನ್ ಸಿಂಹ, ಪತ್ರಕರ್ತ

ಕಿಡಿನುಡಿ

ಬೆಂಗಳೂರನ್ನು ಒಂದು ಪಕ್ಷದ ನೇತೃತ್ವದ ಸರ್ಕಾರ ಸಿಂಗಪುರ ಮಾಡುವುದಾಗಿ ಭರವಸೆ ನೀಡುತ್ತದೆ, ಮತ್ತೊಂದು ಪಕ್ಷದ ನೇತೃತ್ವದ ಸರ್ಕಾರ ಲಂಡನ್ ಮಾಡುವುದಾಗಿ ಆಶ್ವಾಸನೆ ನೀಡುತ್ತದೆ. ಅಂತಿಮವಾಗಿ, ಎಲ್ಲ ಕಾಲಕ್ಕೂ ಫಲಿತಾಂಶ ಮಾತ್ರ ಒಂದೇ ಬಗೆಯದಾಗಿರುತ್ತದೆ– ಕೊನೆಗೂ ಅದು ಆಗುವುದು ಮಾತ್ರ ವೆನಿಸ್‌ನಂತೆ.

ಭಾಸ್ಕರ್

25 ವರ್ಷಗಳ ಹಿಂದೆ

ಶುಕ್ರವಾರ, 13-8-1999

• ಉನ್ನತ ವೃತ್ತಿಶಿಕ್ಷಣ ಪ್ರವೇಶ ಮೀಸಲಾತಿ ರದ್ದು

ನವದೆಹಲಿ, ಆ. 12 (ಪಿಟಿಐ)– ರಾಷ್ಟ್ರದ ಹಿತಾಸಕ್ತಿಯ ದೃಷ್ಟಿಯಿಂದ, ವೈದ್ಯಕೀಯ ಹಾಗೂ ಎಂಜಿನಿಯರಿಂಗ್‌ನ ಸೂಪರ್ ಸ್ಪೆಷಾಲಿಟಿ ಅಧ್ಯಯನದ ತರಗತಿಗಳಿಗೆ ಭರ್ತಿಯು ಅರ್ಹತೆಯ ಆಧಾರದಲ್ಲಿ ಮಾತ್ರವೇ ನಡೆಯಬೇಕು. ಇದಕ್ಕೆ ಮೀಸಲಾತಿ ಕೂಡದು ಎಂದು ಸುಪ್ರೀಂ ಕೋರ್ಟ್ ಇಂದು ಮಹತ್ವದ, ಚಾರಿತ್ರಿಕ ತೀರ್ಪು ನೀಡಿದೆ.

'ಸೂಪರ್ ಸ್ಪೆಷಾಲಿಟಿ ಹಂತದಲ್ಲಿ ಅರ್ಹತೆಯ ಆಧಾರದಲ್ಲಿ ಮಾತ್ರ ಪ್ರವೇಶ, ಮೀಸಲಾತಿ ಕೂಡದು' ಎಂದು ಐವರು ನ್ಯಾಯಮೂರ್ತಿಗಳನ್ನು ಒಳಗೊಂಡ ಸಂವಿಧಾನ ಪೀಠವು ಅವಿರೋಧವಾಗಿ ತೀರ್ಪು ಕೊಟ್ಟಿತು.

ಅಲ್ಲದೆ ವೈದ್ಯಕೀಯದ ಸ್ನಾತಕೋತ್ತರ ತರಗತಿಗಳಿಗೆ ಪ್ರವೇಶ ನೀಡುವ ಸಂದರ್ಭದಲ್ಲಿ ಸಾಮಾನ್ಯ ವರ್ಗ ಹಾಗೂ ಮೀಸಲಾತಿ ವರ್ಗದ ವಿದ್ಯಾರ್ಥಿಗಳ ಕನಿಷ್ಠ ಅಂಕಗಳ ನಡುವೆ ಭಾರಿ ವ್ಯತ್ಯಾಸ ಇರಬಾರದು ಎಂದು ನಾಲ್ಕು ಪರ ಹಾಗೂ ಒಂದು ವಿರೋಧ ಮತಗಳಿಂದ ಪೀಠವು ಆದೇಶಿಸಿತು.

50 ವರ್ಷಗಳ ಹಿಂದೆ

ಮಂಗಳವಾರ, 13-8-1974

• ಕಾಲುಗಳು ಬೇಕಾಗಿವೆ!

ಬೆಂಗಳೂರು, ಆ. 12– 1965ರಲ್ಲಿ ಆರಂಭವಾಗಿ 1968ರ ಮಾರ್ಚ್ ತಿಂಗಳಲ್ಲಿ ಅಂತ್ಯಗೊಂಡ ಒಪ್ಪಂದವೊಂದನ್ನು ಪಾಲಿಸಲು, ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಯು 1970ರಲ್ಲಿ 9,633 ಜತೆ ಪಠಾಣ್ ಚಪ್ಪಲಿಗಳನ್ನು ಖರೀದಿಸಿತು.

1970ರ ಜುಲೈ ತಿಂಗಳಲ್ಲಿ ಒಪ್ಪಂದದ ನವೀಕರಣವಾಯಿತು. ಅದರ ಪ್ರಕಾರ, ಚಪ್ಪಲಿ ಬದಲು ಷೂಗಳನ್ನು ಕೊಡಬೇಕೆಂದಾಯಿತು. ಅದರ ಪರಿಣಾಮವಾಗಿ, ಹಂಚಿ ಉಳಿದ 2,000 ಜತೆ ಚಪ್ಪಲಿಗಳು ಮೂಲೆಗುಂಪು. ಅದರ ಮಾರಾಟಕ್ಕೆ ಮರುವರ್ಷ ಟೆಂಡರ್ ಕರೆದರು. ತೀರಾ ಅಲ್ಪಬೆಲೆಯಾದ್ದರಿಂದ ತಿರಸ್ಕರಿಸಲಾಯಿತು.

ಕೊನೆಗೆ 12 ರೂಪಾಯಿಗಳ ಚಪ್ಪಲಿಯನ್ನು 6 ರೂಪಾಯಿಗಳಂತೆ ನೌಕರರಿಗೇ ಮಾರಲು ನಿರ್ಧರಿಸಿದರು. ಅದರ ಫಲವೂ ಅಷ್ಟಕ್ಕಷ್ಟೇ. 4,805 ಚಪ್ಪಲಿಗಳು ಇನ್ನೂ ಕಾಲುಗಳಿಗಾಗಿ ಕಾಯುತ್ತಿವೆ! ಇದು 1971–72ರ ಆಡಿಟ್ ವರದಿ ಎತ್ತಿ ತೋರಿಸಿರುವ ಒಂದು ಪ್ರಕರಣ.

ವ್ಯಕ್ತಿ ಯಾವ ಪಕ್ಷವನ್ನು ಬೆಂಬಲಿಸುತ್ತಿದ್ದಾನೆ ಎಂಬುದು ಆತನ ನಿಲುವು ಏನಾಗಿರುತ್ತದೆ ಎಂಬುದನ್ನು ನಿರ್ಧರಿಸುತ್ತಿದೆ

'ನಿಮ್ಮ ಭ್ರಷ್ಟಾಚಾರ'ದಿಂದ ಸಮಸ್ಯೆ!



ಜನರಾಜಕಾರಣ

ಪ್ರೊ. ಸಂದೀಪ್ ಶಾಸ್ತ್ರಿ

ಕರ್ನಾಟಕದ ರಾಜಕಾರಣದಲ್ಲಿ ಎರಡು ವಾರಗಳಿಂದ ಯಾವ ಲಗಾಮೂ ಇಲ್ಲದ ಕೆಸರೆರಚಾಟವೊಂದು ನಡೆದಿದೆ. ಹಿಂದೆಂದೂ ಕಾಣದಂತಹ ಬಗೆಯಲ್ಲಿ ಇದು ಆಗಿದೆ. ಆರೋಪ ಹಾಗೂ ಪ್ರತ್ಯಾರೋಪಗಳು ಭಾರಿ ಪ್ರಮಾಣದಲ್ಲಿ ನಡೆದಿವೆ. ಪ್ರತಿ ರಾಜಕೀಯ ಪಕ್ಷವೂ ತನ್ನ ಎದುರಾಳಿ ಪಕ್ಷವು ಭ್ರಷ್ಟಾಚಾರದ ಮೂರ್ತರೂಪ ಎಂಬ ಆರೋಪ ಹೊರಿಸುವುದರಲ್ಲಿ ಬಹಳ ಸಂತೋಷವನ್ನು ಕಾಣುತ್ತಿದೆ.

ಇಲ್ಲಿ 'ನಿಮ್ಮ ಭ್ರಷ್ಟಾಚಾರ' ಹಾಗೂ 'ನನ್ನ ಭ್ರಷ್ಟಾಚಾರ' ಎಂಬ ಸಮರವೊಂದು ನಡೆದಿದೆ. ಒಂದು ತಪ್ಪು ಇನ್ನೊಂದು ತಪ್ಪನ್ನು ಸರಿಪಡಿಸಲು ಯತ್ನಿಸುತ್ತಿರುವಂತೆ ಕಾಣುತ್ತಿದೆ. ರಾಜಕೀಯ ಕೆಸರೆರಚಾಟವು ತೀರಾ ಕೆಳಮಟ್ಟವನ್ನು ತಲುಪಿರುವುದು ಬಹಳ ಸ್ಪಷ್ಟವಾಗಿದೆ. ಪ್ರತಿ ರಾಜಕೀಯ ವ್ಯಕ್ತಿ, ಸಂಸ್ಥೆಯ ಮಟ್ಟದಲ್ಲಿ ನೈತಿಕತೆಯು ನಿಧಾನವಾಗಿ ಕುಸಿಯುತ್ತ ಸಾಗಿದೆ.

ರಾಜಕೀಯ ಮೇಲಾಟದಲ್ಲಿ ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷಗಳ ಮೈತ್ರಿಕೂಟವು ತಮ್ಮ ಗುರಿ ಸಾಧನೆಗೆ ಯಾವ ಹೆಜ್ಜೆ ಇರಿಸುವುದಕ್ಕೂ ಹಿಂಜರಿಯುತ್ತಿಲ್ಲ. ಎರಡೂ ಕಡೆಯವರು ತಮ್ಮ ಎದುರಾಳಿ ಗುಂಪಿನ ಮೇಲೆ ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡ, ನಿಯಮಗಳನ್ನು ಉಲ್ಲಂಘಿಸಿದ, ವ್ಯಾಪ್ತಿ ಮೀರಿ ಅಧಿಕಾರ ಚಲಾಯಿಸಿದ, ಪಾರದರ್ಶಕವಾಗಿ ನಡೆದುಕೊಂಡಿಲ್ಲದ, ಭ್ರಷ್ಟಾಚಾರದಲ್ಲಿ ತೊಡಗಿದ ಆರೋಪಗಳನ್ನು ಹೊರಿಸುತ್ತಿದ್ದಾರೆ. 2023ರ ವಿಧಾನಸಭಾ ಚುನಾವಣೆಯ ಮೊದಲು ಶುರುವಾಗಿದ್ದು, ಲೋಕಸಭಾ ಚುನಾವಣೆಯ ಫಲಿತಾಂಶ ಪ್ರಕಟವಾದ ಎರಡು ತಿಂಗಳ ನಂತರವೂ ಮುಂದುವರಿದಿದೆ.

ತಾನು ನಡೆದುಬಂದ ಹಾದಿಯನ್ನು ಸಮರ್ಥಿಸಿಕೊಳ್ಳುವುದಕ್ಕಿಂತಲೂ ಹೆಚ್ಚಾಗಿ ಎದುರಾಳಿಯ ಮೇಲೆ ಆಕ್ರಮಣ ನಡೆಸುವ ಈ ಕಾರ್ಯತಂತ್ರ ಮತ್ತು ಪರಸ್ಪರ ಸಂಬಂಧವಿರುವ ಮೂರು ಬೆಳವಣಿಗೆಗಳಿಗೆ ನಂಟು ಇದೆ. ಮೊದಲನೆಯದಾಗಿ, ಭ್ರಷ್ಟಾಚಾರದ ವಿರುದ್ಧದ ಸಮರವೆಂಬುದು ಜನರಲ್ಲಿನ ಗ್ರಹಿಕೆಗಳ ಮಟ್ಟದಲ್ಲಿಯೂ ಇರುತ್ತದೆ. ರಾಜಕೀಯ ಪಕ್ಷಗಳು ಮತ್ತು ಅವುಗಳ ನಾಯಕತ್ವವು ತಮ್ಮ ಎದುರಾಳಿಗಳನ್ನು ಗುರಿಯಾಗಿಸಿಕೊಂಡು ಕಾರ್ಯತಂತ್ರ ರೂಪಿಸುತ್ತವೆ ಅಥವಾ ತಮ್ಮ ಸಾಧನೆಗಳನ್ನು ಬಿಂಬಿಸಲು ಕಾರ್ಯತಂತ್ರ ರೂಪಿಸುತ್ತವೆ. ಭ್ರಷ್ಟಾಚಾರ ಹಾಗೂ ಅಧಿಕಾರ ದುರ್ಬಳಕೆಯ ವಿಚಾರ ಬಂದಾಗ, ಆಳುವ ಪಕ್ಷಗಳಿಗೆಲ್ಲ ತಮ್ಮನ್ನು ಸಮರ್ಥಿಸಿಕೊಳ್ಳಲು ಬಹಳಷ್ಟು ಸಂಗತಿ ಗಳಿರುತ್ತವೆ. ಅವು ವಿರೋಧ ಪಕ್ಷಗಳ ಮೇಲೆ ಆಕ್ರಮಣಕಾರಿ ಧೋರಣೆ ತಳೆಯುತ್ತವೆ.

ಅದೇ ರೀತಿಯಲ್ಲಿ, ವಿರೋಧ ಪಕ್ಷದ ಸಾಲಿನಲ್ಲಿ ಇದ್ದಾಗ ಅದು ತಾನು ಅಧಿಕಾರದಲ್ಲಿ ಇದ್ದಾಗ ಮಾಡಿದ್ದನ್ನು ಹೆಚ್ಚಾಗಿ ಹೇಳಲು ಮುಂದಾಗುವುದಿಲ್ಲ. ಆದರೆ, ಆಗ ಆಡಳಿತದ ಚುಕ್ಕಾಣಿ ಹಿಡಿದಿರುವ ಪಕ್ಷದ ಮೇಲೆ ಆಕ್ರಮಣ ನಡೆಸುತ್ತದೆ. ಆ ಮೂಲಕ, ಜನರಲ್ಲಿ ಗ್ರಹಿಕೆಯೊಂದನ್ನು ಮೂಡಿಸುವ ಸಮರವೊಂದು ಶುರುವಾಗುತ್ತದೆ. ಎದುರಾಳಿಯ ಮೇಲೆ ದಾಳಿ ನಡೆಸುವ ತೀರ್ಮಾನವೊಂದು ಅದಾಗಲೇ ಆಗಿಬಿಟ್ಟಿರುತ್ತದೆ.

ಆಕ್ರಮಣ ನಡೆಸಬೇಕು ಎಂಬುದನ್ನು ತೀರ್ಮಾನಿಸಿಕೊಂಡ ನಂತರದಲ್ಲಿ ಪಕ್ಷಗಳು ಅದಕ್ಕೆ ಬೇಕಿರುವ ಅಸ್ತ್ರಗಳು ಏನಿವೆ ಎಂಬುದನ್ನು ಶೋಧಿಸಲು ಮುಂದಾಗುತ್ತವೆ. ಅಂದರೆ, ಮೊದಲೇ ಕೈಗೊಂಡ ತೀರ್ಮಾನವನ್ನು ಸಮರ್ಥಿಸಲು ಕಾರಣಗಳನ್ನು ಹುಡುಕುತ್ತವೆ! ಕೊನೆಯಲ್ಲಿ, ತಮಗೆ ಏನೇ ಸಿಕ್ಕಿದರೂ ಆ ವಿಷಯವನ್ನು ಬಳಸಿಕೊಂಡು ಎದುರಾಳಿಗಳ ಮೇಲೆ ಆರೋಪ ಮಾಡಲಾಗುತ್ತದೆ. ಎರಡನೆಯ ವಿಚಾರವು ಮೊದಲನೆಯದರೊಂದಿಗೆ ಸಹಜವಾಗಿಯೇ ಬೆಸೆದುಕೊಂಡಿದೆ. ಕರ್ನಾಟಕದ ರಾಜಕಾರಣದಲ್ಲಿ ಬಹಳ ಪ್ರಬಲವಾದ ಧ್ರುವೀಕರಣ ಆಗಿದೆ. ಜನರು ವಿಭಿನ್ನ ರಾಜಕೀಯ ಪಕ್ಷಗಳ ಜೊತೆ ಬಲವಾಗಿ ಗುರುತಿಸಿಕೊಂಡಿದ್ದಾರೆ. ಹೀಗೆ ಪಕ್ಷಗಳ ಜೊತೆ ಗುರುತಿಸಿಕೊಂಡಿರುವ ಜನರ ಅಭಿಪ್ರಾಯ ಅವರು ಬೆಂಬಲಿಸುವ ರಾಜಕೀಯ ಪಕ್ಷಗಳ ಮೂಲಕ ತೀರ್ಮಾನವಾಗುತ್ತಿದೆ. ಯಾವ ವಿಚಾರದಲ್ಲಿ ಯಾರ ವಿಚಾರ, ನಿಲುವು ಏನಿರುತ್ತದೆ ಎಂಬುದು ಅವರು ಯಾರ ಜೊತೆ ಗುರುತಿಸಿಕೊಂಡಿದ್ದಾರೆ ಎಂಬುದನ್ನು ಆಧರಿಸಿರುತ್ತದೆ.

ಎರಡು ದತ್ತಾಂಶಗಳು ಇಲ್ಲಿ ಪ್ರಮುಖವಾಗುತ್ತವೆ. 2023ರ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಲೋಕನೀತಿ ಮತ್ತು ಸಿಎಸ್‌ಡಿಎಸ್ ಸಂಸ್ಥೆಗಳು ನಡೆಸಿದ ಸಮೀಕ್ಷೆಯು ಆಡಳಿತಾರೂಢ ಬಿಜೆಪಿಗೆ ಇನ್ನೊಂದು ಅವಧಿಗೆ ಸರ್ಕಾರವನ್ನು ಮುನ್ನಡೆಸಲು ಅವಕಾಶ ಸಿಗಬೇಕೇ ಎಂಬ ಪ್ರಶ್ನೆಯನ್ನು ಮತದಾರರ ಮುಂದೆ ಇರಿಸಿತ್ತು. ಇದಕ್ಕೆ ಬಂದ ಪ್ರತಿಕ್ರಿಯೆಗಳು ಸ್ಪಷ್ಟವಾಗಿ ಪಕ್ಷಗಳ ನೆಲೆಯಲ್ಲೇ ಇದ್ದವು. ಬಿಜೆಪಿಗೆ ಮತ ಚಲಾಯಿಸಿದ ಶೇ 89ರಷ್ಟು ಮಂದಿ ಈ ಪ್ರಶ್ನೆಗೆ 'ಹೌದು' ಎಂದೂ, ಕಾಂಗ್ರೆಸ್ಸಿಗೆ ಮತ ಚಲಾಯಿಸಿದ್ದ ಶೇ 85ರಷ್ಟು ಮಂದಿ 'ಬೇಡ' ಎಂದೂ ಉತ್ತರಿಸಿದ್ದರು. ಆ ಸಂದರ್ಭದಲ್ಲಿ ಜೆಡಿಎಸ್‌ಗೆ ಮತ ನೀಡಿದ್ದ ಶೇ 75ರಷ್ಟು ಮಂದಿ 'ಬೇಡ' ಎಂದೇ ಹೇಳಿದ್ದರು.

2024ರ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ನಡೆದ ಲೋಕನೀತಿ–ಸಿಎಸ್‌ಡಿಎಸ್ ಚುನಾವಣೋತ್ತರ ಸಮೀಕ್ಷೆಯಲ್ಲಿ, 'ಕೇಂದ್ರದಲ್ಲಿ ಬಿಜೆಪಿಗೆ ಇನ್ನೊಂದು ಅವಧಿಗೆ ಅವಕಾಶ ನೀಡಬೇಕೇ' ಎಂಬ ಪ್ರಶ್ನೆಯನ್ನು ಕೇಳಲಾಗಿತ್ತು. ಕರ್ನಾಟಕದ ಬಿಜೆಪಿ ಮತದಾರರ ಪೈಕಿ ಶೇ 78ರಷ್ಟು ಮಂದಿ 'ನೀಡಬೇಕು' ಎಂದು ಉತ್ತರಿಸಿದರು. ಕಾಂಗ್ರೆಸ್ ಮತದಾರರ ಪೈಕಿ ಶೇ 65ರಷ್ಟು ಮಂದಿ 'ನೀಡಬಾರದು' ಎಂದರು. ಕುತೂಹಲದ ಸಂಗತಿಯೆಂದರೆ, ಈ ಬಾರಿ ಜೆಡಿಎಸ್ ಮತದಾರರ ಪೈಕಿ ಶೇ 92ರಷ್ಟು ಮಂದಿ 'ಇನ್ನೊಂದು ಅವಧಿಗೆ ಅವಕಾಶ ನೀಡಬೇಕು' ಎಂದರು.



ಇದರ ಇಂಗಿತಾರ್ಥ ಏನು ಎಂಬುದು ಬಹಳ ಸ್ಪಷ್ಟವಾಗಿದೆ. ವ್ಯಕ್ತಿ ಯಾವ ಪಕ್ಷವನ್ನು ಬೆಂಬಲಿಸುತ್ತಿದ್ದಾನೆ ಎಂಬುದು ಆತನ ನಿಲುವು ಏನಾಗಿರುತ್ತದೆ ಎಂಬುದನ್ನು ನಿರ್ಧರಿಸುತ್ತಿದೆ. ಅಂದರೆ, ಇಲ್ಲಿ ಜನರಲ್ಲಿ ಮೂಡುವ ಗ್ರಹಿಕೆಯನ್ನು ಆಧರಿಸಿದ ಸಮರವು ಬಹಳ ಮಹತ್ವ ಪಡೆದುಕೊಳ್ಳುತ್ತದೆ.

ಮೂರನೆಯದು, ಪಕ್ಷಗಳು ತಮ್ಮ ಬೆಂಬಲಿಗರನ್ನು ಖುಷಿಪಡಿಸಲು ಬಹಳ ಆಸಕ್ತಿ ತೋರುತ್ತಿವೆ ಹಾಗೂ ಅವರನ್ನು ತಮ್ಮ ಜೊತೆ ಇರಿಸಿಕೊಳ್ಳಲು ಉತ್ಸುಕವಾಗಿವೆ. ಇದಕ್ಕಾಗಿ, ಆ ಪಕ್ಷಗಳು ಎದುರಾಳಿ ಪಕ್ಷವನ್ನು 'ಭ್ರಷ್ಟ' ಎಂದು ಚಿತ್ರಿಸಲು ಯತ್ನಿಸುವುದು ಏಕೆ? ಎದುರಾಳಿ ಪಕ್ಷದ ಪ್ರತಿಬಿಂಬವೇ ತಾನು ಎಂಬುದನ್ನು ಆ ಪಕ್ಷವು ಮರೆಯುತ್ತಿದೆಯೇ? ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳಲ್ಲಿ ಇರುವ ಆಂತರಿಕ ಗುಂಪುಗಾರಿಕೆಯನ್ನು ಗಮನಿಸಿದರೆ, ಒಂದು ಪಕ್ಷವು ಎದುರಾಳಿ ಪಕ್ಷವನ್ನು ರಾಜಕೀಯವಾಗಿ ವಿರೋಧಿಸುತ್ತ ಇರುತ್ತದೆಯಾದರೂ, ಪಕ್ಷದೊಳಗಿನ ವ್ಯಕ್ತಿಗಳು ತಮ್ಮ ನೆಲೆಯನ್ನು ಭದ್ರಪಡಿಸಿಕೊಳ್ಳಲಿಕ್ಕೆ ಕೂಡ ಯತ್ನಿಸುತ್ತ ಇರುತ್ತಾರೆ.

ರಾಜಕೀಯ ಪಕ್ಷಗಳು ಮಾಡುವ ಮನವಿಗಳು ರಾಜ್ಯದ ಎಲ್ಲರನ್ನೂ ಉದ್ದೇಶಿಸಿರುತ್ತವೆಯೇ? ಮನವಿಗಳು ಎಲ್ಲರನ್ನೂ ಉದ್ದೇಶಿಸಿರುತ್ತವೆಯೇ ಅಥವಾ ಮನವಿ ಮಾಡುವ ವ್ಯಕ್ತಿಯ ಬೆಂಬಲಿಗರನ್ನು ಒಗ್ಗಟ್ಟಾಗಿ ಇರಿಸಿಕೊಳ್ಳುವ ಉದ್ದೇಶವನ್ನು ಮಾತ್ರ ಹೊಂದಿರುತ್ತವೆಯೇ? ಈ ಪ್ರಶ್ನೆಗಳಿಗೆ ಹೊಂದಿಕೊಂಡಿರುವ ಇನ್ನೊಂದು ಸಂಗತಿಯೆಂದರೆ, ಸರ್ಕಾರದ ನಿಯಂತ್ರಣದಲ್ಲಿ ಇರುವ ಸಂಸ್ಥೆಗಳು ನಿಷ್ಪಕ್ಷಪಾತ ಎಂಬ ನಂಬಿಕೆ ಸಾರ್ವಜನಿಕರಲ್ಲಿ ಕಡಿಮೆ ಆಗುತ್ತಿರುವುದು. 2024ರ ಲೋಕಸಭಾ ಚುನಾವಣೆಗೂ ಮೊದಲು ನಡೆದ ಸಿಎಸ್‌ಡಿಎಸ್–ಲೋಕನೀತಿ ಸಮೀಕ್ಷೆಯು ಪ್ರಮುಖ ಸಂಸ್ಥೆಗಳಿಗೆ ಸಂಬಂಧಿಸಿದ ಕೆಲವು ಪ್ರಶ್ನೆಗಳನ್ನು ಜನರ ಮುಂದೆ ಇರಿಸಿತ್ತು. ಸಂಸ್ಥೆಗಳನ್ನು ರಾಜಕೀಯ ಹಗೆ ತೀರಿಸಿಕೊಳ್ಳಲು ಬಳಸಲಾಗುತ್ತಿದೆ ಎಂದು ಹೇಳಿದವರ ಸಂಖ್ಯೆಯು ಸಂಸ್ಥೆಗಳು ತಮ್ಮ ವ್ಯಾಪ್ತಿಯ ಒಳಗೇ ಕೆಲಸ ಮಾಡುತ್ತಿವೆ ಎಂದು ಹೇಳಿದವರ ಸಂಖ್ಯೆಗಿಂತ ಹೆಚ್ಚಿತ್ತು.

ಇವೆಲ್ಲವೂ ನಮ್ಮನ್ನು ಮುಟ್ಟಿಸುವುದು ಒಂದು ಸಿನಿಕ ತೀರ್ಮಾನಕ್ಕೆ. ರಾಜಕೀಯ ಪಾತ್ರಧಾರಿಗಳು ತಮ್ಮ ಬಗ್ಗೆ ಅವಲೋಕನ ನಡೆಸದೆ ತಮ್ಮ ವಿರೋಧಿಗಳ ಮೇಲೆ ಮಾತ್ರ ಆಕ್ರಮಣ ನಡೆಸುತ್ತಿರುತ್ತಾರೆ. ತಾವು ಯಾರನ್ನು ವಿರೋಧಿಸುತ್ತಿರುತ್ತಾರೋ ಅವರಂತೆಯೇ ತಾವೂ ಆಗಿದ್ದೇವೆಯೇ ಎಂಬ ಅವಲೋಕನ ಅವರ ಕಡೆಯಿಂದ ನಡೆಯುವುದಿಲ್ಲ. ಎಲ್ಲೆಡೆಯೂ ಇರುವ ಭ್ರಷ್ಟಾಚಾರವು ಇಲ್ಲಿ ಚಿಂತೆಗೆ ಕಾರಣವಾಗುವುದಿಲ್ಲ, ಬದಲಿಗೆ 'ನಿಮ್ಮ' ಭ್ರಷ್ಟಾಚಾರ ಮಾತ್ರವೇ ಇಲ್ಲಿ ಮುಖ್ಯವಾಗುತ್ತದೆ. 'ನೀನು' ಮತ್ತು 'ನಾನು' ನಡುವಿನ ಈ ಸಮರದಲ್ಲಿ ನಿಜವಾದ ಸಮಸ್ಯೆಗಳು ನೇಪಥ್ಯಕ್ಕೆ ಸರಿಯುತ್ತವೆ. ಮರೆವಿನಿಂದ ಈ ರೀತಿ ಆಗುವುದಿಲ್ಲ; ಸರ್ವಸಮ್ಮತಿಯಿಂದ ಹೀಗೆ ಮಾಡಲಾಗುತ್ತದೆ.

ಚುರುಮುರಿ



ತೂಕದ ಮಾತು

• ಡಿ.ಎಸ್.ಲಿಂಗರಾಜು

'ಏಮನ್ನ ಮೈಸೂರ್ಲೋ ಏಮಿಟದಿ ಪೆಂಡಾಲ್ ಗಲಾಟ?' ಅಂತ ತೆಲುಗು ಚಿನ್ನಪ್ಪಯ್ಯ ವಿಚಾರಿಸಿದ.

'ಪೆಂಡ್ಲಾಮಿಂದಲೇ ಪೆಂಡಾಲ್ ಗಲಾಟೆ ಸುರುವಾಗಿರದು ಕಯ್ಯಾ. ನೀನು ಸುಮ್ಮಗಿರು' ಅಂದು ತುರೇಮಣೆ ಸುಮ್ಮನಿರಿಸಿದರು.

'ಅಲ್ಲ ಕಜಾ, ಪಾದಯಾತ್ರೆ, ಸಮಾವೇಶದಲ್ಲಿ ಮೂರೂ ಪಕ್ಷದೋರು ಬೀದೀಲಿ ದೂಳು ಎರಚಿ, ಬೋದು ಶಾಪ ಇಕ್ಕಿ ಆಯಕಟ್ಟಿನ ಜಾಗಕ್ಕೇ ಹೊಡಕತ್ತಾವ್ರೆ' ಯಂಟಪ್ಪಣ್ಣ ವಿಷಯಕ್ಕೆ ಬಂತು.

'ಕುರಿತೇಟಾಗಿ ಏಳಿದ್ರಿ ಕನಣ್ಣ. ಬೋಗುಳ ಬಳಸದೇ ಬೈಯ್ಯದು ಹ್ಯಂಗೆ ಅಂತ ರಾಜಕೀಯದೋರಿಗೆ ಟ್ಯೂಶನ್ ಕೊಡಬಕು ಅಂದದೆ ಬೀಜೆಪಿ ಸುರೇಶಣ್ಣ' ಅಂತಂದೆ.

'ಯತ್ನಾಳಣ್ಣನ ತಾವು ಮನೆ ಪಾಠಕ್ಕೋದ್ರೆ ಆಗೂದಿಲ್ವೆ? ಯಾಕೋ ಅದೂ ಪಾದಯಾತ್ರೆ ಮಾಡ್ತಿನಿ ಅಂದದೆ' ಯಂಟಪ್ಪಣ್ಣ ಕೇಳಿತು.

'ಬೋದಾಡದೂ ಅನಾರೋಗ್ಯದ ಲಕ್ಷಣ ಕನ್ರೋ. ರಾಜಕಾರಣಿಗಳೆಲ್ಲಾ ಬಾಯಿಗೆ ಫಿಲ್ಟರ್ ಹಾಕಿಸಿಗ್ಯಂದು ಕೊಲೆಸ್ಟ್ರಾಲ್ ತೂಕ ಇಳಿಸಿಗ್ಯಬಕು' ತುರೇಮಣೆ ತೂಕದ ಮಾತಾಡಿದರು.

'ನೋಡ್ರಿ, ಮೊನ್ನೆ ನೂರು ಗ್ರಾಂ ತೂಕ ಜಾಸ್ತಿಯಾಗಿದ್ಕೆ ಒಲಿಂಪಿಕ್ಸಲ್ಲಿ ಕುಸ್ತಿ ಪದಕವೇ ತಪ್ಪೋಯ್ತು' ಅಂದೆ ವಿಷಾದದಿಂದ.

'ಅಧಿಕಾರ ಇಲ್ಲದಿದ್ದಾಗ ರಾಜಕಾರಣಿಗಳಿಗೆ ಕೊಲೆಸ್ಟ್ರಾಲ್ ಜಾಸ್ತಿಯಾಗಿ ದುಡ್ಡು ಸರ್ಕ್ಯುಲೇಶನ್ ಆಗದೇ ಪಿತ್ತಭ್ರಮೆಯ ರಿಸ್ಕಾಯ್ತದೆ, ವಾಯುದೇಗು ಬತ್ತದೆ, ಕಣ್ಣು ಕೆಂಪಾತವೆ. ಇವರಿಗೆಲ್ಲ ಸ್ಟುಪಿಡ್ ಪ್ರೊಫೈಲ್ ಟೆಸ್ಟ್ ಮಾಡಿಸಬಕು' ಅಂತ ವಿವರಿಸಿದರು.

'ಅಧಿಕಾರ ಹೋಯ್ತದೆ ಅಂದಾಗ್ಲೂ ರಾಜಕಾರಣಿಗಳಿಗೆ ಇದೇ ಮುದಿಮೋಹದ ಲಕ್ಷಣ ಕಾಣಿಸಿಗ್ಯತದೆ. ಜನಕ್ಕೆ ಕ್ರೈಗ್ಲಿಸರಾಯ್ಡ್, ಇಲಾಖೆಗಳಿಗೆ ಹೈ-ಟ್ರಾನ್ಸ್‌ಫರ್ ಫ್ಯಾಟ್ ಅನ್ನೋ ಕೆಟ್ಟ ಕೊಲೆಸ್ಟ್ರಾಲ್ ಅಮರಿಕ್ಯಂಡದೆ. ಅದನ್ನ ಪರಿಹಾರ ಮಾಡದು ಬುಟ್ಟು ಮೂಗಂಡುಗ ಮಾತಾಡ್ತವ್ರೆ' ಚಂದ್ರು ಸಿಟ್ಟಾದ.

'ದಿಟ ಕಯ್ಯಾ, ಇವೆಲ್ಲಾ ಆಗಬಾರದು ಅಂದ್ರೆ ಕ್ರೈಗ್ಲಿಸರಾಯ್ಡ್, ಹೈ-ಟ್ರಾನ್ಸ್‌ಫರ್ ಫ್ಯಾಟ್ ಹೈನುಗಾರಿಕೆ ಮಾಡಿದೋರಿಗೆ ಚುನಾವಣಾ ಟಿಕೇಟು ಕೊಡಬಾರದು. ಅಧಿಕಾರಕ್ಕೆ ಬರೋರಿಗೆ ಕೆಟ್ಟ ಕೊಲೆಸ್ಟ್ರಾಲ್ ಮಿತಿ ಫಿಕ್ಸ್ ಮಾಡಬಕು' ಅಂದ್ರು ತುರೇಮಣೆ.

ಸಂಗತ

ಕಾಲೆಳೆತದ ನಡುವಿನ ಜಯ

ಒಳಮೀಸಲಾತಿಗೆ ಸಂಬಂಧಿಸಿದ ಸುಪ್ರೀಂ ಕೋರ್ಟ್ ತೀರ್ಪು, ಸಬೂಬು ಹುಡುಕದೆ ಅದನ್ನು ಜಾರಿ ಮಾಡುವ ಅವಕಾಶವನ್ನು ರಾಜ್ಯ ಸರ್ಕಾರಕ್ಕೆ ಒದಗಿಸಿದೆ

• ವಾದಿರಾಜ್

ಒಳಮೀಸಲಾತಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನ ಏಳು ಸದಸ್ಯರ ಸಂವಿಧಾನ ಪೀಠ ನೀಡಿರುವ ತೀರ್ಪು, ಈ ಕುರಿತ ಹೋರಾಟವನ್ನು ತಾರ್ಕಿಕ ಅಂತ್ಯದ ಕೊನೆಯ ಮೆಟ್ಟಿಲಿಗೆ ತಂದು ನಿಲ್ಲಿಸಿದೆ. ಅಶಕ್ತ ಸಮುದಾಯವೊಂದು ರಾಜಕೀಯ ಕಾಲೆಳೆತದ ನಡುವೆ ಮೂರು ದಶಕಗಳ ಕಾಲ ನಿರಂತರ ಹೋರಾಟ ನಡೆಸಿ ಕೊನೆಗೂ ಐತಿಹಾಸಿಕ ಜಯ ಪಡೆದುಕೊಂಡಿದೆ.

2004ರಲ್ಲಿ ಬಂದಿದ್ದ ಸುಪ್ರೀಂ ಕೋರ್ಟ್‌ನ ಪಂಚಪೀಠದ ತೀರ್ಪು, ಎರಡು ಮುಖ್ಯ ಕಾರಣಗಳನ್ನು ಮುಂದಿಟ್ಟು, ಒಳಮೀಸಲಾತಿ ಜಾರಿಯನ್ನು ತಡೆಹಿಡಿದಿತ್ತು. ಪರಿಶಿಷ್ಟ ಜಾತಿಗಳೆಂದರೆ, ಅದು ಸಮಾನ ಸುಖದುಃಖ, ಸಂಕಟಗಳಿರುವ ಏಕಸ್ವರೂಪದ ಜಾತಿಗಳ ಪಟ್ಟಿ, ಅದನ್ನು ಮತ್ತೆ ವರ್ಗೀಕರಿಸುವ ಅಗತ್ಯವಿಲ್ಲ ಎನ್ನುವುದು ಒಂದು ಕಾರಣವಾದರೆ, ಸಂವಿಧಾನದ 341ನೇ ವಿಧಿಯು ಪರಿಶಿಷ್ಟ ಜಾತಿಗಳ ಪಟ್ಟಿಯನ್ನು ವರ್ಗೀಕರಿಸುವ ಅಧಿಕಾರವನ್ನು ರಾಜ್ಯಗಳಿಗೆ ಕೊಟ್ಟಿಲ್ಲ ಎಂಬುದು ಎರಡನೇ ಕಾರಣ. ಈ ತೀರ್ಪಿನಿಂದಾಗಿ ಆಗಿನ ಅವಿಭಜಿತ ಆಂಧ್ರಪ್ರದೇಶ ಹಾಗೂ ಪಂಜಾಬ್, ಹರಿಯಾಣ ರಾಜ್ಯಗಳು ಜಾರಿ ಮಾಡಿದ್ದ ಒಳಮೀಸಲಾತಿ ರದ್ದಾಗಿತ್ತು.

ಕರ್ನಾಟಕದಲ್ಲಿ ಒಳಮೀಸಲಾತಿ ಹೋರಾಟಕ್ಕೆ ಕಾವು ಬಂದಿದ್ದು 2004ರಲ್ಲಿ ಧರ್ಮಸಿಂಗ್ ನೇತೃತ್ವದ ಸರ್ಕಾರವು ನ್ಯಾಯಮೂರ್ತಿ ಎ.ಜೆ.ಸದಾಶಿವ ಆಯೋಗವನ್ನು ರಚಿಸಿದಾಗ. ಈ ಆಯೋಗ ಕೆಲಸ ಆರಂಭಿಸುವಾಗ ಕೋರ್ಟ್ ತೀರ್ಪು ಬಂದಾಗಿತ್ತು. ಹೀಗಾಗಿ, ಆಯೋಗಕ್ಕೆ ವರ್ಗೀಕರಣದ ಸೂತ್ರವನ್ನು ಕೋರ್ಟ್ ತೀರ್ಪಿನ ನೆಲೆಯಲ್ಲಿ ರೂಪಿಸುವ ಹೊಣೆಗಾರಿಕೆಯೂ ಇತ್ತು. ಆದರೆ ಆಯೋಗಕ್ಕೆ ಅಗತ್ಯ ಸಿಬ್ಬಂದಿ, ಹಣಕಾಸಿನ ನೆರವು ಸಿಕ್ಕಿದ್ದು 2008ರಲ್ಲಿ ಯಡಿಯೂರಪ್ಪ ಮುಖ್ಯಮಂತ್ರಿಯಾದಾಗ.

ಈ ನಡುವೆ, ಆಂಧ್ರಪ್ರದೇಶದ ಒತ್ತಡಕ್ಕೆ ಮಣಿದು ಅಂದಿನ ಯುಪಿಎ ಸರ್ಕಾರ ಒಳಮೀಸಲಾತಿಯ ಮುಂದಿನ ಹಾದಿಯನ್ನು ಪರಿಶೀಲಿಸಲು 2006ರಲ್ಲಿ ನ್ಯಾಯಮೂರ್ತಿ ಉಷಾ ಮೆಹ್ರಾ ಆಯೋಗ ರಚಿಸಿತು. 2008ರಲ್ಲಿ ವರದಿ ಸಲ್ಲಿಸಿದ ಆಯೋಗ, 341ನೇ ವಿಧಿಗೆ ತಿದ್ದುಪಡಿ ತರುವುದೊಂದೇ ದಾರಿ ಎಂದು ಹೇಳಿತು. ಪರಿಶಿಷ್ಟ ಜಾತಿಗಳ ರಾಷ್ಟ್ರೀಯ ಆಯೋಗವು 2010ರ ಮಹತ್ವದ ಸಭೆಯಲ್ಲಿ ಈ ಕುರಿತು ಸುದೀರ್ಘ ಚರ್ಚೆ ನಡೆಸಿ, ಮೆಹ್ರಾ ಆಯೋಗದ ಶಿಫಾರಸನ್ನು ತಿರಸ್ಕರಿಸಿತು. ಕೇಂದ್ರ ಸರ್ಕಾರ 2011ರ ಜೂನ್‌ನಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ, ಮೆಹ್ರಾ ಆಯೋಗದ ಶಿಫಾರಸಿನ ಬಗ್ಗೆ ರಾಜ್ಯಗಳ ಅಭಿಪ್ರಾಯ ಕೇಳಲು ನಿರ್ಧರಿಸಿತು.

ಆಂಧ್ರಪ್ರದೇಶ, ತೆಲಂಗಾಣ, ಛತ್ತೀಸಗಢ, ಜಾರ್ಖಂಡ್, ಕರ್ನಾಟಕ, ಹರಿಯಾಣ, ಪಂಜಾಬ್ ಸಮ್ಮತಿಸಿದವು. ಆದರೆ ಕೇರಳ, ಪಶ್ಚಿಮ ಬಂಗಾಳ, ಗುಜರಾತ್ ಸೇರಿದಂತೆ 14 ರಾಜ್ಯಗಳು ವಿರೋಧಿಸಿದವು. ಪರಿಶಿಷ್ಟ ಜಾತಿಗಳ ಜನಸಾಂದ್ರತೆ ಅಧಿಕವಾಗಿರುವ ಬಿಹಾರ, ಉತ್ತರಪ್ರದೇಶ, ಮಹಾರಾಷ್ಟ್ರ, ರಾಜಸ್ಥಾನ, ತಮಿಳುನಾಡು ತಮ್ಮ ಅಭಿಪ್ರಾಯ ರವಾನಿಸಲಿಲ್ಲ. ಕನಿಷ್ಠ 15 ರಾಜ್ಯಗಳ ಸಮ್ಮತಿ ಸಿಗದೇಹೋದದ್ದು ತಿದ್ದುಪಡಿ ತರುವ ವಿಷಯವನ್ನು ನನೆಗುದಿಗೆ ತಳ್ಳಿತು.

ಈ ಸಂದರ್ಭದಲ್ಲೇ 2012ರ ಜೂನ್‌ನಲ್ಲಿ ಸದಾಶಿವ ಆಯೋಗ, ಪರಿಶಿಷ್ಟ ಜಾತಿಗಳನ್ನು ನಾಲ್ಕು ಗುಂಪುಗಳಾಗಿ ವಿಂಗಡಿಸಿದ ತನ್ನ ವರದಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಿತು. 2013ರಿಂದ ಐದು ವರ್ಷ ಪೂರ್ಣ ಬಹುಮತದ ಸರ್ಕಾರ ನಡೆಸಿದ ಸಿದ್ದರಾಮಯ್ಯ ಆಂತರಿಕ ಒತ್ತಡದಿಂದಾಗಿ ಏನೂ ಮಾಡಲಿಲ್ಲ.

ಕಗ್ಗಂಟಾಗಿದ್ದ ಒಳಮೀಸಲಾತಿಯನ್ನು ನವಿರಾಗಿ ಬಿಡಿಸಿ ಬೆಳಕು ಹೊತ್ತಿಸಿದ ಕೀರ್ತಿ ನ್ಯಾಯಮೂರ್ತಿ ಅರುಣ್ ಮಿಶ್ರಾ ನೇತೃತ್ವದ ಸುಪ್ರೀಂ ಕೋರ್ಟ್‌ನ ಪಂಚಪೀಠಕ್ಕೆ ಸಲ್ಲುತ್ತದೆ. 2020ರ ಆಗಸ್ಟ್‌ನಲ್ಲಿ ಹೊರಬಿದ್ದ ಈ ತೀರ್ಪು, ಡಿಸ್ಟ್ರಿಬ್ಯುಟಿವ್ ಜಸ್ಟಿಸ್ ಮತ್ತು ಸಬ್‌ಸ್ಟ್ಯಾಂಟಿವ್ ಈಕ್ವಾಲಿಟಿಯನ್ನು ಆಳವಾಗಿ ವಿಶ್ಲೇಷಿಸಿ, ಒಳಮೀಸಲಾತಿಗೆ ರಹದಾರಿಯನ್ನು ತೆರೆದಿಟ್ಟಿತು. ಇದೀಗ ಸಂವಿಧಾನ ಪೀಠವು 6:1ರ ಅನುಪಾತದಲ್ಲಿ ಮಿಶ್ರಾ ಪೀಠದ ತೀರ್ಪನ್ನು ಎತ್ತಿ ಹಿಡಿದಿದೆ. 341ನೇ ವಿಧಿಗೆ ತಿದ್ದುಪಡಿ ಅಪ್ರಸ್ತುತ ಎಂದು ಸ್ಪಷ್ಟಪಡಿಸಿ, ರಾಜ್ಯಗಳಿಗೆ ಒಳಮೀಸಲಾತಿ ಜಾರಿ ಮಾಡುವ ಅಧಿಕಾರ ಕೊಟ್ಟಿದೆ.



ಮಿಶ್ರಾ ಪೀಠದ ತೀರ್ಪಿನ ತಿರುಳನ್ನಾಗಲಿ, ಸುಪ್ರೀಂ ಕೋರ್ಟ್ 2023ರಲ್ಲಿ 7 ಸದಸ್ಯರ ಸಂವಿಧಾನ ಪೀಠ ರಚಿಸಿದ್ದಾಗಲಿ, ಕೇಂದ್ರ ಸರ್ಕಾರವೇ ಒಳ ಮೀಸಲಾತಿಯ ಪರವಾಗಿ ವಕಾಲತ್ತು ವಹಿಸಿರುವುದನ್ನಾಗಲಿ ಗಮನಕ್ಕೆ ತಂದುಕೊಳ್ಳದ ರಾಜ್ಯ ಸರ್ಕಾರ, 341ನೇ ವಿಧಿಗೆ ತಿದ್ದುಪಡಿ ತರುವಂತೆ ಈ ವರ್ಷದ ಜ. 17ರಂದು ಕೇಂದ್ರಕ್ಕೆ ಪತ್ರ ಬರೆಯಿತು. ಸುಪ್ರೀಂ ಕೋರ್ಟ್‌ನಲ್ಲಿ ನಡೆಯುತ್ತಿದ್ದ ನ್ಯಾಯಿಕ ಬೆಳವಣಿಗೆಗಳ ಬಗ್ಗೆ ರಾಜ್ಯ ಸರ್ಕಾರ ನಿಗಾ ಇಟ್ಟಿಲ್ಲ ಎಂಬುದು ಆಗ ಬಯಲಾಗಿತ್ತು.

ಇದೀಗ ರಾಜ್ಯ ಸರ್ಕಾರಕ್ಕೆ ಸಬೂಬು ಹುಡುಕದೆ ಒಳಮೀಸಲಾತಿ ಜಾರಿ ಮಾಡುವ ಅವಕಾಶ ಒದಗಿದೆ. ಸದಾಶಿವ ಆಯೋಗದ ವರದಿ ಶೇ 15ರ ಮೀಸಲಾತಿಯನ್ನು ವರ್ಗೀಕರಣ ಮಾಡಿತ್ತು. ಆದರೆ ಈಗ ಪರಿಶಿಷ್ಟ ಜಾತಿಯ ಮೀಸಲಾತಿ ಪ್ರಮಾಣ ಶೇ 17ಕ್ಕೆ ಏರಿದೆ. ಬಿಜೆಪಿ ನೇತೃತ್ವದ ಈ ಹಿಂದಿನ ಸರ್ಕಾರದಲ್ಲಿ ಕಾನೂನು ಸಚಿವರಾಗಿದ್ದ ಮಾಧುಸ್ವಾಮಿ ನೇತೃತ್ವದ ಸಂಪುಟ ಉಪಸಮಿತಿ ಶೇ 17ರ ಮೀಸಲಾತಿಯನ್ನು ವರ್ಗೀಕರಿಸಿ ಕೇಂದ್ರಕ್ಕೆ ಕಳುಹಿಸಿತ್ತು. ಈಗ ಸಿದ್ದರಾಮಯ್ಯ ಎತ್ತ ಹೆಜ್ಜೆ ಇಡುತ್ತಾರೆ? ಕಾದು ನೋಡಬೇಕಿದೆ.

ಲೇಖಕ: ಆರ್‌ಎಸ್‌ಎಸ್ ಕಾರ್ಯಕರ್ತ

ವಾಚಕರ ವಾಣಿ

ಇದೆಂಥ ವಿಪರ್ಯಾಸ?

ತುಂಗಭದ್ರಾ ಅಣೆಕಟ್ಟೆಯ 19ನೇ ಕ್ರಸ್ಟ್‌ಗೇಟ್‌ನ ಚೈನ್ ಲಿಂಕ್‌ನ ಬೆಸುಗೆ ಕಳಚಿದ್ದರಿಂದ ಅಪಾರ ಪ್ರಮಾಣದ ನೀರನ್ನು ನದಿಗೆ ಬಿಡಲಾಗಿದೆ. ಆದರೆ, ಕೊಪ್ಪಳ ಜಿಲ್ಲೆಯ ಹಲವಾರು ಹಳ್ಳಿಗಳಲ್ಲಿ ಕುಡಿಯುವುದಕ್ಕೇ ನೀರಿಲ್ಲ. ನೂರಾರು ಕೆರೆಗಳು ಒಂದು ಹನಿ ನೀರೂ ಇಲ್ಲದೆ ಬತ್ತಿಹೋಗಿವೆ. ಎಂತಹ ವಿಪರ್ಯಾಸ?

ಶರಣು ಗಡ್ಡಿ, ಕೊಪ್ಪಳ

ಯಾರು ಹೊಣೆ?

ಒಟ್ಟು 10 ಚುನಾಯಿತ ಶಾಸಕರು, ಇಬ್ಬರು ಸಂಸದರನ್ನು ಹೊಂದಿರುವ ತುಂಗಭದ್ರೆಯ ನೀರಾವರಿ ಪ್ರದೇಶದಲ್ಲಿ ಈಗಾಗಲೇ ಮುಕ್ಕಾಲು ಭಾಗ ಭತ್ತದ ನಾಟಿ ಮುಗಿದಿದೆ. ಈ ಸಂದರ್ಭದಲ್ಲಿ ತುಂಗಭದ್ರಾ ಜಲಾಶಯದ ಕ್ರಸ್ಟ್‌ಗೇಟ್ ಕೊಚ್ಚಿಹೋಗಿದ್ದು, ನಮ್ಮ ಬದುಕು ಆತಂಕದ ಸ್ಥಿತಿಯಲ್ಲಿದೆ. ಈ ಪರಿಸ್ಥಿತಿಗೆ ಯಾರು ಹೊಣೆ? ನಿರ್ಲಕ್ಷ್ಯ ತೋರುವ ರಾಜಕಾರಣಿಗಳೊ, ಬೇಜವಾಬ್ದಾರಿಯ ಅಧಿಕಾರಿಗಳೊ?

ಚಂದ್ರು ಪಾಟೀಲ, ಸಿಂಧನೂರು

ರಾಜಕೀಯ ಸಮಾವೇಶ ಊರ ಹೊರಗಿರಲಿ

ಮೈಸೂರಿನಲ್ಲಿ ಇತ್ತೀಚೆಗೆ ನಡೆದ ರಾಜಕೀಯ ಸಮಾವೇಶಗಳು, ಜನರನ್ನು ಒಟ್ಟುಗೂಡಿಸುವ ಸಮಾವೇಶಗಳಾದವೇ ವಿನಾ ಅದರಿಂದ ಸಾರ್ವಜನಿಕರಿಗೆ ಆದ ಲಾಭವೇನು ಎಂಬುದು ಯಕ್ಷಪ್ರಶ್ನೆಯಾಗಿಯೇ ಉಳಿಯಿತು. ರಾಜಕೀಯ ಪಕ್ಷಗಳ ಈ ಕಾರ್ಯಕ್ರಮ ನಡೆದದ್ದು, ಮೈಸೂರಿನ ಹೃದಯಭಾಗದಲ್ಲಿರುವ ಮಹಾರಾಜ ಕಾಲೇಜು ಮೈದಾನದಲ್ಲಿ. ಬೃಹತ್ ಸಂಖ್ಯೆಯಲ್ಲಿ ಜನ ಸೇರಿದ್ದ ಈ ಸಮಾವೇಶಗಳಿಂದ, ಆ ಎರಡು ದಿನ ನಗರದ ಸಾರ್ವಜನಿಕರು, ಶಾಲಾ– ಕಾಲೇಜು ವಿದ್ಯಾರ್ಥಿಗಳು ಮತ್ತು ಸರ್ಕಾರಿ ನೌಕರರಿಗೆ ಬಹಳಷ್ಟು ತೊಂದರೆಯಾಯಿತು. ರಾಜಕೀಯ ಪಕ್ಷಗಳ ಇಂತಹ ಬೃಹತ್ ಸಮಾವೇಶಗಳನ್ನು ಸಾರ್ವಜನಿಕರ ಹಿತದೃಷ್ಟಿಯಿಂದ ಇನ್ನು ಮುಂದಾದರೂ ನಗರದ ಹೊರಭಾಗದಲ್ಲಿ ಆಯೋಜಿಸುವುದು ಒಳ್ಳೆಯದು.

ಬೂಕನಕೆರೆ ವಿಜೇಂದ್ರ, ಮೈಸೂರು

ಒತ್ತುವರಿ ತೆರವು: ಬೇಕು ಸಂಪುಟದ ಸಹಕಾರ

ಕರ್ನಾಟಕವೂ ಸೇರಿದಂತೆ ದೇಶದ ಹಲವಾರು ರಾಜ್ಯಗಳಲ್ಲಿ ಭೂಕುಸಿತ, ಕಾನೂನಿನ ಭಯ-ಭೀತಿ ಇಲ್ಲದ ರೀತಿಯಲ್ಲಿ ಕಾಡುಗಳ ಒತ್ತುವರಿ ಎಲ್ಲವೂ ಆಘಾತಕಾರಿಯಾಗಿ ಮುಂದುವರಿದಿವೆ. ಕೇರಳದ ವಯನಾಡ್ ಹಾಗೂ ನಮ್ಮ ರಾಜ್ಯದ ವಿವಿಧೆಡೆ ಇತ್ತೀಚೆಗೆ ಸಂಭವಿಸಿದ ಭೂಕುಸಿತಗಳಿಂದ ಎಚ್ಚೆತ್ತುಕೊಂಡಿರುವ ರಾಜ್ಯ ಸರ್ಕಾರ, ಪಶ್ಚಿಮಘಟ್ಟ ಪ್ರದೇಶದಲ್ಲಿ ಅರಣ್ಯ ಒತ್ತುವರಿ, ಅಕ್ರಮ ತೋಟಗಳು, ಅನಧಿಕೃತ ರೆಸಾರ್ಟ್‌ಗಳ ವಿರುದ್ಧ ತಕ್ಷಣದಿಂದಲೇ ಕ್ರಮ ಜರುಗಿಸಲು ಅನುವಾಗುವಂತೆ ಕಾರ್ಯಪಡೆ ರಚಿಸಿರುವುದು ಸ್ವಾಗತಾರ್ಹ ಬೆಳವಣಿಗೆ. ಇಂತಹ ಯಾವ ಒತ್ತುವರಿಯನ್ನೂ ತೆರವು ಮಾಡದೇ ಇರುವುದಿಲ್ಲ ಎಂಬ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರ ಹೇಳಿಕೆ ಪರಿಸರಪ್ರಿಯರಲ್ಲಿ ಆಶಾಭಾವನೆ ಮೂಡಿಸಿದೆ. ಆದರೆ ಈ ಕಾರ್ಯ ಆರಂಭಿಸುವಾಗ ಇದ್ದ ತೀವ್ರತೆಯನ್ನು ಕೊನೆಯವರೆಗೂ ಕಾಯ್ದುಕೊಳ್ಳಬೇಕೆಂದರೆ, ಅರಣ್ಯ ಸಚಿವರಿಗೆ ಇಡೀ ಸಚಿವ ಸಂಪುಟ ಸಹಕಾರ ನೀಡಬೇಕು. ತಾರತಮ್ಯರಹಿತವಾಗಿ ನಡೆಯಬೇಕಾದ ಪರಿಸರ ಸಂರಕ್ಷಣೆಯ ಕಾರ್ಯಕ್ಕೆ ಒತ್ತಾಸೆಯಾಗಿ ನಿಲ್ಲಬೇಕು. ಹೀಗೆ ತೆರವು ಕಾರ್ಯ ತೀವ್ರಗತಿಯಲ್ಲಿ ನಡೆದಿದ್ದೇ ಆದರೆ, ಈಗ ಉಂಟಾಗುತ್ತಿರುವ, ಮುಂದೆ ನಿಸ್ಸಂದೇಹವಾಗಿ ಆಗಬಹುದಾದ ಅವಘಡಗಳನ್ನು ತಪ್ಪಿಸಲು ಸಾಧ್ಯ.

ಪ್ರೊ. ಬಿ.ಕೆ.ಚಂದ್ರಶೇಖರ್, ಬೆಂಗಳೂರು

ಪಾವಿತ್ರ್ಯ ಹಾಳುಗೆಡಹುವ ಪ್ಲಾಸ್ಟಿಕ್ ಧ್ವಜ

ಸ್ವಾತಂತ್ರ್ಯ ದಿನಾಚರಣೆಯಾದ ಆಗಸ್ಟ್ 15ರ ಸಂದರ್ಭದಲ್ಲಿ ದೆಹಲಿಯ ಕೆಂಪುಕೋಟೆ ಸೇರಿದಂತೆ ದೇಶದಾದ್ಯಂತ ಶಾಲೆ–ಕಾಲೇಜು, ಸರ್ಕಾರಿ ಕಚೇರಿ ಹಾಗೂ ಸಂಘ– ಸಂಸ್ಥೆಗಳಲ್ಲಿ ರಾಷ್ಟ್ರಧ್ವಜವನ್ನು ಹಾರಿಸಲಾಗುತ್ತದೆ. ರಾಷ್ಟ್ರಧ್ವಜವು ದೇಶದ ಜನರ ಭರವಸೆ ಮತ್ತು ಆಶಯವನ್ನು ಪ್ರತಿನಿಧಿಸುವಂತಹದ್ದು. ಹಾಗಾಗಿ, ಅದನ್ನು ಗೌರವಿಸಬೇಕಾದದ್ದು ಮುಖ್ಯ. ಆದರೆ ಪ್ಲಾಸ್ಟಿಕ್ ಧ್ವಜಗಳು ಸ್ಥಳೀಯ ಅಂಗಡಿಗಳಲ್ಲಿ ಸುಲಭವಾಗಿ ದೊರೆಯುವುದರಿಂದ ಕೆಲ ಮಕ್ಕಳು ಹಾಗೂ ಪೋಷಕರು ಸೇರಿದಂತೆ ಹಲವರು ಅವುಗಳನ್ನು ಕೊಂಡು, ಬಳಸಿದ ನಂತರ ಎಲ್ಲೆಂದರಲ್ಲಿ ಬಿಸಾಡುತ್ತಾರೆ. ಇದರಿಂದ ಧ್ವಜದ ಪಾವಿತ್ರ್ಯ ಹಾಳಾಗುತ್ತದೆ ಹಾಗೂ ಧ್ವಜದ ಘನತೆಯನ್ನು ಅಗೌರವಿಸಿದಂತೆಯೂ ಆಗುತ್ತದೆ. ಇದು ತಪ್ಪು.

ಪ್ಲಾಸ್ಟಿಕ್ ಧ್ವಜ ಬಳಸಬಾರದು ಎಂಬುದನ್ನು ಪುಟ್ಟ ಮಕ್ಕಳಿಗೂ ಸೇರಿದಂತೆ ಎಲ್ಲರಿಗೂ ಮನದಟ್ಟು ಮಾಡಿಸುವುದರ ಜೊತೆಗೆ, ಇಂತಹ ಧ್ವಜಗಳ ಮಾರಾಟವನ್ನು ಸಂಪೂರ್ಣವಾಗಿ ನಿಷೇಧಿಸಬೇಕಿದೆ. ಅದನ್ನು ಮೀರಿಯೂ ಮಾರಾಟ ಮಾಡಿದರೆ, ಅಂತಹವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕಿದೆ.

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

ಮೀಸಲಾತಿ: ಸರ್ವರಿಗೂ ಸಿಗಲಿ ನ್ಯಾಯ

'ಅಸ್ಪೃಶ್ಯತೆ ಆಚರಣೆ ಇರುವವರೆಗೂ ಮೀಸಲಾತಿ ಇರಬೇಕು' ಎಂದು ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಇತ್ತೀಚೆಗೆ ಹೇಳಿದ್ದಾರೆ. ಸ್ವಾತಂತ್ರ್ಯ ಬಂದು ಹಲವು ದಿನಗಳು ಕಳೆದರೂ ರಾಜಕೀಯ ವ್ಯಕ್ತಿಗಳು ಅಸ್ಪೃಶ್ಯತೆಯ ವಿಷಯದಲ್ಲಿ ರಾಜಕೀಯ ಮಾಡುತ್ತಿದ್ದಾರೆಯೇ ವಿನಾ ಈ ಪದ್ಧತಿಯನ್ನು ಕೊನೆಗಾಣಿಸಲು ಅವರು ಪಡುತ್ತಿರುವ ಪ್ರಯತ್ನ ಮಾತ್ರ ಶೂನ್ಯ. ಸುಪ್ರೀಂ ಕೋರ್ಟ್ ಹೇಳಿದಂತೆ ಐಎಎಸ್, ಐಎಫ್‌ಎಸ್ ಅಧಿಕಾರಿಗಳ ಮಕ್ಕಳಂತಹವರೂ ಮೀಸಲಾತಿ ಲಾಭವನ್ನು ಪಡೆದುಕೊಂಡರೆ, ಅವಕಾಶಕ್ಕಾಗಿ ಹಾತೊರೆಯುತ್ತಿರುವ ಅನೇಕರು ಮೀಸಲಾತಿಯಿಂದ ವಂಚಿತರಾಗುತ್ತಾರೆ. ಮೀಸಲಾತಿಯ ಉದ್ದೇಶ ಅವಕಾಶ ವಂಚಿತರನ್ನು ಸಮಾಜದ ಮುಖ್ಯವಾಹಿನಿಗೆ ತರುವುದಾಗಿರಬೇಕೇ ವಿನಾ ರಾಜಕೀಯದ ಬೇಳೆ ಬೇಯಿಸಿಕೊಳ್ಳುವ ದಾಳವಾಗಬಾರದು. ಮೀಸಲಾತಿಯ ಲಾಭವನ್ನು ಪಡೆದವರು ಮೀಸಲಾತಿ ಅತ್ಯಂತ ಅಗತ್ಯವಿರುವವರಿಗೆ ಸ್ವಇಚ್ಛೆಯಿಂದ ಅವಕಾಶ ಮಾಡಿಕೊಡುವ ಔದಾರ್ಯ ಪ್ರಸ್ತುತ ದಿನಗಳಲ್ಲಿ ಬೇಕಾಗಿದೆ. ರಾಜಕೀಯ ಪಕ್ಷಗಳು ತಮ್ಮ ವಿವೇಚನೆಗೆ ತಕ್ಕಂತೆ ಚಿಂತಿಸದೆ ರಾಷ್ಟ್ರದ ಸರ್ವರಿಗೂ ನ್ಯಾಯ ಒದಗಿಸುವುದರ ಬಗ್ಗೆ ಒಲವು ತೋರಿಸಬೇಕಿದೆ.

ಮಹೇಶ್ ಸಿ.ಎಚ್., ಶಿವಮೊಗ್ಗ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಅದಾನಿ ಸಮೂಹ–ಸೆಬಿ ಅಧ್ಯಕ್ಷೆ ನಂಟು; ಧವಲ್ ದಂಪತಿ ವಿರುದ್ಧ ಹಲವು ಆರೋಪ

ಮತ್ತೆ ಹಿಂಡೆನ್‌ಬರ್ಗ್ ಕಂಪನ

ಪ್ರಜಾವಾಣಿ ವಾರ್ತೆ



ಭಾರತದ ಷೇರು ಮಾರುಕಟ್ಟೆ ಮತ್ತು ರಾಜಕಾರಣದಲ್ಲಿ ಹಿಂಡೆನ್‌ಬರ್ಗ್ ರಿಸರ್ಚ್ ಕಂಪನಿ ಮತ್ತೆ ಕಂಪನ ಹುಟ್ಟಿಸಿದೆ. ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ಅಧ್ಯಕ್ಷೆ ಮಾಧವಿ ಪುರಿ ಬುಚ್ ಮತ್ತು ಅವರ ಪತಿ ಧವಲ್ ಬುಚ್ ಅವರು ಗೌತಮ್ ಅದಾನಿ ಸಮೂಹ ಹೂಡಿಕೆ ಮಾಡಿದ್ದ ಶೆಲ್ ಕಂಪನಿಗಳಲ್ಲಿ ಪಾಲು ಹೊಂದಿದ್ದರು ಎಂದು ಆರೋಪಿಸಿರುವ ಹಿಂಡೆನ್‌ಬರ್ಗ್, ಅದಕ್ಕೆ ಪೂರಕವಾದ ದಾಖಲೆಗಳನ್ನು ಆಗಸ್ಟ್ 10ರ ವರದಿಯಲ್ಲಿ ಪ್ರಕಟಿಸಿದೆ. ಬುಚ್ ದಂಪತಿ ನೀಡಿದ ಸ್ಪಷ್ಟನೆಯನ್ನು ಮುಂದಿಟ್ಟುಕೊಂಡು ಮತ್ತೆ ಪ್ರಶ್ನೆಗಳನ್ನು ಎಸೆದಿದೆ

ಅದಾನಿ ಸಮೂಹ ವಹಿವಾಟು ನಡೆಸುತ್ತಿದ್ದ ಬರ್ಮುಡಾ/ಮಾರಿಷಸ್‌ನ 'ಶೆಲ್' ಕಂಪನಿಗಳಲ್ಲಿ ಸೆಬಿ ಅಧ್ಯಕ್ಷೆ ಮಾಧವಿ ಪುರಿ ಬುಚ್ ಮತ್ತು ಅವರ ಪತಿ ಧವಲ್ ಪಾಲುದಾರಿಕೆ ಹೊಂದಿದ್ದಾರೆ ಎಂಬುದು ಹಿಂಡೆನ್‌ಬರ್ಗ್ ರಿಸರ್ಚ್ ಕಂಪನಿ ಮಾಡಿರುವ ಹೊಸ ಆರೋಪ. ಇದೇ ಕಾರಣಕ್ಕೆ 2023ರ ಜನವರಿಯಲ್ಲಿ ಅದಾನಿ ಸಮೂಹದ ಅಕ್ರಮ ವಹಿವಾಟಿಗೆ ಸಂಬಂಧಿಸಿದಂತೆ ಪ್ರಕಟವಾದ ತನ್ನ ವರದಿಯ ಬಗ್ಗೆ ಸೆಬಿ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಅದು ಹೇಳಿದೆ.

ಗೌತಮ್ ಅದಾನಿ ಅವರ ಸಹೋದರ ವಿನೋದ್ ಅದಾನಿ ಅವರು ಬರ್ಮುಡಾದ 'ಗ್ಲೋಬಲ್ ಡೈನಮಿಕ್ ಆಪರ್ಚುನಿಟೀಸ್ ಫಂಡ್'ನಲ್ಲಿ (ಜಿಡಿಒಎಫ್) ಹೂಡಿಕೆ ಮಾಡಿದ್ದು, ಅದು ಮತ್ತೆ ಮಾರಿಷಸ್‌ನ 'ಐಪಿಇ ಪ್ಲಸ್ ಫಂಡ್ ಒನ್'ನಲ್ಲಿ ಹೂಡಿಕೆ ಮಾಡಿದೆ. ಆ ಬರ್ಮುಡಾ ಮತ್ತು ಮಾರಿಷಸ್ ವ್ಯವಹಾರಗಳಲ್ಲಿ ಮಾಧವಿ ಬುಚ್ ಮತ್ತು ಅವರ ಪತಿ ಪಾಲು ಹೊಂದಿದ್ದಾರೆ' ಎಂದು ಹಿಂಡೆನ್‌ಬರ್ಗ್ ರಿಸರ್ಚ್ ಆರೋಪಿಸಿದೆ.

ವರದಿಯ ಪ್ರಕಾರ, ಮಾಧವಿ ಮತ್ತು ಅವರ ಪತಿ ಧವಲ್ ಮೊದಲು ಸಿಂಗಪುರದಲ್ಲಿ ಐಪಿಇ ಪ್ಲಸ್ ಫಂಡ್ ಒನ್‌ನಲ್ಲಿ 2015ರ ಜೂನ್ 5ರಂದು ಖಾತೆ ತೆರೆದರು. ಹೂಡಿಕೆಯ ಮೂಲ ಉಲ್ಲೇಖಿಸುವಾಗ ದಂಪತಿಯ 'ಸಂಬಳ' ಎಂದು ದೃಢೀಕೃತ ಘೋಷಣೆಯಲ್ಲಿ ತಿಳಿಸಿರುವುದಾಗಿ ವರದಿಯಲ್ಲಿದೆ. ದಂಪತಿಯ ಹೂಡಿಕೆಯ ನಿವ್ವಳ ಮೌಲ್ಯ ₹84 ಕೋಟಿ ಎಂದು ದಾಖಲಿಸಲಾಗಿತ್ತು.

ವಿನೋದ್ ಅದಾನಿ ನಿಯಂತ್ರಣದ ಬರ್ಮುಡಾ ಮತ್ತು ಮಾರಿಷಸ್‌ನ ಹೂಡಿಕೆಗಳನ್ನು ರೌಂಡ್ ಟ್ರಿಪ್ ಫಂಡ್‌ಗಳಿಗೆ ಮತ್ತು ಷೇರು ಬೆಲೆಯನ್ನು ಹೆಚ್ಚಿಸಲು ಬಳಸಲಾಗಿದೆ ಎಂದು ಕೂಡ ಹಿಂಡೆನ್‌ಬರ್ಗ್ ಆರೋಪಿಸಿದೆ.

ಮಾಧವಿ ಬುಚ್ ಅವರು ಸೆಬಿಯ ಪೂರ್ಣಾವಧಿ ಸದಸ್ಯರಾಗಿ ಆಯ್ಕೆಯಾಗಿದ್ದು 2017ರ ಏಪ್ರಿಲ್‌ನಲ್ಲಿ. ಅದಕ್ಕೆ ಕೆಲವೇ ವಾರಗಳ ಮುಂಚೆ, ಅಂದರೆ 2017ರ ಮಾರ್ಚ್‌ನಲ್ಲಿ, ಮಾಧವಿ ಅವರ ಪತಿ ಧವಲ್ ಬುಚ್ ಅವರು ಮಾರಿಷಸ್‌ನ ಕಂಪನಿಗೆ ಪತ್ರ ಬರೆದು, ತಮ್ಮ ಪತ್ನಿಯ ಖಾತೆಯಲ್ಲಿರುವ ಹಣವನ್ನೂ ತಮ್ಮ ಖಾತೆಗೆ ವರ್ಗಾಯಿಸುವಂತೆ ವಿನಂತಿಸಿಕೊಂಡಿದ್ದರು. ಇನ್ನು ಮುಂದೆ ತಾವು ಏಕಾಂಗಿಯಾಗಿ ಖಾತೆ ನಿರ್ವಹಣೆ ಮಾಡುವುದಾಗಿಯೂ ಅವರು ತಿಳಿಸಿದ್ದರು ಎಂದು ಉಲ್ಲೇಖಿಸಿರುವ ಹಿಂಡೆನ್‌ಬರ್ಗ್, ಅದಕ್ಕೆ ಸಂಬಂಧಿಸಿದ ದಾಖಲೆಯನ್ನು ಬಿಡುಗಡೆ ಮಾಡಿದೆ. 2018ರ ಫೆಬ್ರುವರಿ 25ರಂದು, ಸೆಬಿಯ ಪೂರ್ಣಾವಧಿ ಸದಸ್ಯರಾಗಿರುವಾಗಲೇ, ಮಾಧವಿ ಬುಚ್ ಅವರು ಎಲ್ಲ ಷೇರುಗಳನ್ನು ವಾಪಸ್ ಪಡೆಯಲು ತಮ್ಮ ವೈಯಕ್ತಿಕ ಇ–ಮೇಲ್ ಮೂಲಕ ಗಂಡನ ಹೆಸರಿನಲ್ಲಿ ಮನವಿ ಮಾಡಿದ್ದರು ಎಂದು ವರದಿ ತಿಳಿಸಿದೆ.

2013ರಲ್ಲಿ ಅಗೋರ ಪಾರ್ಟ್‌ನರ್ಸ್ ಎನ್ನುವ ವ್ಯಾಪಾರಿ ಮತ್ತು ನಿರ್ವಹಣಾ ಕನ್ಸಲ್ಟೆನ್ಸಿ ಕಂಪನಿ ಸಿಂಗಪುರದಲ್ಲಿ ನೋಂದಣಿಯಾಯಿತು. ಅದರ ಶೇ 100ರಷ್ಟು ಷೇರುಗಳ ಒಡೆತನ (ಸಂಪೂರ್ಣ ಮಾಲೀಕತ್ವ) ಮಾಧವಿ ಬುಚ್ ಅವರದ್ದಾಗಿತ್ತು. 2017ರಲ್ಲಿ ಸೆಬಿಯ ಪೂರ್ಣಾವಧಿ ಸದಸ್ಯರಾದ ಮಾಧವಿ, 2022ರ ಮಾರ್ಚ್ 1ರಂದು ಅದರ ಅಧ್ಯಕ್ಷರಾದರು. ಆದರೂ ಮಾರ್ಚ್ 16ರವರೆಗೆ ಅವರು ಅಗೋರ ಪಾರ್ಟ್‌ನರ್ಸ್‌ನ ಸಂಪೂರ್ಣ ಮಾಲೀಕತ್ವ ಹೊಂದಿದ್ದರು. ನಂತರ ಹಿತಾಸಕ್ತಿ ಸಂಘರ್ಷದ ಪ್ರಶ್ನೆ ಉದ್ಭವವಾಗಬಹುದು ಎಂದು, ಅಗೋರ ಪಾರ್ಟ್‌ನರ್ಸ್ ಮಾಲೀಕತ್ವವನ್ನು ಪತಿಗೆ ವರ್ಗಾಯಿಸಿದ್ದರು.

ಇದಲ್ಲದೇ ಹಣಕಾಸು ನಿರ್ವಹಣೆ, ಮಾರುಕಟ್ಟೆ, ರಿಯಲ್ ಎಸ್ಟೇಟ್ ಇದ್ಯಾವುದರ ಅನುಭವವೂ ಇಲ್ಲದಿದ್ದ ಧವಲ್ ಬುಚ್ ಅವರು ಪ್ರಮುಖ ರಿಯಲ್ ಎಸ್ಟೇಟ್ ಇನ್‌ವೆಸ್ಟ್‌ಮೆಂಟ್ ಟ್ರಸ್ಟ್ (ಆರ್‌ಇಐಟಿ) ಆದ ಬ್ಲ್ಯಾಕ್‌ಸ್ಟೋನ್‌ನ ಹಿರಿಯ ಸಲಹೆಗಾರರಾಗಿ 2019ರಲ್ಲಿ ನೇಮಕಗೊಂಡರು. ಆಗ ಮಾಧವಿ ಬುಚ್ ಅವರು ಸೆಬಿಯ ಪೂರ್ಣಾವಧಿ ಸದಸ್ಯರಾಗಿದ್ದರು. ಧವಲ್ ಅವರ ಅವಧಿಯಲ್ಲಿ ಬ್ಲ್ಯಾಕ್‌ಸ್ಟೋನ್‌ನ ಪ್ರಸ್ತುತಿಗಳಾದ ಮೈಂಡ್ ಸ್ಪೇಸ್ ಮತ್ತು ನೆಕ್ಸಸ್ ಸೆಲೆಕ್ಟ್ ಟ್ರಸ್ಟ್‌ಗಳಿಗೆ ಆರಂಭಿಕ ಸಾರ್ವಜನಿಕ ಹೂಡಿಕೆಗೆ (ಐಪಿಒ) ಸೆಬಿಯ ಅನುಮೋದನೆ ಸಿಕ್ಕಿತು. ಅಲ್ಲದೆ ಅವರ ಅವಧಿಯಲ್ಲಿ ಆರ್‌ಇಐಟಿಯ ಪ್ರಮುಖ ನಿಯಮಗಳಿಗೆ ತಿದ್ದುಪಡಿ ತರಲಾಯಿತು. ಮಾಧವಿ ಅವರು ತಮ್ಮ ಸೆಬಿಯ ಅಧ್ಯಕ್ಷ ಸ್ಥಾನ ಬಳಸಿಕೊಂಡು ಬ್ಲ್ಯಾಕ್‌ಸ್ಟೋನ್‌ಗೆ ಹಲವು ರೀತಿ ನೆರವಾಗಿದ್ದಾರೆ ಎಂದು ಹಿಂಡೆನ್‌ಬರ್ಗ್ ವರದಿ ತಿಳಿಸಿದೆ.

ಮಾಧವಿ ಬುಚ್ ಅವರು ಅಗೋರ ಅಡ್ವೈಸರಿ ಎನ್ನುವ ಭಾರತದ ಕನ್ಸಲ್ಟೆನ್ಸಿ ಬ್ಯುಸಿನೆಸ್‌ನಲ್ಲಿ ಶೇ 99ರ ಷೇರುಗಳನ್ನು ಹೊಂದಿದ್ದು, ಅವರ ಪತಿ ಅದರ ನಿರ್ದೇಶಕರಾಗಿದ್ದಾರೆ. 2022ರಲ್ಲಿ ಆ ಕನ್ಸಲ್ಟೆನ್ಸಿಯು ₹2.19 ಕೋಟಿ ಆದಾಯ ಘೋಷಿಸಿದ್ದು, ಅದು ಅವರ ಸೆಬಿಯ ಸಂಬಳಕ್ಕಿಂತ 4.4 ಪಟ್ಟು ಹೆಚ್ಚು ಮೊತ್ತವಾಗಿದೆ ಎಂದು ಅದು ಆರೋಪಿಸಿದೆ.

ಹಿಂದೆ ಅದಾನಿ ಸಮೂಹದ ಷೇರು ಅವ್ಯವಹಾರಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ, ಅದಾನಿ ಸಮೂಹದ ಷೇರುದಾರರಿಗೆ ವಿದೇಶದಲ್ಲಿ ಸಹಾಯ ಮಾಡಿದವರು ಯಾರೆಂಬುದನ್ನು ಸೆಬಿ ತನ್ನ ತನಿಖೆಯಲ್ಲಿ ಪತ್ತೆ ಹಚ್ಚದಿದ್ದ ಬಗ್ಗೆ ಸುಪ್ರೀಂ ಕೋರ್ಟ್ ಗಮನ ಸೆಳೆದಿತ್ತು. ಅದನ್ನು ಉಲ್ಲೇಖಿಸಿರುವ ಹಿಂಡೆನ್‌ಬರ್ಗ್ ವರದಿಯು, ಸೆಬಿ ಸರಿಯಾದ ರೀತಿಯಲ್ಲಿ ತನಿಖೆ ಮಾಡಿದ್ದರೆ, ಅದರ ಅಧ್ಯಕ್ಷರೇ ಸಿಕ್ಕಿಬೀಳುತ್ತಿದ್ದರು. ಹಾಗಾಗಿ ಇದರಲ್ಲಿ ಅಚ್ಚರಿಪಡುವಂಥದ್ದು ಏನೂ ಇಲ್ಲ ಎಂದಿದೆ.

ಮಾಧವಿ - ಧವಲ್ ದಂಪತಿ ಸ್ಪಷ್ಟನೆ ಏನು?

- ಹಿಂಡೆನ್‌ಬರ್ಗ್ ವರದಿ ಉಲ್ಲೇಖಿಸಿರುವ ಕಂಪನಿಯಲ್ಲಿ 2015ರಲ್ಲಿ ಹೂಡಿಕೆ ಮಾಡಲಾಗಿದೆ. ಆಗ ಇಬ್ಬರೂ ಸಿಂಗಪುರದಲ್ಲಿದ್ದೆವು. ಮಾಧವಿ ಸೆಬಿಯ ಪೂರ್ಣಾವಧಿ ಸದಸ್ಯೆಯಾಗುವುದಕ್ಕೂ 2 ವರ್ಷ ಮೊದಲೇ ಹೂಡಿಕೆ ಮಾಡಲಾಗಿತ್ತು
- ಆ ಕಂಪನಿಯ ಮುಖ್ಯ ಬಂಡವಾಳ ಹೂಡಿಕೆ ಅಧಿಕಾರಿ (ಸಿಐಒ) ಅನಿಲ್ ಅಹುಜಾ ಅವರು ಶಾಲಾ ದಿನಗಳಿಂದಲೇ ಧವಲ್ ಸ್ನೇಹಿತರಾಗಿದ್ದರು. ಐಐಟಿ ದೆಹಲಿಯಲ್ಲೂ ಜೊತೆಗೆ ಇದ್ದರು. 2018ರಲ್ಲಿ ಅಹುಜಾ ಕಂಪನಿಯ ಸಿಐಒ ಹುದ್ದೆಯನ್ನು ತೊರೆದಾಗ ನಾವು ಕೂಡ ಹೂಡಿದ್ದ ಬಂಡವಾಳ ವಾಪಸ್ ಪಡೆದಿದ್ದೆವು
- ಯಾವುದೇ ಸಂದರ್ಭದಲ್ಲೂ ಅದಾನಿ ಸಮೂಹ ಕಂಪನಿಯ ಯಾವುದೇ ಬಾಂಡ್, ಷೇರು ಅಥವಾ ಉತ್ಪನ್ನಗಳ ಮೇಲೆ ಹೂಡಿಕೆ ಮಾಡಿಲ್ಲ
- ಸರಕುಗಳ ಪೂರೈಕೆ ವ್ಯವಸ್ಥೆ ನಿರ್ವಹಣೆಯಲ್ಲಿ ಧವಲ್ ಹೊಂದಿರುವ ಪರಿಣತಿಯ ಆಧಾರದಲ್ಲಿ 2019ರಲ್ಲಿ ಅವರನ್ನು ಬ್ಲ್ಯಾಕ್‌ಸ್ಟೋನ್ ಪ್ರೈವೇಟ್ ಈಕ್ವಿಟಿಯಲ್ಲಿ ಹಿರಿಯ ಸಲಹೆಗಾರರಾಗಿ ನೇಮಕ ಮಾಡಲಾಗಿತ್ತು. ಮಾಧವಿ ಅವರನ್ನು ಸೆಬಿ ಅಧ್ಯಕ್ಷರಾಗಿ ನೇಮಕ ಮಾಡುವುದಕ್ಕೂ ಮೊದಲೇ ಈ ನೇಮಕಾತಿ ನಡೆದಿತ್ತು. ಬ್ಲ್ಯಾಕ್‌ಸ್ಟೋನ್ ಕಂಪನಿಯ ರಿಯಲ್ ಎಸ್ಟೇಟ್ ವಿಭಾಗದೊಂದಿಗೆ ಧವಲ್ ಅವರು ಸಂಬಂಧ ಹೊಂದಿಲ್ಲ
- ಮಾಧವಿ ಅವರು ಸಿಂಗಪುರದಲ್ಲಿದ್ದಾಗ ಭಾರತದಲ್ಲಿ ಮತ್ತು ಸಿಂಗಪುರದಲ್ಲಿ ಆರಂಭಿಸಿದ್ದ ಎರಡು ಕನ್ಸಲ್ಟಿಂಗ್ ಕಂಪನಿಗಳು ಅವರು ಸೆಬಿ ಅಧ್ಯಕ್ಷೆಯಾದ ತಕ್ಷಣ ತಾತ್ಕಾಲಿಕವಾಗಿ ಕಾರ್ಯಾಚರಣೆ ಸ್ಥಗಿತಗೊಳಿಸಿದ್ದವು. ಸೆಬಿಗೆ ಅವರು ಸಲ್ಲಿಸಿರುವ ವಿವರಗಳಲ್ಲಿ ಈ ಕಂಪನಿಗಳು ಮತ್ತು ಅದರಲ್ಲಿ ಅವರು ಹೊಂದಿರುವ ಷೇರು ಪ್ರಮಾಣಗಳ ಮಾಹಿತಿ ಇದೆ
- 2019ರಲ್ಲಿ ಧವಲ್ ಯುನಿಲಿವರ್‌ನಿಂದ ನಿವೃತ್ತರಾದ ಬಳಿಕ, ತಮ್ಮದೇ ಆದ ಕನ್ಸಲ್ಟಿಂಗ್ ಸಂಸ್ಥೆ ಆರಂಭಿಸಿದರು. ಪೂರೈಕೆ ವ್ಯವಸ್ಥೆ ನಿರ್ವಹಣೆಯಲ್ಲಿ ಹೆಚ್ಚು ಅನುಭವ ಇದ್ದುದರಿಂದಾಗಿ ಭಾರತದ ಉದ್ಯಮದಲ್ಲಿ ಪ್ರತಿಷ್ಠಿತ ಕಂಪನಿಗಳೊಂದಿಗೆ ಕೆಲಸ ಮಾಡುವುದಕ್ಕೆ ಅವರಿಗೆ ಅವಕಾಶ ಸಿಕ್ಕಿತು
- ಸಿಂಗಪುರದಲ್ಲಿರುವ ಕಂಪನಿಯ ಷೇರುಗಳು ಧವಲ್ ಅವರ ಹೆಸರಿಗೆ ವರ್ಗಾವಣೆ ಮಾಡಿದ್ದ ಸಂದರ್ಭದಲ್ಲೂ, ಅದರ ಮಾಹಿತಿಯನ್ನೂ ಸೆಬಿಗೆ ಮಾತ್ರವಲ್ಲ, ಸಿಂಗಪುರ ಸರ್ಕಾರ ಮತ್ತು ಭಾರತದ ಆದಾಯ ತೆರಿಗೆ ಇಲಾಖೆಗೂ ನೀಡಲಾಗಿದೆ
- ಮಾಹಿತಿಗಳ ಬಹಿರಂಗ ಮತ್ತು ಹಿತಾಸಕ್ತಿ ಸಂಘರ್ಷಗಳ ನಿಯಮಗಳಿಗೆ ಸಂಬಂಧಿಸಿದಂತೆ ಸೆಬಿಯು ಬಲಿಷ್ಠ ಸಾಂಸ್ಥಿಕ ವ್ಯವಸ್ಥೆ ಹೊಂದಿದೆ. ಅದರ ಅಧಿಕಾರಿಗಳಿಗೆ ಈ ನೀತಿ ಸಂಹಿತೆಗಳು ಅನ್ವಯವಾಗುತ್ತವೆ. ಅದರಂತೆ ಎಲ್ಲ ನಿಯಮಗಳನ್ನು ಪಾಲಿಸಲಾಗಿದೆ



V/S

ಮತ್ತೆ ಸವಾಲು ಹಾಕಿದ ಹಿಂಡೆನ್‌ಬರ್ಗ್

ಮಾಧವಿ ದಂಪತಿ ನೀಡಿರುವ ಸ್ಪಷ್ಟನೆಗೆ 'ಎಕ್ಸ್'ನಲ್ಲಿ ಪ್ರತಿಕ್ರಿಯಿಸಿರುವ ಹಿಂಡೆನ್‌ಬರ್ಗ್, ತನ್ನ ವರದಿಯಲ್ಲಿರುವ ಕೆಲವು ಅಂಶಗಳನ್ನು ಇಬ್ಬರೂ ಒಪ್ಪಿಕೊಂಡಿದ್ದಾರೆ. ಅಲ್ಲದೇ, ಇದು ಇನ್ನೂ ಕೆಲವು ಸಂಕೀರ್ಣ ಪ್ರಶ್ನೆಗಳನ್ನು ಹುಟ್ಟುಹಾಕಿದೆ ಎಂದು ಹೇಳಿದೆ.

'ಗೌತಮ್ ಅದಾನಿ ಅವರ ಸಹೋದರ ವಿನೋದ್ ಅದಾನಿ ಅವರು ಹಣದ ವ್ಯವಹಾರ ನಡೆಸುತ್ತಿದ್ದ ಬರ್ಮುಡಾ/ಮಾರಿಷಸ್‌ನ 'ಶೆಲ್' ಕಂಪನಿಯಲ್ಲೇ ಹೂಡಿಕೆ ಮಾಡಿರುವುದನ್ನು ಮಾಧವಿ ಪುರಿ ಬುಚ್ ದಂಪತಿ ಒಪ್ಪಿಕೊಂಡಿದ್ದಾರೆ. ಕಂಪನಿಯನ್ನು ತಮ್ಮ ಪತಿ ಧವಲ್ ಅವರ ಸ್ನೇಹಿತನೇ ನಿರ್ವಹಿಸುತ್ತಿದ್ದರು ಎಂಬುದನ್ನೂ ದೃಢಪಡಿಸಿದ್ದಾರೆ. ಸ್ನೇಹಿತ ಆ ಸಂದರ್ಭದಲ್ಲಿ ಅದಾನಿ ಕಂಪನಿಯ ನಿರ್ದೇಶಕರಾಗಿದ್ದರು. ಅದಾನಿ ಕಂಪನಿಯ ಹೂಡಿಕೆಗೆ ಸಂಬಂಧಿಸಿದ ಪ್ರಕರಣದ ತನಿಖೆಯನ್ನು ಸೆಬಿ ನಡೆಸಬೇಕಿತ್ತು. ಆ ಕಂಪನಿಯಲ್ಲೇ ಬುಚ್ ಅವರು ಹೂಡಿಕೆ ಮಾಡಿದ್ದಾರೆ. ನಮ್ಮ ವರದಿ ಇದನ್ನೇ ಪ್ರಮುಖವಾಗಿ ಹೇಳಿದೆ. ಇದು ದೊಡ್ಡ ಮಟ್ಟದ ಹಿತಾಸಕ್ತಿ ಸಂಘರ್ಷ' ಎಂದು ಹಿಂಡೆನ್‌ಬರ್ಗ್ ಪುನರುಚ್ಚರಿಸಿದೆ.

'ತಾವು 2017ರಲ್ಲಿ ಸೆಬಿಗೆ ನೇಮಕಗೊಂಡ ತಕ್ಷಣ ಭಾರತ ಮತ್ತು ಸಿಂಗಪುರದಲ್ಲಿ ಸ್ಥಾಪಿಸಿದ್ದ ಎರಡು ಕಂಪನಿಗಳು ಕಾರ್ಯಾಚರಣೆ ಸ್ಥಗಿತಗೊಳಿಸಿದ್ದವು. 2019ರಲ್ಲಿ ಪತಿ ಧವಲ್ ಅವುಗಳ ಉಸ್ತುವಾರಿ ವಹಿಸಿಕೊಂಡಿದ್ದಾರೆ ಎಂದು ಮಾಧವಿ ಹೇಳಿದ್ದಾರೆ. ಆದರೆ, 2024ರ ಮಾರ್ಚ್ 31ರ ಷೇರುದಾರರ ಪಟ್ಟಿಯ ಪ್ರಕಾರ ಅಗೋರ ಅಡ್ವೈಸರಿ ಲಿಮಿಟೆಡ್ (ಇಂಡಿಯಾ) ಕಂಪನಿಯ ಶೇ 99ರಷ್ಟು ಷೇರುಗಳನ್ನು ಮಾಧವಿ ಅವರೇ ಹೊಂದಿದ್ದಾರೆ. ಸಂಸ್ಥೆಯು ಈಗ ಸಕ್ರಿಯವಾಗಿದೆ. ಅಲ್ಲದೇ, ಸಿಂಗಪುರದಲ್ಲಿರುವ ಅಗೋರ ಪಾರ್ಟ್‌ನರ್ಸ್ ಕಂಪನಿಯ ಶೇ 100ರಷ್ಟು ಷೇರುಗಳನ್ನು ಮಾಧವಿ ಅವರು 2022ರ ಮಾರ್ಚ್ 16ರವರೆಗೂ ಹೊಂದಿದ್ದರು. ಅಂದರೆ ಸೆಬಿಯ ಪೂರ್ಣಾವಧಿಯ ಸದಸ್ಯೆಯಾಗಿದ್ದ ಅವಧಿಯಲ್ಲಿ ಅವರೇ ಮಾಲೀಕರಾಗಿದ್ದರು. ಸೆಬಿ ಅಧ್ಯಕ್ಷರಾಗಿ ನೇಮಕಗೊಂಡ ಎರಡು ವಾರಗಳ ಬಳಿಕ ಎಲ್ಲ ಷೇರುಗಳನ್ನು ಪತಿಯ ಹೆಸರಿಗೆ ವರ್ಗಾವಣೆ ಮಾಡಿದ್ದರು' ಎಂದು ಅದು ಆರೋಪಿಸಿದೆ.

'ಧವಲ್ ಅವರು 2019ರಲ್ಲಿ ತಮ್ಮದೇ ಕಂಪನಿ ಸ್ಥಾಪಿಸಿ ಭಾರತದ ಉದ್ದಿಮೆಯ ಪ್ರತಿಷ್ಠಿತ ಕಂಪನಿಗಳೊಂದಿಗೆ ಕೆಲಸ ಮಾಡುತ್ತಿದ್ದಾರೆ ಎಂದು ಮಾಧವಿ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಆದರೆ, ಅವರು ಕಂಪನಿಯ ಹೆಸರುಗಳನ್ನು ಹೇಳಿಲ್ಲ. ಈ ಕಂಪನಿಗಳ ಪಟ್ಟಿಯಲ್ಲಿ ಸೆಬಿ ನಿಯಂತ್ರಣ ಹೇರಬೇಕಾಗಿದ್ದ ಕಂಪನಿಗಳಿವೆಯೇ' ಎಂದು ಪ್ರಶ್ನಿಸಿದೆ.

'ಪಾರದರ್ಶಕವಾಗಿರಲು ಬದ್ಧವಿರುವುದಾಗಿ ಮಾಧವಿಯವರು ಹೇಳಿದ್ದಾರೆ. ಈ ವಿಚಾರಗಳ ಬಗ್ಗೆ ಸಂಪೂರ್ಣ, ಪಾರದರ್ಶಕ ಮತ್ತು ಸಾರ್ವಜನಿಕ ತನಿಖೆ ಎದುರಿಸಲು ಸೆಬಿ ಅಧ್ಯಕ್ಷರು ಬದ್ಧರಾಗಿದ್ದಾರೆಯೇ' ಎಂದು ಹಿಂಡೆನ್‌ಬರ್ಗ್ ಪ್ರಶ್ನಿಸಿದೆ.

ಹಿಂಡೆನ್‌ಬರ್ಗ್, ಶಾರ್ಟ್ ಸೆಲ್ಲಿಂಗ್

ಹಿಂಡೆನ್‌ಬರ್ಗ್ ರಿಸರ್ಚ್ ಅಮೆರಿಕ ಮೂಲದ ಬಂಡವಾಳ ಹೂಡಿಕೆ ಬಗ್ಗೆ ಅಧ್ಯಯನ ನಡೆಸುವ ಕಂಪನಿ. ಷೇರು ಮಾರುಕಟ್ಟೆಯಲ್ಲಿ ಶಾರ್ಟ್ ಸೆಲ್ಲಿಂಗ್ ಕೂಡ ನಡೆಸುತ್ತದೆ. ನಥನ್ ಆ್ಯಂಡರ್ಸನ್ ಇದರ ಸಂಸ್ಥಾಪಕ.

ಷೇರು ಮಾರುಕಟ್ಟೆಗಳಲ್ಲೂ ಸಕ್ರಿಯವಾಗಿರುವ ಹಿಂಡೆನ್‌ಬರ್ಗ್, ಶಾರ್ಟ್ ಸೆಲ್ಲಿಂಗ್ ಕಂಪನಿ ಎಂದು ಗುರುತಿಸಿಕೊಂಡಿದೆ.

ಶಾರ್ಟ್ ಸೆಲ್ಲಿಂಗ್ ಎನ್ನುವುದು ಷೇರುಮಾರುಕಟ್ಟೆಯಲ್ಲಿ ವಹಿವಾಟಿನ ಒಂದು ಕಾರ್ಯತಂತ್ರ. ಇದರಲ್ಲಿ ನಷ್ಟದ ಅಪಾಯ ಹೆಚ್ಚು. ಹಾಗಿದ್ದರೂ ಇಲ್ಲಿ ಟ್ರೇಡರ್ ನಿರ್ದಿಷ್ಟ ಕಂಪನಿಯ ಷೇರುಗಳು ಕುಸಿಯುತ್ತಿರುವ ಸಂದರ್ಭದಲ್ಲಿ ವಹಿವಾಟು ನಡೆಸಿ ಲಾಭ ಮಾಡಿಕೊಳ್ಳುತ್ತಾನೆ.

ಯಾವುದೇ ಕಂಪನಿಯ ಷೇರು ಕುಸಿಯುತ್ತದೆ ಎಂದು ಗೊತ್ತಾದಾಗ ಟ್ರೇಡರ್ ಒಬ್ಬ ಬ್ರೋಕರ್‌ನಿಂದ ಆ ಕಂಪನಿಯ ಷೇರುಗಳನ್ನು ಸಾಲವಾಗಿ ಪಡೆಯುತ್ತಾನೆ. (ಇದಕ್ಕೆ ಷೇರಿನ ಮೌಲ್ಯ, ವಹಿವಾಟು ಶುಲ್ಕ, ಬಡ್ಡಿ ಸೇರಿದಂತೆ ಷೇರಿಗಿಂತಲೂ ಹೆಚ್ಚಿನ ಮೊತ್ತವನ್ನು ಬ್ರೋಕರ್ ಬಳಿ ಠೇವಣಿ ಇಡುತ್ತಾನೆ) ಷೇರು ಮೌಲ್ಯ ಕುಸಿಯಲು ಆರಂಭಿಸಿದಾಗ, ಷೇರುಗಳನ್ನು ಮಾರಾಟ ಮಾಡುತ್ತಾನೆ. ಶಾರ್ಟ್ ಸೆಲ್ಲಿಂಗ್‌ನಲ್ಲಿ ಷೇರಿನ ಬೆಲೆ ಕುಸಿದಷ್ಟೂ ಟ್ರೇಡರ್‌ಗೆ ಲಾಭ.

ಭಾರತ ಸೇರಿದಂತೆ ಹಲವು ರಾಷ್ಟ್ರಗಳಲ್ಲಿ ಶಾರ್ಟ್ ಸೆಲ್ಲಿಂಗ್ ಕಾನೂನು ಬದ್ಧವಾಗಿದೆ.

ಯಾರು ಈ ಮಾಧವಿ–ಧವಲ್ ದಂಪತಿ?

ಮಾಧವಿ ಅವರು ಸೆಬಿಯ ಮೊದಲ ಅಧ್ಯಕ್ಷೆ; ಖಾಸಗಿ ವಲಯದಿಂದ ಸೆಬಿಯ ಅಧ್ಯಕ್ಷರಾಗಿ ಆಯ್ಕೆಯಾದ ಮೊದಲಿಗರು. ದೆಹಲಿಯ ಸೇಂಟ್ ಸ್ಟೀಫನ್ಸ್ ಕಾಲೇಜಿನಿಂದ ಗಣಿತದಲ್ಲಿ ಪದವಿ ಪಡೆದಿರುವ ಅವರು, ಅಹಮದಾಬಾದ್‌ನ ಭಾರತೀಯ ನಿರ್ವಹಣಾ ಸಂಸ್ಥೆಯಿಂದ (ಐಐಎಂ) ಎಂಬಿಎ ಪದವಿ ಗಳಿಸಿದರು. ಐಸಿಐಸಿಐ ಸಮೂಹ ಸೇರಿದಂತೆ ಬ್ಯಾಂಕಿಂಗ್ ಮತ್ತು ಹಣಕಾಸು ಸಂಸ್ಥೆಗಳಲ್ಲಿ ಎರಡು ದಶಕಕ್ಕೂ ಹೆಚ್ಚು ಕೆಲಸ ಮಾಡಿದ್ದಾರೆ.

ಧವಲ್ ಬುಚ್ ಅವರು ದೆಹಲಿಯ ಭಾರತೀಯ ತಂತ್ರಜ್ಞಾನ ಸಂಸ್ಥೆಯಿಂದ (ಐಐಟಿ) ಪದವಿ ಪಡೆದಿದ್ದಾರೆ. 35 ವರ್ಷಕ್ಕೂ ಹೆಚ್ಚು ಕಾಲ ಹಿಂದೂಸ್ಥಾನ್ ಯುನಿಲಿವರ್ ಲಿಮಿಟೆಡ್‌ನಲ್ಲಿ ಕೆಲಸ ಮಾಡಿದ್ದಾರೆ. ಯುನಿಲಿವರ್ ಸಂಸ್ಥೆಯ ಉದ್ಯೋಗಿಯಾಗಿ ಅವರು ಹಲವು ವರ್ಷ ಲಂಡನ್, ಸಿಂಗಪುರ ಸೇರಿದಂತೆ ಹಲವು ನಗರಗಳಲ್ಲಿ ವಾಸವಾಗಿದ್ದರು. ಮಾಧವಿ ಮತ್ತು ಧವಲ್ ಅವರು ದೇಶವಿದೇಶದಲ್ಲಿ ಹಲವು ಸಂಸ್ಥೆ/ಕಂಪನಿಗಳನ್ನು ಸ್ಥಾಪಿಸಿ, ವಹಿವಾಟು ನಡೆಸಿದ್ದಾರೆ.


ಆಧಾರ: ಪಿಟಿಐ, ಹಿಂಡೆನ್‌ವರ್ಗ್ ರಿಸರ್ಚ್ ವರದಿ, ಮಾಧವಿ ಬುಚ್ ದಂಪತಿ, ಹಿಂಡೆನ್ ಬರ್ಗ್ ಟ್ವೀಟ್‌ಗಳು

ಗುಂಡಣ್ಣ



ಹದ್ದು ಮತ್ತು ಮೀನು

ನುಡಿ ಬೆಳಗು



ಪಿ. ಚಂದ್ರಿಕಾ

ದುಃಖಿಯೊಬ್ಬ 'ನನ್ನ ಜೀವನದಲ್ಲಿ ಏನೆಲ್ಲಾ ನಡೆಯಿತು, ನಾನು ಏನೆಲ್ಲವನ್ನೂ ಎದುರಿಸಿದೆ. ಎಲ್ಲಾ ಕೆಟ್ಟದ್ದು ನನ್ನ ಜೊತೆಗೇ ಯಾಕೆ ನಡೆಯುತ್ತದೋ ತಿಳಿಯದು. ಈಗ ನಾನು ಎದುರಿಸುವ ಶಕ್ತಿ ಕಳಕೊಂಡಿದ್ದೇನೆ. ಅದಕ್ಕೆ ಎಲ್ಲವನ್ನೂ ಬಿಟ್ಟು ಹೋಗಬೇಕು ಎನ್ನುವ ನಿರ್ಧಾರಕ್ಕೆ ಬಂದಿದ್ದೇನೆ' ಎಂದು ತನ್ನ ಗೆಳೆಯನ ಮುಂದೆ ತೋಡಿಕೊಂಡ. ಗೆಳೆಯ ಹೇಳಿದ 'ಜಗತ್ತಿನಲ್ಲಿ ಯಾರಿಗೂ ಆಗದ್ದು ನಿನಗಾಗಿದೆಯೇ? ಅವರೆಲ್ಲರೂ ಎದುರಿಸದೇ ನಿನ್ನ ಹಾಗೆ ತಲೆತಪ್ಪಿಸಿಕೊಂಡು ಹೋಗುತ್ತಿದ್ದಾರೆಯೇ' ಎಂದು. 'ಬೇರೆಯವರಿಗೆ ಏನಾಯಿತೋ ತಿಳಿಯದು. ನನಗೆ ಮಾತ್ರ ಜೀವನ ಕೆಟ್ಟದ್ದು ಅನ್ನಿಸಿದೆ. ನಾನು ಇದನ್ನು ತೊರೆಯುತ್ತೇನೆ' ಎನ್ನುತ್ತಾನೆ. ಅವನ ಈ ಮಾತಿಗೆ ಗೆಳೆಯ ನಗುತ್ತಾ 'ನಿನಗೆ ಆ ಕಥೆಯನ್ನು ಹೇಳುತ್ತೇನೆ, ರಾಮಕೃಷ್ಣರು ತಮ್ಮ ಶಿಷ್ಯರಿಗೆ ಹೇಳಿದ್ದು' ಎನ್ನುತ್ತಾ ಕಥೆಯನ್ನು ಹೇಳಲು ಆರಂಭಿಸುತ್ತಾನೆ.

'ಒಮ್ಮೆ ಮೀನುಗಾರನ ಬಲೆಯಲ್ಲಿ ದೊಡ್ಡ ಮೀನುಗಳು ಸಿಕ್ಕಿಕೊಂಡವು. ಅವನು ಅವುಗಳನ್ನು ದಡಕ್ಕೆ ಸುರಿದ. ಹಸಿದ ಕಾಗೆಗಳು ಮೀನನ್ನು ಹೊತ್ತೊಯ್ಯಲಿಕ್ಕೆ ಹೊಂಚು ಹಾಕಿದ್ದವು. ಆಗಲೇ ಹದ್ದೊಂದು ಎರಗಿ ಅದರಿಂದ ಒಂದು ಮೀನನ್ನು ಎತ್ತಿಕೊಂಡು ಹಾರಿಹೋಯಿತು. ಮೀನುಗಾರ ಜಾಗೃತನಾಗಿ ಮೀನಿನ ಮೇಲೆ ಬಲೆಯನ್ನು ಹರಡಿಟ್ಟ. ಆಗ ಕಾಗೆಗಳಿಗೆ ಮೀನು ಸಿಗದ ಕಾರಣ ಅವು ಆ ಹದ್ದನ್ನು ಹಿಂಬಾಲಿಸಿದವು. ಹಸಿವು ಅವುಗಳನ್ನು ಕಾಡುತ್ತಿತ್ತು. ಈಗ ಮೀನನ್ನು ಕಾಪಾಡಲು ಹದ್ದು ವಿರುದ್ಧ ದಿಕ್ಕಿಗೆ ಹಾರಿತು. ಕಾಗೆಗಳು ಅಲ್ಲಿಯೂ ಬಿಡಲಿಲ್ಲ. ಮತ್ತದು ತನಗೆ ತೋಚಿದ ದಿಕ್ಕಿನ ಕಡೆಗೆಲ್ಲಾ ಹಾರಿತು. ಆದರೆ ಹಸಿದ ಕಾಗೆಗಳು ಬಿಡಲೇ ಇಲ್ಲ.

ಹದ್ದಿಗೆ ತಿನ್ನುವುದಕ್ಕಿಂತ ಮೀನನ್ನು ಕಾಪಾಡಿಕೊಳ್ಳುವುದೇ ಮುಖ್ಯವಾಗಿಬಿಟ್ಟಿತ್ತು. ಅದು ಕಾಗೆಗಳ ಕೈಗೆ ಸಿಕ್ಕದೆ ಹಾರಾಡಿ ಹಾರಾಡಿ ಸುಸ್ತಾಗಿಬಿಟ್ಟಿತ್ತು. ಹೀಗೆ ಹಾರಿ ತಪ್ಪಿಸಿಕೊಳ್ಳುವ ಭರದಲ್ಲಿ ಅದರ ಕೊಕ್ಕಲ್ಲಿ ಕಚ್ಚಿಕೊಂಡಿದ್ದ ಮೀನು ಬಿದ್ದೇ ಹೋಯಿತು. ಕಾಗೆಗಳೆಲ್ಲವೂ ಹದ್ದನ್ನು ಬಿಟ್ಟು ಮೀನಿನತ್ತ ಧಾವಿಸಿದವು. ಸುಸ್ತಾದ ಹದ್ದು ಒಂದೆಡೆ ಕುಳಿತು, 'ಅಬ್ಬಾ ಈ ಅನಿಷ್ಟ ಮೀನಿನಿಂದ ಇವತ್ತು ನಾನು ಎಷ್ಟೆಲ್ಲಾ ಶ್ರಮಪಡಬೇಕಾಯಿತು. ಸದ್ಯ ಅದು ನನ್ನ ಕೊಕ್ಕಿಂದ ಜಾರಿಬಿದ್ದದ್ದೇ ಒಳ್ಳೆಯದಾಯಿತು. ಈಗ ನಾನು ಎಷ್ಟು ನಿರಾಳವಾದೆ ಎಂದುಕೊಂಡಿತು'.

ಕಥೆಯನ್ನು ಕೇಳುತ್ತಿದ್ದ ದುಃಖಿತ ತಕ್ಷಣ ಪ್ರತಿಕ್ರಿಯಿಸಿದ, 'ದಡ್ಡ ಹದ್ದು'. ಗೆಳೆಯ ನಗುತ್ತಾ ಕೇಳಿದ, 'ಅದ್ಯಾಕೆ ದಡ್ಡ ಹದ್ದಾಗುತ್ತದೆ. ಕಾಗೆಗಳಿಂದ ತಪ್ಪಿಸಿಕೊಂಡಿತಲ್ಲವೇ' ಎಂದು. ಅದಕ್ಕೆ ದುಃಖಿತ ದೃಢವಾಗಿ ಹೇಳಿದ, 'ಕಷ್ಟಪಟ್ಟು ಗಳಿಸಿದ್ದ ಮೀನನ್ನು ಉಳಿಸಿಕೊಳ್ಳದೆ ನೆಲಕ್ಕೆ ಚೆಲ್ಲಿ, ಆ ಹದ್ದು ಯಾವ ಸಾಧನೆ ಮಾಡಿತು? ತಿರುಗಿ ಬಿದ್ದಿದ್ದರೆ ಅದಕ್ಕೆ ಆ ಕಾಗೆಗಳು ಯಾವ ಲೆಕ್ಕ?' ಎಂದು. ಗೆಳೆಯ ನಗುತ್ತ ಹೇಳಿದ, 'ನಿನಗೆ ಬಂದ ಕಷ್ಟಕ್ಕೂ ಹದ್ದಿಗೆ ಬಂದ ಕಷ್ಟಕ್ಕೂ ಏನು ವ್ಯತ್ಯಾಸವಿದೆ ಹೇಳು? ಇನ್ನೊಬ್ಬರಿಗೆ ಬಂದ ದುಃಖಕ್ಕೆ ಸುಲಭವಾಗಿ ಪರಿಹಾರ ನೀಡುತ್ತೇವೆ. ಆದರೆ ನಮಗೆ ಯಾಕೆ ಹೇಳಿಕೊಳ್ಳುವುದಿಲ್ಲ? ಈ ಜೀವನ ಕೂಡಾ ನೀನು ಕಷ್ಟಪಟ್ಟು ಗಳಿಸಿಕೊಂಡಿದ್ದಲ್ಲವೇ? ಕಷ್ಟ ಎನ್ನುವ ಸಣ್ಣ ಕಾರಣಕ್ಕೆ ದೊಡ್ಡ ಉದ್ದೇಶವನ್ನು ಮರೆಯಬಾರದಲ್ಲವೇ' ಎಂದ. ದುಃಖಿತನಿಗೆ ತನ್ನ ತಪ್ಪಿನ ಅರಿವಾಯಿತು. ಗೆಳೆಯನ ಕೈಹಿಡಿದು ಹೇಳಿದ, 'ನನಗಿಂತ ಕಷ್ಟ ದೊಡ್ಡದಲ್ಲ. ಇನ್ನು ಯಾವುದನ್ನೂ ಬಿಟ್ಟುಕೊಡುವುದಿಲ್ಲ. ಎದುರಿಸುವೆ'.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಮಂಗಳವಾರ ಆಗಸ್ಟ್ 13, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಶುಕ್ಲ ಅಷ್ಟಮಿ ಗಂ. 9-32 ನಕ್ಷತ್ರ: ವಿಶಾಖಾ ಗಂ. 10-44 ಯೋಗ: ಬ್ರಹ್ಮ ಗಂ. 16-33 ಕರಣ: ಬವ ಗಂ. 9-32, ಕರ್ಕಾಟಕ ಮಾಸದ 27 ನೇ ದಿನ, ಮಳೆನಕ್ಷತ್ರ: ಆಶ್ಲೇಷ 4.
ರಾಹುಕಾಲ : ಮಧ್ಯಾಹ್ನ 03-00 – 04-30
ಸೂರ್ಯೋದಯ : 06-21 ಸೂರ್ಯಾಸ್ತ : 06-49
ಮುಸ್ಲಿಂ ದಿನಾಂಕ : 08 ಸಫರ್
ಅದೃಷ್ಟ ಸಂಖ್ಯೆ : 3, 8

ಮೇಷ: ಆರೋಗ್ಯದಲ್ಲಿ ಉತ್ತಮ ಚೇತರಿಕೆ ಕಂಡುಬಂದು ಮಾರ್ಗದರ್ಶಿಗಳ ಮಾತಿನಂತೆ ಧಾರ್ಮಿಕ ಚುಟುವಟಿಕೆಗಳಲ್ಲಿ ಪಾಲ್ಗೊಳ್ಳುವಿರಿ. ಹಿರಿಯರೊಂದಿಗೆ ವ್ಯಾಪಾರ ವ್ಯವಹಾರದ ವಿಚಾರದಲ್ಲಿ ಚರ್ಚೆ ನಡೆಯಲಿದೆ.

ವೃಷಭ: ಪಿತ್ರಾರ್ಜಿತ ಆಸ್ತಿಗೆ ಸಂಬಂಧಪಟ್ಟಂಥ ಕೋರ್ಟಿನಲ್ಲಿರುವ ಹಳೆಯ ವ್ಯಾಜ್ಯಗಳು ಈ ದಿನ ಇತ್ಯರ್ಥಗೊಳ್ಳುವ ಸಂಭವವಿದೆ. ಉದ್ಯೋಗದಲ್ಲಿ ಸಿಗುವಂಥ ವರ್ಗಾವಣೆಯ ಅವಕಾಶಗಳನ್ನು ಬಿಟ್ಟುಕೊಳ್ಳಬೇಡಿ.

ಮಿಥುನ: ವ್ಯಾಪಾರ, ಕೈಗಾರಿಕೆ ಹಾಗೂ ವಾಣಿಜ್ಯ ಕ್ಷೇತ್ರಗಳಲ್ಲಿನ ಸುಧಾರಣೆಗೆ ಸಾಕಷ್ಟು ಅವಕಾಶವಿದೆ. ಶೀತಬಾಧೆಯಿಂದ ಮುಕ್ತರಾಗಲು ಗಿಡಮೂಲಿಕೆಯ ಕಷಾಯ ಸೇವಿಸಿ. ಮನೆ ಖರೀದಿಸುವ ವಿಷಯ ಇತ್ಯರ್ಥವಾಗುವುದು.

ಕರ್ಕಾಟಕ: ಸಾಲದ ಹಣ ಹಿಂದುರಿಗಿ ಕೈಸೇರುವುದರಿಂದ ಮನೆಯ ರಿಪೇರಿ ಕೆಲಸಗಳಿಗೆ ಹಣ ಖರ್ಚು ಮಾಡುವಿರಿ. ಜಲಮಂಡಳಿ ನೌಕರರಿಗೆ ವೇತನ ಹೆಚ್ಚಳವಾಗಲಿದೆ. ಷೇರು ವ್ಯಾಪಾರ ಅದೃಷ್ಟದಾಯಕವಾಗಿರುತ್ತದೆ.

ಸಿಂಹ: ವ್ಯಾಪಾರ ವ್ಯವಹಾರಗಳಲ್ಲಿ ನಡೆಯುತ್ತಿದ್ದ ಅವ್ಯವಹಾರಗಳು ಹಿಡಿತಕ್ಕೆ ಬರಲಿದೆ. ಸೋಮಾರಿತನ ಶ್ರೇಯಸ್ಸಿಗೆ ಅಡ್ಡಿ ಬರದಂತೆ ಗಮನಹರಿಸಿ. ನೆರೆಯವರ ಸಹಾಯದಿಂದ ಮಗಳ ಮದುವೆ ನಿಶ್ಚಯವಾಗಲಿದೆ.

ಕನ್ಯಾ: ಸಂಗತಿಗಳನ್ನು ಹಗುರವಾಗಿ ಪರಿಗಣಿಸುವ ಸ್ವಭಾವ ಬದಲಿಸಿಕೊಳ್ಳಿ. ಬಂಧು ಮಿತ್ರರೊಂದಿಗೆ ಸಂತೋಷ ಹಂಚಿಕೊಳ್ಳುವಿರಿ. ಹರಿತದ ನಿರ್ಧಾರಗಳು ಏಕಾಂಗಿತನಕ್ಕೆ ಕಾರಣವಾಗುವುದು.

ತುಲಾ: ಸತ್ಕಾರ ಸಮಾರಂಭಗಳಲ್ಲಿ ಭಾಗವಹಿಸುವಿರಿ ಅಥವಾ ಬಂಧು ಮಿತ್ರರು ಮನೆಗೆ ಬರಲಿದ್ದಾರೆ. ರಾಜಕೀಯ ವ್ಯಕ್ತಿಗಳಿಗೆ ದುರಹಂಕಾರಿ ಎನ್ನುವ ಪಟ್ಟ ಸಿಗುವ ಲಕ್ಷಣಗಳಿವೆ. ಮನೆಯಲ್ಲಿ ಶುಭ ಕಾರ್ಯಗಳಿಗೆ ಪ್ರಯತ್ನ ಮಾಡುವಿರಿ.

ವೃಶ್ಚಿಕ: ಸಹಾಯ ಮಾಡುವ ವಿಚಾರದಲ್ಲಿ ಮುಂದಾಲೋಚನೆಯಿಲ್ಲದೆ ಮುಂದುವರಿಯುವುದನ್ನು ಬದಲು ಮಾಡಿಕೊಳ್ಳುವ ಮಾರ್ಗವನ್ನು ಕಂಡುಕೊಳ್ಳಿ. ಒಮ್ಮೊಮ್ಮೆ ಕಾಡುವ ಸಮಸ್ಯಾ ಸರಪಳಿ ಪರಿಹಾರವಾಗುವುದು.

ಧನು: ಕೆಲಸ ಕಾರ್ಯದಲ್ಲಿ ಸಮಾನ ಮನಸ್ಕರರು ಸಿಗುವುದರಿಂದ ವ್ಯವಸ್ಥಿತವಾಗಿ ಮಾತುಕತೆ ನಡೆದು ಕಾರ್ಯಭಾರ ಸುಗಮವಾಗುತ್ತದೆ. ಸುಗಂಧ ದ್ರವ್ಯಗಳ ವ್ಯಾಪಾರಿಗಳಿಗೆ ಉತ್ತಮ ವ್ಯಾಪಾರ ಸಂಭವವಿದೆ.

ಮಕರ: ಯಂತ್ರೋಪಕರಣಗಳ ಮಾರಾಟದಿಂದ ಮತ್ತು ಪಶು ಸಂಗೋಪನೆಯಿಂದ ಲಾಭ ಇರುವುದು. ನೈತಿಕವಾಗಿ ಪರಸ್ಪರ ಬೆಂಬಲವಾಗಿರುವ ಸ್ನೇಹ ಸಂಬಂಧ ಮುಂದುವರಿಯಲಿದೆ. ಸಮಾರಂಭಕ್ಕೆ ಆಹ್ವಾನ ಬರುವುದು.

ಕುಂಭ: ಆಯ್ಕೆ ಮಾಡುವ ವಿಚಾರದಲ್ಲಿ ಮನಸ್ಸಿನ ಚಂಚಲ ಸ್ವಭಾವದಿಂದ ಇಂದಿನ ದಿನ ವಿಫಲರಾಗುವ ಸನ್ನಿವೇಶಗಳಿರುವುದು. ಇಂದು ಶರೀರದಲ್ಲಿನ ನವ ಚೈತನ್ಯವು ಕಾರ್ಯಪ್ರವೃತ್ತಿಯನ್ನು ಹೊಂದುವಂತೆ ಮಾಡುವುದು.

ಮೀನ: ಲೋಹದ ವಸ್ತುಗಳನ್ನು ವ್ಯಾಪಾರ ಮಾಡುವವರು ದುಪ್ಪಟ್ಟು ಲಾಭ ಪಡೆಯಬಹುದು. ಅನವಶ್ಯಕವಾಗಿ ಋಣಾತ್ಮಕ ಚಿಂತನೆಗಳನ್ನು ಮಾಡದಿರಿ. ಧಾರ್ಮಿಕ ಚಿಂತನೆಯನ್ನು ಮುಂದುವರಿಸಿ.

ಸಿನಿ ಬಿಟ್ಸ್



'ರಾಕ್ಷಸ'ನ ಟ್ರೇಲರ್ ಬಿಡುಗಡೆ

ನಟ ಪ್ರಜ್ವಲ್ ದೇವರಾಜ್ ನಟನೆಯ 'ರಾಕ್ಷಸ' ಸಿನಿಮಾದ ಟ್ರೇಲರ್ ಬಿಡುಗಡೆಗೊಂಡಿದೆ. 'ಮಮ್ಮಿ' ಮತ್ತು 'ದೇವಕಿ' ಸಿನಿಮಾ ಖ್ಯಾತಿಯ ನಿರ್ದೇಶಕ ಲೋಹಿತ್ ಎಚ್.ನಿರ್ದೇಶನದ ಈ ಸಿನಿಮಾ ಸೆಪ್ಟೆಂಬರ್‌ನಲ್ಲಿ ತೆರೆಕಾಣಲಿದೆ.

ಇತ್ತೀಚೆಗಷ್ಟೇ ಬೆಂಗಳೂರಿನ ಪ್ರಸನ್ನ ಚಿತ್ರಮಂದಿರದಲ್ಲಿ ಟ್ರೇಲರ್ ಬಿಡುಗಡೆ ಕಾರ್ಯಕ್ರಮ ನಡೆಯಿತು. ನಟಿ ಪ್ರಿಯಾಂಕಾ ಉಪೇಂದ್ರ ಟ್ರೇಲರ್ ರಿಲೀಸ್ ಮಾಡಿದರು. ಈ ವೇಳೆ ಮಾತನಾಡಿದ ಪ್ರಜ್ವಲ್ ದೇವರಾಜ್, 'ನನಗೆ ಹಾರರ್ ಸಿನಿಮಾಗಳೆಂದರೆ ಭಯ. ಹೆಂಡತಿ ಸೆರಗಿನ ಹಿಂದೆ ಬಚ್ಚಿಟ್ಟುಕೊಂಡು ಹಾರರ್ ಸಿನಿಮಾ ನೋಡುವವನು ನಾನು. ಆದರೆ ಈಗ ನಾನೇ ಹಾರರ್ ಸಿನಿಮಾದಲ್ಲಿ ನಟಿಸಿದ್ದೇನೆ. ಇದಕ್ಕೆ ಕಾರಣ ಲೋಹಿತ್. ಸಿನಿಮಾ ಚೆನ್ನಾಗಿ ಮೂಡಿ ಬಂದಿದೆ' ಎಂದರು.

'ಈ ಸಿನಿಮಾದ ವಿಶೇಷ ಏನೆಂದರೆ ಹಾರರ್ ಜೊತೆಗೆ ಟೈಮ್ ಲೂಪ್ ವಿಷಯವನ್ನು ಇಲ್ಲಿ ಅಳವಡಿಸಿಕೊಳ್ಳಲಾಗಿದೆ. ಇದೇ ಮೊದಲ ಬಾರಿಗೆ ಚಂದನವನದಲ್ಲಿ ಇಂತಹ ಭಿನ್ನ ಪ್ರಯತ್ನ ನಡೆದಿದೆ' ಎಂದಿದೆ ಚಿತ್ರತಂಡ. ಚಿತ್ರದ ಸಂಪೂರ್ಣ ಶೂಟಿಂಗ್ ರಾಮೋಜಿ ರಾವ್ ಫಿಲಂ ಸಿಟಿಯಲ್ಲಿ ನಡೆದಿದೆ. ಸಿನಿಮಾದಲ್ಲಿ ಪ್ರಜ್ವಲ್ ಜೊತೆಯಾಗಿ ಅರುಣ್ ರಾಥೋಡ್, ಶ್ರೀಧರ್, ಗೌತಮ್, ಸೋಮಶೇಖರ್ ಸೇರಿದಂತೆ ಅನೇಕ ಕಲಾವಿದರು ಅಭಿನಯಿಸಿದ್ದಾರೆ. ಶಾನ್ವಿ ಎಂಟರ್‌ಪ್ರೈಸಸ್ ಅಡಿಯಲ್ಲಿ ಈ ಸಿನಿಮಾ ನಿರ್ಮಾಣವಾಗಿದೆ. ಕಮರ್ಷಿಯಲ್ ಚಿತ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದ ಪ್ರಜ್ವಲ್ ಇದೇ ಮೊದಲ ಬಾರಿಗೆ ಹಾರಾರ್ ಸಿನಿಮಾವೊಂದರ ಮೂಲಕ ಪ್ರೇಕ್ಷಕರೆದುರಿಗೆ ಬರುತ್ತಿದ್ದಾರೆ.

2026ಕ್ಕೆ ನೀಲ್–ಎನ್‌ಟಿಆರ್ ಸಿನಿಮಾ



ಜೂನಿಯರ್ ಎನ್‌ಟಿಆರ್

ತೆಲುಗಿನ ಖ್ಯಾತ ನಟ ಜೂನಿಯರ್ ಎನ್‌ಟಿಆರ್‌ಗೆ ನಿರ್ದೇಶಕ ಪ್ರಶಾಂತ್ ನೀಲ್ ಆ್ಯಕ್ಷನ್ ಕಟ್ ಹೇಳಲಿದ್ದಾರೆ ಎನ್ನುವ ಸುದ್ದಿ ಬಹಳ ಹಿಂದೆಯೇ ಹರಿದಾಡಿತ್ತು. ಇದೀಗ ಈ ವಿಷಯವನ್ನು ಅಧಿಕೃತವಾಗಿ ಚಿತ್ರತಂಡ ಘೋಷಿಸಿದೆ.

'ಪುಷ್ಪ', 'ರಂಗಸ್ಥಳಂ' ಮುಂತಾದ ಸಿನಿಮಾಗಳನ್ನು ನಿರ್ಮಾಣ ಮಾಡಿದ ಮೈತ್ರಿ ಮೂವಿ ಮೇಕರ್ಸ್ ಸಂಸ್ಥೆ ಈ ಸಿನಿಮಾವನ್ನು ನಿರ್ಮಾಣ ಮಾಡಲಿದ್ದು, ಹೈದರಾಬಾದ್‌ನಲ್ಲಿ ನಡೆದ ಮುಹೂರ್ತದ ದಿನದಂದೇ ಚಿತ್ರ ರಿಲೀಸ್ ದಿನಾಂಕವನ್ನೂ ಘೋಷಿಸಲಾಗಿದೆ. ಈ ಬಿಗ್ ಬಜೆಟ್ ಸಿನಿಮಾ 2026ರ ಜನವರಿ 9ರಂದು ಬಿಡುಗಡೆಯಾಗಲಿದೆ. ಶೀಘ್ರದಲ್ಲೇ ಚಿತ್ರದ ಚಿತ್ರೀಕರಣ ಆರಂಭವಾಗಲಿದೆ ಎಂದು ಚಿತ್ರತಂಡ ತಿಳಿಸಿದೆ. ಕನ್ನಡದಲ್ಲಿ ಕೆ.ಜಿ.ಎಫ್. ಸಿನಿಮಾ ಸರಣಿ ಬಳಿಕ, ನೀಲ್ 'ಸಲಾರ್' ಸಿನಿಮಾದಲ್ಲಿ ಪ್ರಭಾಸ್‌ಗೆ ಆ್ಯಕ್ಷನ್ ಕಟ್ ಹೇಳಿದ್ದರು. ಇದೀಗ 'ಆರ್.ಆರ್.ಆರ್' ಖ್ಯಾತಿಯ ಜೂನಿಯರ್ ಎನ್‌ಟಿಆರ್‌ಗೆ ನಿರ್ದೇಶನ ಮಾಡಲು ಸಜ್ಜಾಗಿದ್ದಾರೆ. ಮೂಲ ತೆಲುಗು ಜತೆಗೆ, ತಮಿಳು, ಹಿಂದಿ, ಕನ್ನಡ ಮತ್ತು ಮಲಯಾಳದಲ್ಲಿ ಸಿನಿಮಾ ತೆರೆಕಾಣಲಿದೆ.

ಈ ಸಿನಿಮಾಗೆ ನೀಲ್ ಅವರೇ ಚಿತ್ರಕಥೆ ಬರೆದು ನಿರ್ದೇಶಿಸುತ್ತಿದ್ದಾರೆ. ಈ ಚಿತ್ರವನ್ನು ಕಲ್ಯಾಣ್ ರಾಮ್ ನಂದಮೂರಿ, ನವೀನ್ ಯೆರ್ನೇನಿ, ರವಿಶಂಕರ್ ಯಲಮಂಚಿಲಿ ಮತ್ತು ಹರಿಕೃಷ್ಣ ಕೊಸರಾಜು ಅವರು ಮೈತ್ರಿ ಮೂವೀ ಮೇಕರ್ಸ್ ಮತ್ತು ಎನ್‌ಟಿಆರ್ ಆರ್ಟ್ಸ್ ಬ್ಯಾನರ್ ಅಡಿಯಲ್ಲಿ ನಿರ್ಮಿಸುತ್ತಿದ್ದಾರೆ. 'ಕೆ.ಜಿ.ಎಫ್', 'ಸಲಾರ್' ಖ್ಯಾತಿಯ ಭುವನ್ ಗೌಡ ಈ ಚಿತ್ರಕ್ಕೆ ಛಾಯಾಚಿತ್ರಗ್ರಹಣ ಮಾಡಲಿದ್ದು, ರವಿ ಬಸ್ರೂರ್ ಸಂಗೀತ ಸಂಯೋಜಿಸಲಿದ್ದಾರೆ.



ಪ್ರಶಾಂತ್ ನೀಲ್


ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪದಬಂಧ 5771

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕಹಾನಿಯಲ್ಲಿ ನಷ್ಟ ಬಂದಿದೆ! (2)
3.ಪಿನಾಕದ ಬಳಿಯಲ್ಲಿರುವ ಕೋಗಿಲೆ (2)
6.ಮಧುರವಾದ ಧ್ವನಿ (4)
8.ಕನಲಿಕೆಗೊಂದು ಪರ್ಯಾಯ ಪದ (2)
9.ಚಡಚಣದಲ್ಲಿ ಶರಣನು ನುಡಿದ ಪದ್ಯಗಳ ಸಾಲು! (3)
10.ಅಪ್ಪಣ್ಣನನ್ನು ತೋರಿಸಿದ ಹಿರಿಯ ಸಹೋದರ! (2)
11.'ರೇಕಣ್ಣಪ್ರಿಯ ನಾಗಿನಾಥ'ಅಂಕಿತವುಳ್ಳ ವಚನಕಾರ (7)
12.ಕಾಜಾಣ ಹಿಡಿದಿಟ್ಟುಕೊಂಡ ಬುದ್ಧಿವಂತ! (2)
13.ಕೊನೆಗೆ ತಿರುಗಿರುವ ಮಗನಿಗೆ ಇದು ಸಲೀಸು! (3)
14.ಗೋಡೆಯಲ್ಲಿ ಕೊರೆಯುವ ಕಿಂಡಿ (2)
15.ಹಣವಿರಿಸಿರುವ ಅಗಲವಾದ ತಟ್ಟೆ (4)
16.ತರಲೆಯ ಶಿರ (2)
17.ಜಡೆಗಟ್ಟಿದ ಕೂದಲು (2)

ಮೇಲಿಂದ ಕೆಳಕ್ಕೆ
2.ಒರೆಗಲ್ಲು ಇಲ್ಲಿದೆ (3)
4.ಕಣದಲ್ಲಿರುವ ಜ್ಞಾನೇಂದ್ರಿಯ! (3)
5.ನೊಸಲಲ್ಲಿ ಕಣ್ಣು ಉಳ್ಳವನು (4)
7.ಫ.ಗು.ಹಳಕಟ್ಟಿ ಅವರನ್ನು ಹೀಗೆ ಕರೆಯಲಾಗುತ್ತದೆ (7)
10.ಎಲವೋ ಎಂದರೆ ನರಕ, ಹೀಗೆಂದರೆ ಸ್ವರ್ಗ! (2)
11.ಬಡಗಣ ದಿಕ್ಕಿನಲ್ಲಿರುವ ಗುಂಪು! (2)
12.ಯಜಮಾನನ ಹುಟ್ಟುಗುಣ (4)
13.ಸುತನಲ್ಲಿರುವ ಪುಣ್ಯ! (3)
14.ಧಾನ್ಯಗಳನ್ನು ಸಂಗ್ರಹಿಸುವ ಸ್ಥಳ (3)



5770ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಹಯ್ಯಂಗವೀನ 4.ಹಗರಣ 7.ಆಕಸ್ಮಿಕ 8.ನಡುಮನೆ 10.ಮಗ್ಗ 11.ಜೊಲ್ಲು 12.ಮಕರಂದ 14.ಕಲೇವರ 17.ಜಯಶಾಲಿ 18.ಹಯವದನ

ಮೇಲಿಂದ ಕೆಳಕ್ಕೆ:
1.ಕುಹಕಿ 2.ಹಣ 3.ವೀಕ್ಷಕ 5.ರಸನ 6.ಮಕಮಲ್ಲು 7.ಆನೆ 9.ಮಕ್ಷಿಕ 10.ಮಧುಕರಿ 12.ಮರ 13.ದಡಿಯ 15.ವಲಯ 16.ಗಿಲಿಕಿ 17.ಜನ

ಸುಡೊಕು 6156

					5	4		9
4		7	6				5	
	6	5		4	8	1		
	2				7			6
5		1		6			2	
			5					7
	3	9		5		6		
6			8		4		3	1
		4		3		2		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6155 ಸುಡೊಕು

3	4	9	1	5	8	2	7	6
2	5	6	4	9	7	8	1	3
1	7	8	3	6	2	4	5	9
5	3	7	2	4	6	9	8	1
8	9	1	7	3	5	6	2	4
4	6	2	8	1	9	7	3	5
6	8	4	5	2	3	1	9	7
7	1	3	9	8	4	5	6	2
9	2	5	6	7	1	3	4	8

ನೀರಿನ ಪ್ರಮಾಣ ಕಡಿಮೆ ಮಾಡದೆ ದುರಸ್ತಿ ಕಾರ್ಯ ಸಾಧ್ಯವಿಲ್ಲ: ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್

ಅಣೆಕಟ್ಟು ಸುರಕ್ಷತೆ ವರದಿ ನೀಡಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತುಂಗಭದ್ರಾ ಜಲಾಶಯದ ಕ್ರಸ್ಟ್ ಗೇಟ್ ತುಂಡಾದ ಕಾರಣ ರಾಜ್ಯದ ಎಲ್ಲ ಅಣೆಕಟ್ಟುಗಳ ಸುರಕ್ಷತೆಗೆ ಸಮಿತಿ ರಚಿಸಲಾಗಿದ್ದು, ಈ ಸಮಿತಿ ಅಣೆಕಟ್ಟುಗಳಿಗೆ ಭೇಟಿ ನೀಡಿ ವರದಿ ನೀಡುವಂತೆ ಸೂಚಿಸಲಾಗಿದೆ' ಎಂದು ಜಲಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, 'ತುಂಗಭದ್ರಾ ಜಲಾಶಯದ ಗೇಟ್ ದುರಸ್ತಿ ಕಾರ್ಯ ಆರಂಭವಾಗಿದೆ. ನೀರಿನ ಪ್ರಮಾಣ ಕಡಿಮೆ ಮಾಡದೆ ದುರಸ್ತಿ ಕಾರ್ಯ ಸಾಧ್ಯವಿಲ್ಲ' ಎಂದರು.

'ತುಂಗಭದ್ರಾ ಜಲಾಶಯದ 19ನೇ ಗೇಟ್ ತುಂಡಾದ ಘಟನೆಗೆ ಅಧಿಕಾರಿಗಳನ್ನು ಹೊಣೆ ಮಾಡುವುದಕ್ಕಿಂತ ಅಣೆಕಟ್ಟು ಉಳಿಸಿ, ರೈತರನ್ನು ರಕ್ಷಣೆ ಮಾಡುವುದು ನಮ್ಮ ಆದ್ಯತೆ' ಎಂದರು.

'ಇದು 70 ವರ್ಷಗಳ ಹಳೆಯ ಅಣೆಕಟ್ಟು. ಅದರ ಸರಪಳಿ ತುಂಡಾಗಿದೆ. ರೈತರಿಗಾಗಿ ನೀರು ಉಳಿಸಲೇಬೇಕಿದೆ. ಹೀಗಾಗಿ, ಗೇಟ್ ಹಾಕಲು ಪ್ರಯತ್ನಿಸುತ್ತಿದ್ದೇವೆ. ಅಣೆಕಟ್ಟಿನಲ್ಲಿ ನೀರು ಕಡಿಮೆಯಾಗದ ಹೊರತು ಕೆಲಸ ಮಾಡಲು ಸಾಧ್ಯವಿಲ್ಲ. ಹೆಚ್ಚಿನ ಸಂಖ್ಯೆಯಲ್ಲಿ ಸಿಬ್ಬಂದಿಯನ್ನು ನಿಯೋಜಿಸಿ ತ್ವರಿತ ಗತಿಯಲ್ಲಿ ಗೇಟ್ ಸಿದ್ಧಪಡಿಸಲಾಗುತ್ತಿದೆ' ಎಂದು ತಿಳಿಸಿದರು. 'ಕೆಆರ್‌ಎಸ್‌ನಲ್ಲಿಯೂ ಸಮಸ್ಯೆಯಿದೆ' ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿರುವ ಬಗ್ಗೆ ಕೇಳಿದಾಗ, 'ಕುಮಾರಸ್ವಾಮಿಗೆ ರಾಜಕಾರಣ ಮಾತನಾಡುವುದು ಬಿಟ್ಟು ಬೇರೆ ಏನು ಗೊತ್ತು' ಎಂದರು.

ಯಾರಿಂದಲೂ ಲೋಪ ಆಗಿಲ್ಲ ಎಂದು ಉಪಮುಖ್ಯಮಂತ್ರಿ ಹೇಳಿದ್ದರಲ್ಲಿ ಅರ್ಥವಿಲ್ಲ. ತನಿಖೆಯಾಗಿ ಶಿಕ್ಷೆಯಾದರೆ ಮಾತ್ರ ಇಂತಹ ಲೋಪ ಮರುಕಳಿಸಲಾರದು
ಬಸವರಾಜ ಬೊಮ್ಮಾಯಿ, ಸಂಸದ

ಗೇಟ್ ಅಳವಡಿಕೆಗೆ ಬೇಕು 10 ದಿನ: ಬಿಜೆಪಿ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): 'ತುಂಗಭದ್ರಾ ಅಣೆಕಟ್ಟೆಯ 19ನೇ ಗೇಟ್ ಕೊಚ್ಚಿಹೋಗಲು ರಾಜ್ಯ ಸರ್ಕಾರದ ನಿರ್ಲಕ್ಷ್ಯ ಧೋರಣೆಯೂ ಕಾರಣ. ನಾಲ್ಕೈದು ದಿನಗಳಲ್ಲಿ ಗೇಟ್ ಅಳವಡಿಕೆ ಸಾಧ್ಯವಿಲ್ಲ. ಕನಿಷ್ಠ 10 ದಿನ ಬೇಕು. ರೈತರಿಗೆ ಸುಳ್ಳು ಹೇಳಲಾಗಿದೆ' ಎಂದು ಬಿಜೆಪಿ ಆರೋಪಿಸಿದೆ.

ಮತ್ತೊಂದೆಡೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಗಳವಾರ ಅಣೆಕಟ್ಟೆಗೆ ಭೇಟಿ ನೀಡುವರು. ಇದರ ಹಿನ್ನೆಲೆಯಲ್ಲಿ ಪೂರ್ವಭಾವಿಯಾಗಿ ಕೇಂದ್ರೀಯ ಜಲ ಆಯೋಗದ ಅಧಿಕಾರಿಗಳು ತುಂಗಭದ್ರಾ ಮಂಡಳಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ತ್ವರಿತವಾಗಿ ಗೇಟ್ ಅಳವಡಿಕೆಗೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಚರ್ಚಿಸಿದರು. ಇದೇ ವೇಳೆ ಲಕ್ಷಾಂತರ ಹೆಕ್ಟೇರ್ ಪ್ರದೇಶದಲ್ಲಿ ಬೆಳೆದ ಭತ್ತಕ್ಕೆ ನೀರಿನ ಅಭಾವ ಆಗುವ ಸಾಧ್ಯತೆಯಿದ್ದು, ವಿಶೇಷ ಪ್ಯಾಕೇಜ್ ನೀಡಲು ಒತ್ತಾಯ ಜೋರಾಗಿದೆ.

'ಹೊಸ ಗೇಟ್ ಅಳವಡಿಕೆಗಾಗಿ ಅಣೆಕಟ್ಟೆಯಿಂದ ನೀರು ಖಾಲಿ ಮಾಡುವ ಕಾರ್ಯ ಭರದಿಂದ ಸಾಗಿದೆ. ಒಂದೇ ದಿನದಲ್ಲಿ 10 ಟಿಎಂಸಿ ಅಡಿಗೂ ಅಧಿಕ ನೀರು ನದಿಗೆ ಹರಿದು ಹೋಗಿದೆ. ಒಳಹರಿವು ಸದ್ಯ 25 ಸಾವಿರ ಕ್ಯುಸೆಕ್, ಹೊರಹರಿವು 1 ಲಕ್ಷ ಕ್ಯುಸೆಕ್ ಇದೆ. 5 ದಿನದೊಳಗೆ 55 ರಿಂದ 60 ಟಿಎಂಸಿ ಅಡಿ ನೀರು ಖಾಲಿಯಾಗಲಿದೆ' ಎಂದು ತುಂಗಭದ್ರಾ ಮಂಡಳಿಯ ಅಧಿಕಾರಿಗಳು ತಿಳಿಸಿದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಮತ್ತು ಸಂಸದ ಬಸವರಾಜ ಬೊಮ್ಮಾಯಿ ಅವರು ಸೋಮವಾರ ತುಂಗಭದ್ರಾ ಅಣೆಕಟ್ಟೆ ವೀಕ್ಷಿಸಿ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ವೇಳೆ ಕಾಮಗಾರಿ ವಿಳಂಬವಾಗುವುದನ್ನು ಸ್ಪಷ್ಟಪಡಿಸಿಕೊಂಡಿದ್ದಾರೆ.

ತಜ್ಞರಿಂದ ಪರಿಶೀಲನೆ ನಡೆಯಲಿ: ಬಳಿಕ ಸುದ್ದಿಗೋಷ್ಠಿ ನಡೆಸಿದ ಆರ್.ಅಶೋಕ, 'ಅಧಿಕಾರಿಗಳು ಹಾರಿಕೆಯ ಉತ್ತರ ನೀಡುತ್ತಿದ್ದಾರೆ. ಗೇಟ್‌ಗಳ ನಿರ್ವಹಣೆ ಮಾಡಿದ್ದರೂ ಏಕಾಏಕಿ ಕೊಚ್ಚಿ ಹೋಗಿದೆ ಎಂದು ಹೇಳುತ್ತಾರೆ. ಇದರ ಬಗ್ಗೆ ಉನ್ನತ ಮಟ್ಟದ ತನಿಖೆ ಆಗಬೇಕು. ಇತರ ಗೇಟ್‌ಗಳು ಸುರಕ್ಷಿತವಾಗಿವೆ ಎನ್ನುತ್ತಾರೆ. ಅದನ್ನು ಸಹ ನಂಬಲು ಸಾಧ್ಯವಿಲ್ಲ. ಗೇಟ್‌ಗಳ ಸುಸ್ಥಿತಿಯ ಬಗ್ಗೆ ತಜ್ಞರಿಂದ ಪರಿಶೀಲನೆ ಆಗಬೇಕು' ಎಂದರು.

'ಸೆಪ್ಟೆಂಬರ್, ಅಕ್ಟೋಬರ್‌ನಲ್ಲಿ ಮತ್ತೆ ಮಳೆಯಾಗದಿದ್ದರೆ ಒಂದು ಬೆಳೆಗೂ ನೀರು ಕೊಡಲು ಸಾಧ್ಯವಿಲ್ಲ. ಸರ್ಕಾರ ಹೆಕ್ಟೇರ್‌ಗೆ ₹50 ಸಾವಿರದಂತೆ ಪರಿಹಾರ ನೀಡಬೇಕು' ಎಂದರು.

ಬಸವರಾಜ ಬೊಮ್ಮಾಯಿ ಮಾತನಾಡಿ, 'ಮುಂಗಾರು ಮಳೆಗೆ ಮೊದಲೇ ಅಣೆಕಟ್ಟೆಯ ಗೇಟುಗಳ ನಿರ್ವಹಣೆ ಸರಿಯಾಗಿ ಮಾಡದಿರುವುದು, ಭಾರಿ ಪ್ರಮಾಣದಲ್ಲಿ ನೀರು ಸಂಗ್ರಹವಾದಾಗ ಅದರ ಒತ್ತಡ ತಡೆಯುವ ಸಾಮರ್ಥ್ಯ ಚೈನ್‌ಲಿಂಕ್‌ಗೆ ಇಲ್ಲವಾಗಿರುವುದು, ಅಧಿಕಾರಿಗಳ ನಿರ್ಲಕ್ಷ್ಯ ಮತ್ತು ಸರ್ಕಾರದ ವಿಳಂಬ ಧೋರಣೆ ಗೇಟ್ ದುರಂತಕ್ಕೆ ಕಾರಣ' ಎಂದರು.

'ಗೇಟ್ ಎತ್ತುವಾಗ ಚೈನ್‌ಲಿಂಕ್‌ನ ವೆಲ್ಡಿಂಗ್ ಬಿಟ್ಟುಹೋಗಿದೆ. ಇದರಿಂದ ಒತ್ತಡ ತಡೆಯಲು ಸಾಧ್ಯವಾಗದೆ ಗೇಟ್ ಒಂದು ಕಡೆಗೆ ವಾಲಿದೆ. ಭಾರಿ ಒತ್ತಡದ ನೀರಲ್ಲಿ ಸಿಲುಕಿ ಇಡೀ ಗೇಟ್ ಕೊಚ್ಚಿ ಹೋಗಿದೆ. ಮಳೆಗಾಲಕ್ಕೆ ಮೊದಲು ಸರಿಯಾಗಿ ನಿರ್ವಹಣೆ ಮಾಡಿಲ್ಲ ಎಂಬುದನ್ನು ಇದು ಸೂಚಿಸುತ್ತದೆ. ತಜ್ಞರು ಕೊಟ್ಟ ವರದಿಯಲ್ಲಿ ಎಲ್ಲವೂ ಸರಿಯಾಗಿದೆ ಎಂದು ಹೇಳಿದ್ದರೆ, ತಜ್ಞರ ವರದಿಯನ್ನೇ ಸಂಶಯದಿಂದ ನೋಡಬೇಕಾಗುತ್ತದೆ' ಎಂದು ಬೊಮ್ಮಾಯಿ ಹೇಳಿದರು.

ವಿಶೇಷ ತಜ್ಞರ ತಂಡ ಅಗತ್ಯ: 'ರಾಜ್ಯದಲ್ಲಿ 50 ವರ್ಷಕ್ಕಿಂತ ಹಳೆಯದಾದ ಹಲವು ಅಣೆಕಟ್ಟೆಗಳಿವೆ. ಅವುಗಳ ಸುರಕ್ಷತೆಯ ಬಗ್ಗೆ ಇದೀಗ ಗಂಭೀರ ಚಿಂತನೆ ಆಗಲೇಬೇಕು. ಈ ಎಲ್ಲ ಅಣೆಕಟ್ಟೆಗಳ ಸುರಕ್ಷತೆ, ಗೇಟ್‌ಗಳ ಸುಸ್ಥಿತಿಯ ಬಗ್ಗೆ ನಿರಂತರ ನಿಗಾ ವಹಿಸಲು ವಿಶೇಷ ತಜ್ಞರ ತಂಡ ರಚಿಸಬೇಕು' ಎಂದು ಬೊಮ್ಮಾಯಿ ಒತ್ತಾಯಿಸಿದರು.

'8 ತಿಂಗಳುಗಳಿಂದ ಮುಖ್ಯ ಎಂಜಿನಿಯರ್ ನೇಮಕವಾಗಿರದ ಬಗ್ಗೆ ಪ್ರಸ್ತಾಪಿಸಿ, ಸರ್ಕಾರದ ವಿಳಂಬ ನೀತಿಗೆ ಯಾರು ಕಾರಣ? ಈಗ ಅದು ರೈತರಿಗೆ ಉತ್ತರ ನೀಡಲೇಬೇಕು. ರೈತರಿಗೆ ಭಾರಿ ನಷ್ಟವಾಗಿದೆ. ಅದಕ್ಕೆ ಸೂಕ್ತ ಪರಿಹಾರವನ್ನೂ ನೀಡಬೇಕು' ಎಂದು ಅವರು ಆಗ್ರಹಿಸಿದರು.



ಕೊಪ್ಪಳ ಜಿಲ್ಲೆಯ ತುಂಗಭದ್ರಾ ಜಲಾಶಯದ 19ನೇ ಗೇಟ್ ಕೊಚ್ಚಿ ಹೋಗಿರುವ ಜಾಗದಲ್ಲಿ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿದೆ – ಪ್ರಜಾವಾಣಿ ಚಿತ್ರ /ಭರತ್ ಕಂದಕೂರ

ಸಿದ್ಧವಾಗುತ್ತಿದೆ ತಾತ್ಕಾಲಿಕ ಗೇಟ್

ಒಂದನೇ ಪುಟದಿಂದ...

ಶಾಶ್ವತ ಗೇಟ್ ಅಳವಡಿಕೆಗೆ ಸಾಕಷ್ಟು ಸಮಯ ಬೇಕಾಗುತ್ತದೆ. ಜಲಾಶಯದ ನೀರಿನ ಮಟ್ಟ 50 ಟಿಎಂಸಿ ಅಡಿಗೆ ಕುಸಿದಂತೆ ಗೇಟ್ ಸಹ ಸಿದ್ಧವಾಗಲಿದೆ.

ತುಂಗಭದ್ರಾ ಜಲಾಶಯ ನಿರ್ಮಾಣವಾಗಿ ಏಳು ದಶಕಗಳು ಉರುಳಿದ್ದು, ಮೊದಲ ಬಾರಿಗೆ ಗೇಟ್ ಬದಲಾವಣೆ ಮಾಡಲಾಗುತ್ತಿದೆ. ಪ್ರತಿ ನಿತ್ಯ ಭಾರಿ ಪ್ರಮಾಣದಲ್ಲಿ ಹರಿದು ಹೋಗುತ್ತಿರುವ ನೀರು ನಿಲ್ಲಿಸಲು ಬೃಹತ್ ಗಾತ್ರದ ಐದು ಕಬ್ಬಿಣದ ಹಲಗೆ ತಯಾರಿಸಲಾಗುತ್ತಿದೆ. ಒಂದೊಂದು ಹಲಗೆ ತಯಾರಾದ ಬಳಿಕ ಒಂದೊಂದಾಗಿ 19ನೇ ಗೇಟ್‌ನಲ್ಲಿ ಇಳಿಸಿ ನೀರು ನಿಲುಗಡೆ ಮಾಡುವ ಪ್ರಯತ್ನ ನಡೆಯುತ್ತಿದೆ. ಕೊಚ್ಚಿ ಹೋಗಿರುವ ಗೇಟ್ 42 ಟನ್ ತೂಕ ಇತ್ತು. ಹೊಸ ಗೇಟ್ ಇದಕ್ಕಿಂತಲೂ ಸ್ವಲ್ಪ ಹೆಚ್ಚು ತೂಕ ಹೊಂದಿರಲಿದೆ ಎಂದು ಹೊಸಳ್ಳಿ ಕೇಂದ್ರದ ತಯಾರಿಕಾ ಸಿಬ್ಬಂದಿ ತಿಳಿಸಿದರು.

ಹಿಂದೂಸ್ತಾನ್ ಕಂಪನಿ ಈ ಮೊದಲು ಇರಕಲ್ ಬ್ಯಾರೇಜ್, ಕೋಲ್ಕತ್ತ, ಚೆನ್ನೈ ಸೇರಿದಂತೆ ಹಲವು ಕಡೆ ಗೇಟ್‌ಗಳನ್ನು ನಿರ್ಮಿಸಿಕೊಟ್ಟಿದೆ. ತ್ವರಿತವಾಗಿ ಗೇಟ್ ತಯಾರಿಸಬೇಕಾಗಿರುವ ಕಾರಣ ಅವುಗಳಿಗೆ ಪೇಂಟ್ ಹಚ್ಚದೇ ನೇರವಾಗಿ ಜಲಾಶಯಕ್ಕೆ ಇಳಿಸಲಾಗುತ್ತದೆ. ಗೇಟ್‌ಗೆ ಒಂದು ಬಾರಿ ಪೇಂಟ್ ಹಚ್ಚಿದರೆ ಅದು ಒಣಗಲು ಕನಿಷ್ಠ ಮೂರು ದಿನಗಳು ಬೇಕು. ಪ್ರತಿ ಗೇಟ್‌ಗೆ ಒಟ್ಟು ಮೂರರಿಂದ ನಾಲ್ಕು ಬಾರಿ ಪೇಂಟ್ ಹಚ್ಚಬೇಕಾಗಿರುವ ಕಾರಣ ಹೆಚ್ಚು ಸಮಯ ವ್ಯರ್ಥವಾಗುತ್ತದೆ. ಆದ್ದರಿಂದ ಸದ್ಯಕ್ಕೆ ಗೇಟ್ ಅಳವಡಿಸಿ ಮುಂದೆ ನೀರು ಕಡಿಮೆಯಾದಾಗ ಪೇಂಟ್ ಹಚ್ಚಲು ನಿರ್ಧರಿಸಲಾಗಿದೆ. ಗೇಟ್ ನಿರ್ಮಾಣ ವೇಗವಾಗಿ ನಡೆಯಲು ಟಿ.ಬಿ. ಡ್ಯಾಂ ಮಂಡಳಿಯು ಜೂನಿಯರ್ ಎಂಜಿನಿಯರ್ ಸುಧಾಕರ್ ರೆಡ್ಡಿ ಅವರನ್ನು ಹೊಸಳ್ಳಿ ಶೆಡ್‌ನಲ್ಲಿ ನಿಯೋಜಿಸಿದ್ದು ಅವರು ಅಲ್ಲಿಯೇ ಮೊಕ್ಕಾಂ ಹೂಡಿದ್ದಾರೆ.

ಗೇಟ್ ಅಳವಡಿಕೆಗೆ ಎರಡು ಸೂತ್ರ

ಕೊಪ್ಪಳ: 'ಜಲಾಶಯದಲ್ಲಿನ ನೀರು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಲು ಪ್ರಯತ್ನ ನಡೆಯುತ್ತಿದ್ದು, ನೀರಿನೊಳಗೆ ಪ್ಲೇಟ್ ಇಳಿಸಲು ನಿರ್ಧರಿಸಲಾಗಿದೆ. ನೀರಿನೊಳಗೆ ತೆರಳಿ ಕೆಲಸ ಮಾಡುವ ಅನುಭವಿಗಳ ತಂಡ ಬರಲಿದೆ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ತಿಳಿಸಿದರು.

'ಎಂಜಿನಿಯರ್‌ಗಳು ಮತ್ತು ಗೇಟ್ ಅಳವಡಿಕೆ ತಜ್ಞರ ಒಂದು ತಂಡ ನೀರು ಕಡಿಮೆಯಾದ ಬಳಿಕ ಗೇಟ್ ಅಳವಡಿಸುವ ಸಲಹೆ ನೀಡಿದ್ದು, ಜೆಎಸ್‌ಡಬ್ಲ್ಯು ಕಂಪನಿಯ ತಂಡ ನೀರು ಖಾಲಿಯಾಗದಂತೆ ನೀರಿನೊಳಗೆ ಕೆಲಸ ಮಾಡುವ ಬಗ್ಗೆ ಸಲಹೆ ನೀಡಿದೆ. ಈ ಬಗ್ಗೆ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಅವರೊಂದಿಗೆ ಚರ್ಚಿಸಿದ್ದೇನೆ. ನಮ್ಮ ಮುಂದೆ ಈಗ ಎರಡು ಸೂತ್ರಗಳು ಇವೆ' ಎಂದರು. 'ಗೇಟ್ ತಜ್ಞ ಹೈದರಾಬಾದ್‌ನ ಕನ್ನಯ್ಯನಾಯ್ಡು ಅವರು ವಿನ್ಯಾಸ ಕಳುಹಿಸಿದ್ದು ಅದರಂತೆ ಸ್ಥಳೀಯವಾಗಿ ನಾರಾಯಣ ಎಂಜಿನಿಯರಿಂಗ್ ಹಾಗೂ ಹಿಂದೂಸ್ತಾನ್ ಸಂಸ್ಥೆಗಳು ಪ್ಲೇಟ್ ಸಿದ್ಧಪಡಿಸುತ್ತಿವೆ' ಎಂದು ಹೇಳಿದರು.

ಭತ್ತಕ್ಕೆ ಪರಿಹಾರ ಪ್ಯಾಕೇಜ್: ರೈತಸಂಘ ಆಗ್ರಹ

ತುಂಗಭದ್ರಾ ಅಣೆಕಟ್ಟೆಯ 19ನೇ ಕ್ರಸ್ಟ್‌ಗೇಟ್ ನೀರಲ್ಲಿ ಕೊಚ್ಚಿ ಹೋಗಿರುವುದರಿಂದ ಈ ಬಾರಿ ಒಂದು ಬೆಳೆಗೆ ಸಹ ನೀರು ಸಿಗುವುದು ಸಂಶಯವಿದೆ. ಹೀಗಾಗಿ ಸರ್ಕಾರ ತಕ್ಷಣ ಭತ್ತ ಬೆಳೆಗಾರರಿಗೆ ವಿಶೇಷ ಪ್ಯಾಕೇಜ್ ಘೋಷಿಸಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆಯ ಅಧ್ಯಕ್ಷ ವಾಸುದೇವ ಮೇಟಿ ಒತ್ತಾಯಿಸಿದ್ದಾರೆ.



ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ನಡೆದ ಪ್ರತಿಭಟನೆಯಲ್ಲಿ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಸದಸ್ಯರ ಭಾಗವಹಿಸಿದ್ದರು —ಪ್ರಜಾವಾಣಿ ಚಿತ್ರ /ಕಿಶೋರ್ ಕುಮಾರ್ ಬೋಳಾರ

ವಿವಿಧ ಬೇಡಿಕೆಗಳ ಈಡೇರಿಕೆ ಶಿಕ್ಷಕರ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೃಂದ ಮತ್ತು ನೇಮಕಾತಿ (ಸಿ ಆ್ಯಂಡ್ ಆರ್) 2017ರ ನಿಯಮದ ತಿದ್ದುಪಡಿ, ಶಿಕ್ಷಕರ ಬಡ್ತಿ ಹಾಗೂ ವರ್ಗಾವಣೆ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

'ಒಂದರಿಂದ ಐದನೇ ತರಗತಿವರೆಗೆ ಬೋಧಿಸುವ ಶಿಕ್ಷಕರು ಪದವೀಧರರಾಗಿದ್ದಲ್ಲಿ ಅವರನ್ನು ಆರು ಮತ್ತು ಎಂಟನೇ ತರಗತಿವರೆಗೆ ಪಾಠ ಮಾಡಲು ಜಿಪಿಟಿ ಶಿಕ್ಷಕರ ಹುದ್ದೆಗಳಿಗೆ ಬಡ್ತಿ ನೀಡಬೇಕು. ಇದಕ್ಕೆ ಅಡ್ಡಿಯಾಗಿರುವ ಸಿ ಆ್ಯಂಡ್ ಆರ್ ನಿಯಮ–2017ಕ್ಕೆ ತಿದ್ದುಪಡಿ ಮಾಡಬೇಕು. ಸೇವಾ ಜ್ಯೇಷ್ಠತೆ, ಮುಂಬಡ್ತಿ, ವರ್ಗಾವಣೆ ಪ್ರಕ್ರಿಯೆಯಲ್ಲಿ ಆಗಿರುವ ಅನ್ಯಾಯ ಸರಿಪಡಿಸಬೇಕು' ಎಂದು ಸಂಘದ ಅಧ್ಯಕ್ಷ ಕೆ.ನಾಗೇಶ್ ಆಗ್ರಹಿಸಿದರು.

ಭರವಸೆ ನೀಡಿದ ಮಧು

ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ, ಶಿಕ್ಷಕರ ಅಹವಾಲು ಆಲಿಸಿದರು. 'ಸಿದ್ದರಾಮಯ್ಯ ಅವರೊಂದಿಗೆ ಚರ್ಚಿಸಿ, ಬೇಡಿಕೆಗಳನ್ನು ಈಡೇರಿಸುವ ಭರವಸೆ ನೀಡಿದರು' ಎಂದು ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಕೆ. ನಾಗೇಶ ತಿಳಿಸಿದರು.

ಸುದ್ದಿ 2 ನಿಮಿಷ

ಡಿಕೆಶಿ ವಿರುದ್ಧದ ಸಿಬಿಐ ತನಿಖೆ ಪ್ರಕರಣ: ಕಾಯ್ದಿರಿಸಿದ ತೀರ್ಪು

ಬೆಂಗಳೂರು: ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ತನಿಖೆ ನಡೆಸಲು ಈ ಹಿಂದಿನ ಬಿಜೆಪಿ ನೇತೃತ್ವದ ಸರ್ಕಾರವು ಸಿಬಿಐಗೆ ಅನುಮತಿ ನೀಡಿದ್ದ ಆದೇಶವನ್ನು, ಕಾಂಗ್ರೆಸ್ ನೇತೃತ್ವದ ಸರ್ಕಾರ ಹಿಂಪಡೆದಿರುವುದನ್ನು ಪ್ರಶ್ನಿಸಿ ದಾಖಲಾಗಿರುವ ಎರಡು ಪ್ರತ್ಯೇಕ ಅರ್ಜಿಗಳ ವಿಚಾರಣೆ ಮುಕ್ತಾಯಗೊಳಿಸಿದ ಹೈಕೋರ್ಟ್, ತೀರ್ಪು ಕಾಯ್ದಿರಿಸಿದೆ.

ಈ ಕುರಿತಂತೆ ಸಿಬಿಐ ಮತ್ತು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಸಲ್ಲಿಸಿರುವ ಅರ್ಜಿಗಳನ್ನು ನ್ಯಾಯಮೂರ್ತಿ ಕೆ.ಸೋಮಶೇಖರ್ ಮತ್ತು ಉಮೇಶ್ ಎಂ.ಅಡಿಗ ಅವರಿದ್ದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ಸಿಬಿಐ ಪರ ವಾದ ಮಂಡಿಸಿದ ಪಿ.ಪ್ರಸನ್ನಕುಮಾರ್, 'ಈಗಿನ ರಾಜ್ಯ ಸರ್ಕಾರ ಸಿಬಿಐಗೆ ನೀಡಿರುವ ಅನುಮತಿ ಹಿಂಪಡೆದರೂ ಸಿಬಿಐ ದಾಖಲಿಸಿರುವ ಎಫ್‌ಐಆರ್ ತನ್ನ ಅಸ್ತಿತ್ವ ಉಳಿಸಿಕೊಳ್ಳಲಿದೆ' ಎಂದರು.

ರಾಜ್ಯ ಸರ್ಕಾರದ ಪರ ವಾದ ಮಂಡಿಸಿದ ಸುಪ್ರೀಂ ಕೋರ್ಟ್‌ನ ಹಿರಿಯ ವಕೀಲ ಕಪಿಲ್ ಸಿಬಲ್, 'ಸಿಬಿಐ ತನಿಖೆಗೆ ಒಪ್ಪಿಗೆ ನೀಡುವ ವಿಚಾರದಲ್ಲಿ ನ್ಯಾಯಾಲಯಕ್ಕೆ ಸರ್ಕಾರವು ವಂಚಿಸಿದೆ. ಇಲ್ಲಿ ಅನುಮತಿ ಪಡೆದಿರುವುದು ಪ್ರಶ್ನೆಯಲ್ಲ. ಒಪ್ಪಿಗೆಯನ್ನು ಕಾನೂನು ಬಾಹಿರವಾಗಿ ನೀಡಲಾಗಿದೆ. ನಾವು ಒಕ್ಕೂಟ ವ್ಯವಸ್ಥೆಯಲ್ಲಿದ್ದು, ಸರ್ಕಾರವು ಕಾನೂನನ್ನು ತನಗಿಷ್ಟ ಬಂದ ಹಾಗೆ ಬಳಕೆ ಮಾಡಲಾಗದು' ಎಂದರು. ಡಿ.ಕೆ.ಶಿವಕುಮಾರ್ ಪರ ಸುಪ್ರೀಂ ಕೋರ್ಟ್‌ನ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ ವಾದ ಮಂಡಿಸಿದರು.

ಶಾಸಕ ಬಸನಗೌಡ ಪಾಟೀಲ ಯತ್ನಾಳ ಪರ ಹೈಕೋರ್ಟ್ ವಕೀಲ ವೆಂಕಟೇಶ್ ಪಿ.ದಳವಾಯಿ, 'ಭ್ರಷ್ಟಾಚಾರ ನಿಗ್ರಹ ಕಾಯ್ದೆ ಅಡಿ ಅಪರಾಧದ ತನಿಖೆ ನಡೆಸಲು ಸಿಬಿಐ ಸಂಪೂರ್ಣ ಸ್ವತಂತ್ರವಾಗಿರುತ್ತದೆ. ಇಲ್ಲಿ ಅರ್ಜಿದಾರರಿಗೆ ಸಂವಿಧಾನದ 131ನೇ ವಿಧಿ ಅನ್ವಯ ಆಗುವುದಿಲ್ಲ. ಒಮ್ಮೆ ಸಿಬಿಐ ಪ್ರಕರಣ ದಾಖಲಿಸಿದ ಮೇಲೆ ಅದು ತಾರ್ಕಿಕ ಅಂತ್ಯ ಕಾಣಬೇಕು. ಇದರಲ್ಲಿ ಕೇಂದ್ರ ಅಥವಾ ರಾಜ್ಯ ಸರ್ಕಾರದ ಯಾವುದೇ ಪಾತ್ರ ಇರುವುದಿಲ್ಲ' ಎಂದರು.



ಎನ್‌ಡಿಎ ಟಿಕೆಟ್ ಸಿಗದಿದ್ದರೆ ಪಕ್ಷೇತರನಾಗಿ ಸ್ಪರ್ಧೆ: ಯೋಗೀಶ್ವರ್

ಬೆಂಗಳೂರು: 'ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಎನ್‌ಡಿಎ ಅಭ್ಯರ್ಥಿಯಾಗಿ ಕಣಕ್ಕೆ ಇಳಿಯಬೇಕು ಎನ್ನುವ ಆಸೆ ಇದೆ. ಒಂದು ವೇಳೆ ಅದು ಸಾಧ್ಯವಾಗದೇ ಇದ್ದರೆ ಪಕ್ಷೇತರನಾಗಿ ಸ್ಪರ್ಧಿಸಲು ನಿರ್ಧರಿಸಿದ್ದೇನೆ' ಎಂದು ವಿಧಾನಪರಿಷತ್ ಸದಸ್ಯ ಸಿ.ಪಿ.ಯೋಗೀಶ್ವರ್ ಹೇಳಿದ್ದಾರೆ.

ದೆಹಲಿಗೆ ತೆರಳುವ ಮುನ್ನ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಹಲವು ಬಾರಿ ಪಕ್ಷೇತರನಾಗಿ ಸ್ಪರ್ಧಿಸಿದಾಗ ಕ್ಷೇತ್ರದ ಜನ ನನ್ನನ್ನು ಗೆಲ್ಲಿಸಿದ್ದಾರೆ. ಮೈತ್ರಿ ಅಭ್ಯರ್ಥಿ ಆಗದಿದ್ದರೂ ಸ್ವತಂತ್ರವಾಗಿ ಸ್ಪರ್ಧಿಸುತ್ತೇನೆಯೇ ಹೊರತು, ಕಾಂಗ್ರೆಸ್‌ಗೆ ಸೇರುವುದಿಲ್ಲ. ಯಾವುದೇ ಕಾಂಗ್ರೆಸ್ ನಾಯಕರು ಸಂಪರ್ಕಿಸಿಲ್ಲ' ಎಂದು ಹೇಳಿದರು.

'ಎನ್‌ಡಿಎ ಅಭ್ಯರ್ಥಿಯಾಗಿ ನಾನು ಕಣಕ್ಕಿಳಿಯುವುದನ್ನು ಎಚ್.ಡಿ.ಕುಮಾರಸ್ವಾಮಿ ಅವರು ಒಪ್ಪಬಹುದು ಎಂದು ಭಾವಿಸಿದ್ದೇನೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಸೋತು ಸುಣ್ಣವಾಗಿದ್ದಾಗ, ಕುಮಾರಸ್ವಾಮಿ ಅವರಿಗೆ ಬಿಜೆಪಿ ಜತೆ ಮೈತ್ರಿ ಮಾಡಿಕೊಳ್ಳಲು ಸಲಹೆ ನೀಡಿದ್ದೇ ನಾನು' ಎಂದು ಹೇಳಿದರು.

ಶಾಲೆಗಳಿಗೆ ರಜೆ ಘೋಷಿಸಿ ಪ್ರತಿಭಟನೆಗೆ ಬೆಂಬಲ

- ಮೈಸೂರು ಭಾಗದ ಮೈಸೂರು, ಕೊಡಗು, ಹಾಸನ, ಚಾಮರಾಜನಗರ ಮತ್ತು ಮಂಡ್ಯ ಜಿಲ್ಲೆಯ ಸರ್ಕಾರಿ ಶಿಕ್ಷಕರು ಸ್ವಯಂಪ್ರೇರಿತರಾಗಿ ಸೋಮವಾರ ರಜೆ ಘೋಷಿಸಿ ಬೆಂಗಳೂರಿನ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರಿಂದ, ನೂರಾರು ಶಾಲೆಗಳನ್ನು ಮುಚ್ಚಲಾಗಿತ್ತು. ಮೈಸೂರು ಜಿಲ್ಲೆಯಲ್ಲಿ 2.5 ಸಾವಿರ ಶಿಕ್ಷಕರು ಗೈರಾಗಿದ್ದರು.
- ದಾವಣಗೆರೆ, ಚಿತ್ರದುರ್ಗ ಹಾಗೂ ಶಿವಮೊಗ್ಗ ಜಿಲ್ಲೆಯಿಂದ ಸಾವಿರಕ್ಕೂ ಅಧಿಕ ಶಿಕ್ಷಕರು ಮುಷ್ಕರಕ್ಕೆ ಬೆಂಗಳೂರಿಗೆ ತೆರಳಿದ್ದರು. ಪ್ರತಿ ಶಾಲೆಯಿಂದಲೂ ಶಿಕ್ಷಕರು ಮುಷ್ಕರಕ್ಕೆ ತೆರಳಿದ್ದರಿಂದ 1ರಿಂದ 5ನೇ ತರಗತಿಯವರೆಗಿನ ವಿದ್ಯಾರ್ಥಿಗಳಿಗೆ ಎಂದಿನಂತೆ ಪಾಠ ನಡೆಯಲಿಲ್ಲ.
- ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಾವಿರಕ್ಕೂ ಹೆಚ್ಚು ಸರ್ಕಾರಿ ಶಾಲೆಗಳು ತೆರೆಯಲೇ ಇಲ್ಲ.
- ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಜೆ ಹಾಕಿ ಪ್ರತಿಭಟನೆಯಲ್ಲಿ ಭಾಗವಹಿಸಿದ ಶಿಕ್ಷಕರ ಬದಲು ಬೇರೆ ಶಿಕ್ಷಕರು ತರಗತಿ ನಡೆಸುವ ಮೂಲಕ ಪಾಠ– ಪ್ರವಚನಕ್ಕೆ ಸಮಸ್ಯೆ ಆಗದಂತೆ ನೋಡಿಕೊಂಡಿದ್ದಾರೆ.
- ಹುಬ್ಬಳ್ಳಿ ವಲಯದ ಸರ್ಕಾರಿ ಪ್ರಾಥಮಿಕ ಶಾಲೆಗಳ ಬಹುತೇಕ ಶಿಕ್ಷಕರು ಸೋಮವಾರ ತರಗತಿಯಿಂದ ದೂರ ಉಳಿದರು. ವಲಯದ ಬಹುತೇಕ ಶಿಕ್ಷಕರು ಬೆಂಗಳೂರಿಗೆ ತೆರಳಿ, ಸಂಘ ನಡೆಸುತ್ತಿರುವ ಪ್ರತಿಭಟನೆಯಲ್ಲಿ ಪಾಲ್ಗೊಂಡರು. ಪರಿಣಾಮವಾಗಿ ಶಾಲೆಗಳಲ್ಲಿ ಪಾಠಗಳು ನಡೆಯಲಿಲ್ಲ. ವಿದ್ಯಾರ್ಥಿಗಳಿಗೆ ತೊಂದರೆಯಾಯಿತು.

ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ₹89.63 ಕೋಟಿ ಅಕ್ರಮ ವರ್ಗಾವಣೆ

ಆರೋಪ ಪಟ್ಟಿ: ನಾಗೇಂದ್ರ, ದದ್ದಲ್ ಹೆಸರಿಲ್ಲ

• ರಾಜೇಶ್ ರೈ ಚಟ್ಲ

ಬೆಂಗಳೂರು: ವಾಲ್ಮೀಕಿ ಅಭಿವೃದ್ಧಿ ನಿಗಮದ ಬ್ಯಾಂಕ್ ಖಾತೆಯಿಂದ ₹89.63 ಕೋಟಿ ಅಕ್ರಮ ವರ್ಗಾವಣೆ ಹಗರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡ (ಎಸ್ಐಟಿ), ನಗರದ 3ನೇ ಎಸಿಎಂಎಂ ನ್ಯಾಯಾಲಯಕ್ಕೆ ಸಲ್ಲಿಸಿರುವ ಪ್ರಾಥಮಿಕ ಆರೋಪ ಪಟ್ಟಿಯಲ್ಲಿ ಮಾಜಿ ಸಚಿವ ಬಿ. ನಾಗೇಂದ್ರ ಮತ್ತು ನಿಗಮದ ಅಧ್ಯಕ್ಷ, ಕಾಂಗ್ರೆಸ್ ಶಾಸಕ ಬಸನಗೌಡ ದದ್ದಲ್ ಅವರ ಹೆಸರು ಇಲ್ಲ.

ತನಿಖಾಧಿಕಾರಿ ಡಿವೈಎಸ್‌ಪಿ ಬಿ.ಎಸ್. ಶ್ರೀನಿವಾಸ್ ರಾಜ್ ಸಲ್ಲಿಸಿರುವ ದೋಷಾರೋಪ ಪಟ್ಟಿಯು 'ಪ್ರಜಾವಾಣಿ'ಗೆ ಲಭ್ಯವಾಗಿದೆ. 12 ಆರೋಪಿಗಳ ವಿರುದ್ಧ ಆರೋಪ ಮಾಡಲಾಗಿದ್ದು, ಎಲ್ಲರೂ ನ್ಯಾಯಾಂಗ ಬಂಧನದಲ್ಲಿದ್ದಾರೆ.

ನಿಗಮದ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಜೆ.ಜಿ. ಪದ್ಮನಾಭ ಅವರನ್ನು ಐದನೇ, ನಿಗಮದ ಲೆಕ್ಕಾಧಿಕಾರಿ ಪರಶುರಾಮ್ ದುರುಗಣ್ಣವರ್‌ನ ಆರನೇ ಆರೋಪಿಯಾಗಿಸಲಾಗಿದೆ. 12ನೇ ಆರೋಪಿ ಎಂದು ಹೆಸರಿಸಲಾಗಿರುವ ನೆಕ್ಕಂಟಿ ನಾಗರಾಜ್, ಬಿ. ನಾಗೇಂದ್ರ ಅವರ ಆಪ್ತ. ಆದರೆ, ಆ ಬಗ್ಗೆ ಪಟ್ಟಿಯಲ್ಲಿ ಉಲ್ಲೇಖ ಇಲ್ಲ.

ಆರೋಪಗಳಿಗೆ ಸಂಬಂಧಿಸಿದಂತೆ ನಿಗಮದ ಪ್ರಧಾನ ವ್ಯವಸ್ಥಾಪಕ ಎ. ರಾಜಶೇಖರ್, ಅಧೀಕ್ಷಕ ಎಚ್.ಕೆ. ವಿಶ್ವನಾಥ್ ಸೇರಿ ಒಟ್ಟು 109 ಸಾಕ್ಷಿಗಳಿದ್ದಾರೆ ಎಂದೂ ಪಟ್ಟಿ ಹೇಳಿದೆ.

12 ಆರೋಪಿಗಳು ಶಾಮೀಲಾಗಿ ಪಿತೂರಿ ನಡೆಸಿ, ವಂಚನೆಯ ಉದ್ದೇಶದಿಂದಲೇ ನಕಲಿ ದಾಖಲೆಗಳನ್ನು ಸೃಷ್ಟಿಸಿ, ಬ್ಯಾಂಕ್ ಖಾತೆಗಳನ್ನು ತೆರೆದಿದ್ದಾರೆ. ನಂತರ ಆ ಖಾತೆಗಳಿಗೆ ನಿಗಮದ ಖಾತೆಯಿಂದ ₹ 89.63ಕೋಟಿ ವರ್ಗಾಯಿಸಿದ್ದಾರೆ. ನಿಗಮ ಮತ್ತು ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟು ಮಾಡುವ ಮೂಲಕ ನಂಬಿಕೆ ದ್ರೋಹ ಮತ್ತು ಮೋಸ ಎಸಗಿರುವುದು ದೃಢಪಟ್ಟಿದೆ ಎಂದು ಆರೋಪಪಟ್ಟಿಯಲ್ಲಿ ವಿವರಿಸಲಾಗಿದೆ.

ಸಂಚುಕೋರ ವರ್ಮಾ: 'ಮೊದಲ ಆರೋಪಿ ಸತ್ಯನಾರಾಯಣ ವರ್ಮಾ, 2023ರ ಅ. 12, 15 ಮತ್ತು 16ರಿಂದ 18ರವರೆಗೆ ಬೆಂಗಳೂರಿನ ಮಾನ್ಯತಾ ಟೆಕ್ ಪಾರ್ಕ್ ಸಮೀಪದ ಹೋಟೆಲ್ ರಾಯಲ್ ಏಸ್ ಬ್ಯೂಟೆಕ್‌ನಲ್ಲಿ ಉಳಿದುಕೊಂಡಿದ್ದ. ಬಳಿಕ ಮೊದಲೇ ಪರಿಚಯವಿದ್ದ ಆಂಧ್ರ ಪ್ರದೇಶದ ಗುಂಟೂರು ನಿವಾಸಿ ಶ್ರೀನಿವಾಸ ರಾವ್ ಕಾಕಿ ವಾಸವಿರುವ ಬೆಂಗಳೂರಿನ ಮನೆಯಲ್ಲಿ ಉಳಿದುಕೊಳ್ಳುತ್ತಿದ್ದ, ತನ್ನ ಪರಿಚಿತ ನಾಗೇಶ್ವರ ರಾವ್ ಮೂಲಕ, ಆತನ ಬಾವ ನೆಕ್ಕಂಟಿ ನಾಗರಾಜನನ್ನು ಸಂಪರ್ಕಿಸಿ ವಾಲ್ಮೀಕಿ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಜೆ.ಜಿ. ಪದ್ಮನಾಭನನ್ನು ಸಂಪರ್ಕಿಸಿದ್ದ, ನಂತರ ವಿವಿಧ ಬ್ಯಾಂಕ್ ಖಾತೆಗಳಲ್ಲಿದ್ದ ನಿಗಮದ ಹಣವನ್ನು ಲಪಟಾಯಿಸಲು ಒಳಸಂಚು ರೂಪಿಸಿದ್ದ' ಎಂದು ಆರೋಪಿಸಲಾಗಿದೆ.

'ತನಗೆ ಪರಿಚಯವಿದ್ದ ಚಂದ್ರಮೋಹನ್ ಮೂಲಕ ಎಂ.ಜಿ. ರಸ್ತೆಯ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ವ್ಯವಸ್ಥಾಪಕರನ್ನು ಪರಿಚಯಿಸಿಕೊಂಡಿದ್ದ ವರ್ಮಾ, ಪದ್ಮನಾಭ್ ಮೂಲಕ ವಸಂತನಗರದ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಯಲ್ಲಿದ್ದ ನಿಗಮದ ₹89.63ಕೋಟಿಯ ಅನ್ನು ಎಂ.ಜಿ. ರಸ್ತೆಯ ಶಾಖೆಗೆ ವರ್ಗಾವಣೆ ಮಾಡಿಸಿಕೊಂಡಿದ್ದ, ಆ ಬಳಿಕ, ನಕಲಿ ವ್ಯಾಪಾರ ಸಂಸ್ಥೆಗಳ ದಾಖಲಾತಿಗಳನ್ನು ನೀಡಿ ಖಾತೆಗಳನ್ನು ತೆರೆದು ಆ ಖಾತೆಗಳಿಗೆ ಈ ಹಣ ವರ್ಗಾಯಿಸಲು ಜಸ್ಮಾದೇವಿ ಭವನದಲ್ಲಿರುವ ನಿಗಮದ ಕಚೇರಿ ಮತ್ತು ಇತರ ಸ್ಥಳಗಳಲ್ಲಿ ಪರಸ್ಪರ ದೂರವಾಣಿ ಮತ್ತು ಸಾಮಾಜಿಕ ಜಾಲತಾಣಗಳ ಮೂಲಕ ಒಳ ಸಂಚು ರೂಪಿಸಿದ್ದ' ಎಂದೂ ಆರೋಪ ಹೊರಿಸಲಾಗಿದೆ.

₹3.92 ಕೋಟಿ ಪಡೆದ ಎಂ.ಡಿ: 'ನೆಕ್ಕಂಟಿ ನಾಗರಾಜ್ ಜೊತೆ ಸಂಪರ್ಕ ಇಟ್ಟುಕೊಂಡಿದ್ದ ಪದ್ಮನಾಭ, ನಾಗೇಶ್ವರ ರಾವ್ ಮೂಲಕ, ಸತ್ಯನಾರಾಯಣನ ಸೂಚನೆಯಂತೆ ವಿವಿಧ ಬ್ಯಾಂಕ್‌ಗಳಲ್ಲಿದ್ದ ನಿಗಮದ ಹಣವನ್ನು ಯೂನಿಯನ್ ಬ್ಯಾಂಕಿನ ಎಂ.ಜಿ. ರಸ್ತೆಯ ಶಾಖೆಗೆ ವರ್ಗಾಯಿಸಿದ್ದಾನೆ. ಹೈದರಾಬಾದಿನ ಫಸ್ಟ್ ಫೈನಾನ್ಸ್‌ನ 18 ನಕಲಿ ವ್ಯಾಪಾರ ಸಂಸ್ಥೆಗಳ ಖಾತೆಗೆ ವರ್ಗಾಯಿಸುವ ಮೂಲಕ ಸತ್ಯನಾರಾಯಣ ವರ್ಮಾಗೆ ಅನುಕೂಲ ಮಾಡಿಕೊಟ್ಟು ಅಪರಾಧ ಎಸಗಿದ್ದಾನೆ. ಅಕ್ರಮವಾಗಿ ₹3.92 ಕೋಟಿ ಪಡೆದಿದ್ದಾನೆ' ಎಂದು ವರದಿ ಉಲ್ಲೇಖಿಸಿದೆ.

ನೆಕ್ಕಂಟಿ ನಾಗರಾಜ್ ಪಾತ್ರವೇನು?

'ನೆಕ್ಕಂಟಿ ನಾಗರಾಜ್ ತನ್ನ ಸಂಬಂಧಿ ನಾಗೇಶ್ವರ ರಾವ್ ಮೂಲಕ 2023ರ ನವೆಂಬರ್‌ನಲ್ಲಿ ಸತ್ಯನಾರಾಯಣ ವರ್ಮಾನನ್ನು ಪರಿಚಯ ಮಾಡಿಕೊಂಡಿದ್ದ. 2024ರ ಫೆಬ್ರುವರಿಯಲ್ಲಿ ನಿಗಮದ ಎಂ.ಡಿ ಪದ್ಮನಾಭ ಅವರನ್ನು ಭೇಟಿ ಮಾಡಿ, ನಿಗಮದ ಹಣವನ್ನು ಠೇವಣಿ ಇಡುವ ಬಗ್ಗೆ ಚರ್ಚೆ ನಡೆಸಿದ್ದ. ಸತ್ಯನಾರಾಯಣ ವರ್ಮಾ ಹಣ ವರ್ಗಾವಣೆಗೆ ಹೇಳಿದಾಗಲೆಲ್ಲ, ನೆಕ್ಕಂಟಿ ನಾಗರಾಜ್ ದೂರವಾಣಿ ಮೂಲಕ ಪದ್ಮನಾಭ ಅವರನ್ನು ಸಂಪರ್ಕಿಸಿ ಹಣ ಅಕ್ರಮ ವರ್ಗಾವಣೆಗೆ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ' ಎಂದು ಆರೋಪ ಹೊರಿಸಲಾಗಿದೆ.

ಶೇ 1 ಕಮಿಷನ್ ಭರವಸೆ

'ತಾನು ಹೇಳಿದ ಬ್ಯಾಂಕಿನಲ್ಲಿ ನಿಶ್ಚಿತ ಠೇವಣಿ ಇಟ್ಟರೆ ಶೇ 1 ಕಮಿಷನ್ ನೀಡುವುದಾಗಿ ನಾಗೇಶ್ವರ ರಾವ್‌ಗೆ ಸತ್ಯನಾರಾಯಣ ವರ್ಮಾ ನಂಬಿಸಿದ್ದರು. ಹೀಗಾಗಿ, ಬೆಂಗಳೂರಿನ ಶಾಂಗ್ರಿ–ಲಾ ಹೋಟೆಲ್‌ನಲ್ಲಿ ತನ್ನ ಬಾವ ನೆಕ್ಕಂಟಿ ನಾಗರಾಜ್ ಮೂಲಕ ನಿಗಮದ ಎಂ.ಡಿ ಪದ್ಮನಾಭ್‌ನನ್ನು ನಾಗೇಶ್ವರ ರಾವ್ ಭೇಟಿ ಮಾಡಿದ್ದ. ನಿಗಮದ ₹89.63 ಕೋಟಿ ವರ್ಗಾವಣೆಯಾಗಲು ಕಾರಣನಾಗಿರುವ ರಾವ್, ತನ್ನ ಕೆಲಸಕ್ಕೆ ₹1.50 ಕೋಟಿ ಅಕ್ರಮ ಲಾಭ ಮಾಡಿಕೊಂಡಿದ್ದಾನೆ' ಎಂದೂ ಆರೋಪಿಸಲಾಗಿದೆ.

ದೋಷಾರೋಪಣೆ ಪಟ್ಟಿಯಲ್ಲಿರುವ ಆರೋಪಿಗಳ ವಿವರ

ಆರೋಪಿಗಳು	ಉದ್ಯೋಗ
1. ಸತ್ಯನಾರಾಯಣ ವರ್ಮಾ ಗಾದಿರಾಜು	ರೈಲ್ವೆ ಗುತ್ತಿಗೆ ಕೆಲಸ
2. ಶ್ರೀನಿವಾಸ ರಾವ್ ಕಾಕಿ	ಉದ್ಯೋಗ ಇಲ್ಲ
3. ಸತ್ಯನಾರಾಯಣ ಇಟಕಾರಿ	ಅಧ್ಯಕ್ಷ, ಫಸ್ಟ್ ಫೈನಾನ್ಸ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ
4. ಸಾಯಿ ತೇಜ ದೇವರಪಲ್ಲಿ	ಸಾಫ್ಟ್‌ವೇರ್ ಎಂಜಿನಿಯರ್
5. ಜೆ.ಜಿ. ಪದ್ಮನಾಭ	ವ್ಯವಸ್ಥಾಪಕ ನಿರ್ದೇಶಕ,ವಾಲ್ಮೀಕಿ ಅಭಿವೃದ್ಧಿ ನಿಗಮ
6. ಪರಶುರಾಮ ದುರುಗಣ್ಣನವರ್	ಲೆಕ್ಕಾಧಿಕಾರಿ, ವಾಲ್ಮೀಕಿ ಅಭಿವೃದ್ಧಿ ನಿಗಮ
7. ಎಂ. ಚಂದ್ರಮೋಹನ್	ಆರ್ಥಿಕ ಸಲಹೆಗಾರ
8. ಜಿ.ಕೆ.ಜಗದೀಶ್	ರಿಯಲ್ ಎಸ್ಟೇಟ್ ವ್ಯವಹಾರ
9. ತೇಜ ತಮಟಮ್	ಎಲ್ ಆ್ಯಂಡ್ ಟಿ ಕಂಪನಿಯಲ್ಲಿ ಉಪ ಗುತ್ತಿಗೆ ಕೆಲಸ
10. ಪಿಟ್ಟಲ ಶ್ರೀನಿವಾಸ್	ಎಸ್‌ಬಿಎಲ್ ಎಂಜಿನಿಯರಿಂಗ್ ಕಂಪನಿಯಲ್ಲಿ ಕೆಲಸ
11. ಈ. ನಾಗೇಶ್ವರ ರಾವ್	ವ್ಯವಸಾಯ
12. ನೆಕ್ಕಂಟಿ ನಾಗರಾಜ್	ರಿಯಲ್ ಎಸ್ಟೇಟ್ ವ್ಯವಹಾರ

ಆರೋಗ್ಯ ಸೇವೆಯಲ್ಲಿ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯಕೀಯ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ಥಾನಿಕ ವೈದ್ಯರ ಶಿಷ್ಯವೇತನ ಹೆಚ್ಚಳಕ್ಕೆ ಆಗ್ರಹಿಸಿ ಕರ್ನಾಟಕ ಸ್ಥಾನಿಕ ವೈದ್ಯರ ಸಂಘವು (ಕೆಎಆರ್‌ಡಿ) ಸೋಮವಾರದಿಂದ ಅನಿರ್ದಿಷ್ಟಾವಧಿ ಪ್ರತಿಭಟನೆ ಕೈಗೊಂಡಿರುವುದರಿಂದ ರಾಜ್ಯದಾದ್ಯಂತ ಆರೋಗ್ಯ ಸೇವೆಯಲ್ಲಿ ವ್ಯತ್ಯಯ ಉಂಟಾಯಿತು.

ಸುಮಾರು ನಾಲ್ಕು ಸಾವಿರ ಸ್ಥಾನಿಕ ವೈದ್ಯರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದು, ಜಿಲ್ಲಾ ಕೇಂದ್ರಗಳಲ್ಲಿ ರೋಗಿಗಳು ಚಿಕಿತ್ಸೆ ದೊರೆಯದೆ ತೊಂದರೆ ಅನುಭವಿಸಿದರು. ತುರ್ತು ಚಿಕಿತ್ಸೆ ಲಭ್ಯವಿತ್ತು. ಹೊರ ರೋಗಿಗಳ ವಿಭಾಗ ಹಾಗೂ ತುರ್ತು ಅಲ್ಲದ ಸೇವೆಗಳು ಇರಲಿಲ್ಲ.

ಪರಿಣಾಮ ಆಸ್ಪತ್ರೆಯಲ್ಲಿನ ಹಲವು ವಿಭಾಗಗಳ ಎದುರು ರೋಗಿಗಳು ಸರದಿ ಸಾಲಿನಲ್ಲಿ ನಿಂತಿದ್ದರು. ವೈದ್ಯರ ಪ್ರತಿಭಟನೆಯ ಮಾಹಿತಿಯಿಲ್ಲದೆ ಬೇರೆ ಊರುಗಳಿಂದ ಬಂದ ರೋಗಿಗಳು, ಸರಿಯಾದ ಸಮಯಕ್ಕೆ ಚಿಕಿತ್ಸೆ ದೊರೆಯದೆ ಸಮಸ್ಯೆ ಎದುರಿಸಿದರು. ಕೆಲ ರೋಗಿಗಳು ಖಾಸಗಿ ಆಸ್ಪತ್ರೆಗಳಿಗೆ ತೆರಳಿ ಚಿಕಿತ್ಸೆ ಪಡೆದರು.

ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ 700ಕ್ಕೂ ಹೆಚ್ಚು ಸ್ಥಾನಿಕ ವೈದ್ಯರು ಪ್ರತಿಭಟನೆ ನಡೆಸುತ್ತಿದ್ದಾರೆ. ಈ ಸಂದರ್ಭದಲ್ಲಿ ನಗರದ ವಾಣಿ ವಿಲಾಸ, ವಿಕ್ಟೋರಿಯಾ, ಮಿಂಟೊ ಮತ್ತು ಬೌರಿಂಗ್ ಆಸ್ಪತ್ರೆಯಲ್ಲಿ ರೋಗಿಗಳಿಗೆ ಚಿಕಿತ್ಸೆ ಚಿಕಿತ್ಸೆ ಪಡೆದುಕೊಳ್ಳಲು ಕಷ್ಟವಾಯಿತು.

ಬೇಡಿಕೆ: ವಿದ್ಯಾರ್ಥಿ ವೇತನ ಹೆಚ್ಚಿಸುವಂತೆ ಆಗ್ರಹಿಸಿ ಮುಖ್ಯಮಂತ್ರಿ, ವೈದ್ಯಕೀಯ ಶಿಕ್ಷಣ ಸಚಿವರು ಸೇರಿ ಸಂಬಂಧಪಟ್ಟ ಅಧಿಕಾರಿಗಳಿಗೆ ಒಂದು ವರ್ಷದಿಂದ ಮನವಿ ಸಲ್ಲಿಸಿದ್ದೇವೆ. ಪ್ರತಿಕ್ರಿಯೆ ದೊರೆತಿಲ್ಲ. ಹೀಗಾಗಿ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸಲಾಗುತ್ತಿದೆ ಎಂದು ಸಂಘದ ಅಧ್ಯಕ್ಷ ಡಾ. ಸಿರೀಶ್ ಶಿವರಾಮಯ್ಯ ಹೇಳಿದರು.

'ರಾಜ್ಯದ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಪ್ರವೇಶ ಶುಲ್ಕ ಅಧಿಕವಿದೆ. ಹೆಚ್ಚು ಪ್ರವೇಶ ಶುಲ್ಕ ಪಡೆದು, ಕಡಿಮೆ ವಿದ್ಯಾರ್ಥಿ ವೇತನ ನೀಡುವ ಮೂಲಕ ವಂಚಿಸಲಾಗುತ್ತಿದೆ' ಎಂದು ಆರೋಪಿಸಿದರು.



ಶಿಷ್ಯವೇತನ ಹೆಚ್ಚಳಕ್ಕೆ ಆಗ್ರಹಿಸಿ ಕರ್ನಾಟಕ ಸ್ಥಾನಿಕ ವೈದ್ಯರ ಸಂಘದ (ಕೆಎಆರ್‌ಡಿ) ನೇತೃತ್ವದಲ್ಲಿ ಸೋಮವಾರ ಬೆಂಗಳೂರಿನ ಸ್ವಾತಂತ್ರ್ಯಉದ್ಯಾನದಲ್ಲಿ ಪ್ರತಿಭಟನೆ ನಡೆಯಿತು —ಪ್ರಜಾವಾಣಿ ಚಿತ್ರ/ಕಿಶೋರ್ ಕುಮಾರ್ ಬೋಳಾರ್

ಕಿರಿಯ ವೈದ್ಯರ ಮುಷ್ಕರ; ರೋಗಿಗಳ ಪರದಾಟ

ಹುಬ್ಬಳ್ಳಿ: ಸ್ಥಾನಿಕ ವೈದ್ಯರ ಶಿಷ್ಯವೇತನ ಹೆಚ್ಚಳಕ್ಕೆ ಆಗ್ರಹಿಸಿ ಕರ್ನಾಟಕ ಸ್ಥಾನಿಕ ವೈದ್ಯರ ಸಂಘದ (ಕೆಆರ್‌ಡಿ) ನೇತೃತ್ವದಲ್ಲಿ ಸೋಮವಾರ ರಾಜ್ಯವ್ಯಾಪಿ ನಡೆದ ಮುಷ್ಕರದಲ್ಲಿ ಕಿಮ್ಸ್ ಆಸ್ಪತ್ರೆ ಕಿರಿಯ ವೈದ್ಯರು ಸಹ ಪಾಲ್ಗೊಂಡರು.

ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ತುರ್ತು ಚಿಕಿತ್ಸಾ ಘಟಕ, ಹೃದಯ ರೋಗ ವಿಭಾಗ ಹೊರತುಪಡಿಸಿ ಆಸ್ಪತ್ರೆಯ ವಿವಿಧ ವಿಭಾಗಗಳಿಗೆ ಯಾರೂ ತೆರಳಲಿಲ್ಲ. ಸುಮಾರು 600 ಕಿರಿಯ ವೈದ್ಯರು ಸೇವೆಯಿಂದ ದೂರ ಉಳಿದರು. ಇದರಿಂದ ಹಲವು ವಿಭಾಗಗಳ ಎದುರು ರೋಗಿಗಳು ಸರದಿ ಸಾಲಿನಲ್ಲಿ ನಿಂತಿದ್ದರು. ಬಹುತೇಕ ಜನರಿಗೆ ಸಕಾಲಕ್ಕೆ ಚಿಕಿತ್ಸೆ ಸಿಗಲಿಲ್ಲ.

'ವಿಮ್ಸ್'ನಲ್ಲಿ ಹೆಚ್ಚಿದ ಒತ್ತಡ: ಬಳ್ಳಾರಿ ವಿಮ್ಸ್‌ನಲ್ಲಿ ತುರ್ತು ಚಿಕಿತ್ಸಾ ಘಟಕದವರು ಹೊರತುಪಡಿಸಿ ಬಹುತೇಕ ಕಿರಿಯ ವೈದ್ಯರು ಮುಷ್ಕರದಲ್ಲಿ ಪಾಲ್ಗೊಂಡರು. ಒಪಿಡಿಗಳಲ್ಲಿ ಕಿರಿಯ ವೈದ್ಯರಿಲ್ಲದ ಕಾರಣ ಪ್ರೊಫೆಸರ್‌ಗಳ ಮೇಲೆ ಒತ್ತಡ ಹೆಚ್ಚಾಯಿತು.

ಸೆಬಿ ಅಧ್ಯಕ್ಷೆ ಮಾಧವಿ ಬುಚ್, ಅದಾನಿ ಸಮೂಹ ವಿರುದ್ಧದ ಆರೋಪ: ಕಾಂಗ್ರೆಸ್–ಬಿಜೆಪಿ ವಾಕ್ಸಮರ

ತನಿಖೆ ಸಿಬಿಐಗೆ ಒಪ್ಪಿಸಿ: 'ಸುಪ್ರೀಂ'ಗೆ ಮನವಿ

ನವದೆಹಲಿ (ಪಿಟಿಐ): ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ಅಧ್ಯಕ್ಷೆ ಮಾಧವಿ ಪುರಿ ಬುಚ್ ಅವರು ರಾಜೀನಾಮೆ ನೀಡಬೇಕು ಎಂದು ಕಾಂಗ್ರೆಸ್ ಸೋಮವಾರ ಆಗ್ರಹಿಸಿದ್ದು, ಅದಾನಿ ಸಮೂಹ ವಿರುದ್ಧದ ಪ್ರಕರಣಗಳ ತನಿಖೆಯನ್ನು ಸಿಬಿಐ ಅಥವಾ ಎಸ್ಐಟಿಗೆ ವರ್ಗಾಯಿಸುವಂತೆ ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಿದೆ.

ಅದಾನಿ ಸಮೂಹದ ವಿರುದ್ಧ ಕೇಳಿ ಬಂದಿರುವ ಆರೋಪಗಳ ಬಗ್ಗೆ ತನಿಖೆ ನಡೆಸಲಾಗುವುದು ಎಂದು ಸೆಬಿ ಹೇಳಿದ ಮರುದಿನ ಕಾಂಗ್ರೆಸ್‌ನಿಂದ ಈ ಒತ್ತಾಯ ಬಂದಿದೆ. ಹಿಂಡೆನ್‌ಬರ್ಗ್ ಆರೋಪ ಸೇರಿದಂತೆ ಇಡೀ ಹಗರಣವನ್ನು ಜಂಟಿ ಸಂಸದೀಯ ಸಮಿತಿಯ (ಜೆಪಿಸಿ) ತನಿಖೆಗೆ ಒಪ್ಪಿಸಬೇಕು ಎಂಬ ಒತ್ತಾಯವನ್ನು ಪಕ್ಷ ಪುನರುಚ್ಚರಿಸಿದೆ.

'ಅದಾನಿ ಸಮೂಹದ ಕೆಲವು ಹಣಕಾಸು ವಹಿವಾಟುಗಳ ಕುರಿತು ನಡೆಯುತ್ತಿರುವ ತನಿಖೆಗಳಿಗೆ ಸಂಬಂಧಿಸಿದಂತೆ ತಾನು ಅತ್ಯುತ್ಸಾಹದಿಂದ ಕೆಲಸ ಮಾಡುತ್ತಿದ್ದೇನೆ ಎಂಬುದನ್ನು ತೋರಿಸಲು ಸೆಬಿ ಪ್ರಯತ್ನಿಸಿದೆ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ದೂರಿದ್ದಾರೆ.

'ಈ ವಿಷಯಕ್ಕೆ ಸಂಬಂಧಿಸಿದಂತೆ ತಾನು 100 ಸಮನ್ಸ್, 1,100 ಪತ್ರಗಳು ಮತ್ತು ಇಮೇಲ್ ಹಾಗೂ 12,000 ಪುಟಗಳನ್ನು ಒಳಗೊಂಡ 300 ದಾಖಲೆಗಳನ್ನು ಪರಿಶೀಲಿಸಿರುವುದಾಗಿ ಸೆಬಿ ತನ್ನ ಪ್ರಕಟಣೆಯಲ್ಲಿ ಹೇಳಿದೆ. ಆದರೆ ಈ ಕೆಲಸಗಳು ಪ್ರಮುಖ ವಿಷಯದಿಂದ ಗಮನವನ್ನು ಬೇರೆಡೆಗೆ ತಿರುಗುವಂತೆ ಮಾಡುತ್ತದೆ. ಇಲ್ಲಿ ಚಟುವಟಿಕೆ ಮುಖ್ಯವಲ್ಲ. ಏನು ಕ್ರಮ ಕೈಗೊಳ್ಳಲಾಗಿದೆ ಎಂಬುದು ಮುಖ್ಯವಾಗುತ್ತದೆ' ಎಂದಿದ್ದಾರೆ.

'ಭಾರತದ ಅರ್ಥ ವ್ಯವಸ್ಥೆ ಮೇಲೆ ನಂಬಿಕೆಯಿರುವ ಕೋಟ್ಯಂತರ ಜನರ ಪರವಾಗಿ ಭಾರತದ ಹಣಕಾಸು ಮಾರುಕಟ್ಟೆಗಳ ಮೇಲ್ವಿಚಾರಕನಾಗಿ ಸೆಬಿ ತನ್ನ ಪಾತ್ರವನ್ನು ಜವಾಬ್ದಾರಿಯಿಂದ ನಿರ್ವಹಿಸುವಂತೆ ಒತ್ತಾಯಿಸಿ ನಾನು ಮಂಡಳಿ ಅಧ್ಯಕ್ಷರಿಗೆ ಕಳೆದ ವರ್ಷ ಪತ್ರ ಬರೆದಿದ್ದೆ. ಆದರೆ ಆ ಪತ್ರಕ್ಕೆ ಇದುವರೆಗೂ ಉತ್ತರ ಲಭಿಸಿಲ್ಲ' ಎಂದರು.

ಅದಾನಿ ಸಮೂಹದ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ತನಿಖೆಯನ್ನು 2 ತಿಂಗಳ ಒಳಗಾಗಿ ಪೂರ್ಣಗೊಳಿಸುವಂತೆ ಸುಪ್ರೀಂ ಕೋರ್ಟ್ ಕಳೆದ ವರ್ಷ ಸೆಬಿಗೆ ನಿರ್ದೇಶಿಸಿತ್ತು ಎಂಬುದನ್ನೂ ಅವರು ನೆನಪಿಸಿದರು.

ತಾನು ಕೈಗೆತ್ತಿಕೊಂಡಿದ್ದ 24 ತನಿಖೆಗಳಲ್ಲಿ ಎರಡು ತನಿಖೆಗಳನ್ನು ಪೂರ್ಣಗೊಳಿಸಿ ಅಂತಿಮ ವರದಿ ನೀಡಲು ಸೆಬಿ ವಿಳಂಬ ಧೋರಣೆ ಅನುಸರಿಸಿದೆ. ಈ ವಿಳಂಬದಿಂದಾಗಿಯೇ ಪ್ರಧಾನಿ ಮೋದಿ ಅವರಿಗೆ, ತನ್ನ ಆಪ್ತ ಸ್ನೇಹಿತನ ಅಕ್ರಮ ಚಟುವಟಿಕೆಗಳ ಬಗ್ಗೆ ಯಾವುದೇ ಪ್ರಶ್ನೆ ಎದುರಾಗದ ರೀತಿಯಲ್ಲಿ ಲೋಕಸಭಾ ಚುನಾವಣೆಯನ್ನು ಎದುರಿಸಲು ಸಾಧ್ಯವಾಯಿತು ಎಂದು ಆರೋಪಿಸಿದರು.



ನರೇಂದ್ರ ಮೋದಿ ಸರ್ಕಾರವನ್ನು ಉರುಳಿಸಲು ಬಯಸುವ ಜಾರ್ಜ್ ಸೊರೊಸ್ ಅವರು ಹಿಂಡೆನ್‌ಬರ್ಗ್‌ನ ಪ್ರಮುಖ ಹೂಡಿಕೆದಾರ

ರವಿಶಂಕರ್ ಪ್ರಸಾದ್
ಬಿಜೆಪಿ ನಾಯಕ



ಸೆಬಿ ಮೇಲಿನ ವಿಶ್ವಾಸಾರ್ಹತೆ ಮರುಸ್ಥಾಪನೆಯಾಗಬೇಕಾದರೆ ಮಾಧವಿ ಬುಚ್ ಅವರು ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಬೇಕು

ಜೈರಾಮ್ ರಮೇಶ್
ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

'ಷೇರು ಮಾರುಕಟ್ಟೆ ಕುಸಿತ ಬಯಸಿರುವ ಕಾಂಗ್ರೆಸ್'

ನವದೆಹಲಿ (ಪಿಟಿಐ): ಸೆಬಿ ಅಧ್ಯಕ್ಷರ ವಿರುದ್ಧದ ಹಿಂಡೆನ್‌ಬರ್ಗ್ ಆರೋಪದ ಕುರಿತು ಜೆಪಿಸಿ ತನಿಖೆ ನಡೆಸಬೇಕೆಂಬ ಕಾಂಗ್ರೆಸ್‌ನ ಬೇಡಿಕೆಯನ್ನು ಬಿಜೆಪಿ ತಿರಸ್ಕರಿಸಿದೆ. 'ಇದು ದೇಶದ ಆರ್ಥಿಕತೆಯನ್ನು ದುರ್ಬಲಗೊಳಿಸುವ ಮತ್ತು ದೇಶದಲ್ಲಿ ಹೂಡಿಕೆಯನ್ನು ನಾಶಪಡಿಸಲು ಕಾಂಗ್ರೆಸ್ ನಡೆಸಿರುವ ಕುತಂತ್ರ' ಎಂದು ಆರೋಪಿಸಿದೆ.

'ಲೋಕಸಭಾ ಚುನಾವಣೆಯಲ್ಲಿ ಜನರಿಂದ ತಿರಸ್ಕರಿಸಲ್ಪಟ್ಟ ನಂತರ ಕಾಂಗ್ರೆಸ್ ಮತ್ತು ಮಿತ್ರಪಕ್ಷಗಳು ಹಾಗೂ ಟೂಲ್‌ಕಿಟ್ ಗ್ಯಾಂಗ್‌ನಲ್ಲಿರುವ ಅದರ ಮಿತ್ರರು ಒಟ್ಟಾಗಿ ಭಾರತದಲ್ಲಿ ಆರ್ಥಿಕ ಅರಾಜಕತೆ ಮತ್ತು ಅಸ್ಥಿರತೆಯನ್ನು ಉಂಟುಮಾಡಲು ಪಿತೂರಿ ನಡೆಸಿದ್ದಾರೆ' ಎಂದು ಬಿಜೆಪಿ ಮುಖಂಡ, ಕೇಂದ್ರದ ಮಾಜಿ ಸಚಿವ ರವಿಶಂಕರ್ ಪ್ರಸಾದ್ ಸೋಮವಾರ ಟೀಕಿಸಿದರು.

'ಕಪೋಲಕಲ್ಪಿತ ವರದಿಗಳನ್ನು ಮುಂದಿಟ್ಟುಕೊಂಡು ಕಾಂಗ್ರೆಸ್ ಪಕ್ಷವು ಜನರಲ್ಲಿ ಗೊಂದಲ ಮೂಡಿಸಲು ಪ್ರಯತ್ನಿಸುತ್ತಿದೆ. ಆದರೆ ಆ ಪಕ್ಷದ ಪಿತೂರಿಯನ್ನು ಅರ್ಥ-ಮಾಡಿಕೊಂಡಿರುವ ಹೂಡಿಕೆದಾರರು ಮಾರುಕಟ್ಟೆಯನ್ನು ದುರ್ಬಲಗೊಳಿಸುವ ಪ್ರಯತ್ನಗಳನ್ನು ತಿರಸ್ಕರಿಸಿದ್ದಾರೆ' ಎಂದು ಪ್ರತಿಪಾದಿಸಿದರು.

'ಜೆಪಿಸಿ ತನಿಖೆ ನಡೆಸದಿದ್ದರೆ, ಪ್ರತಿಭಟನೆ'

ತಿರುವನಂತಪುರ (ಪಿಟಿಐ): ಸೆಬಿ ಅಧ್ಯಕ್ಷರಾದ ಮಾಧವಿ ಬುಚ್ ವಿರುದ್ಧ ಅಮೆರಿಕದ ಹಿಂಡೆನ್‌ಬರ್ಗ್ ರಿಸರ್ಚ್ ಮಾಡಿರುವ ಆರೋಪಕ್ಕೆ ಸಂಬಂಧಿಸಿದಂತೆ, ಜಂಟಿ ಸಂಸದೀಯ ಸಮಿತಿಯಿಂದ (ಜೆಪಿಸಿ) ತನಿಖೆ ನಡೆಸದಿದ್ದರೆ ರಾಷ್ಟ್ರದಾದ್ಯಂತ ಪ್ರತಿಭಟನೆ ನಡೆಸಲಾಗುವುದು ಎಂದು ಕಾಂಗ್ರೆಸ್ ಹೇಳಿದೆ.

'ಈ ವಿಷಯದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಅದಾನಿಗೆ ಬೆಂಬಲ ನೀಡಿದ್ದಾರೆ. ಪ್ರಧಾನಿಯ ಮೌನವು ವಿಶ್ವಾಸಾರ್ಹತೆಯ ನಾಶಕ್ಕೆ ಕಾರಣವಾಗಿದೆ' ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ವಾಗ್ದಾಳಿ ನಡೆಸಿದ್ದಾರೆ.

'ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ವಿರುದ್ಧ ಇ.ಡಿ ಬಳಸಿಕೊಂಡು ಜನರ ಗಮನವನ್ನು ಬೇರೆಡೆಗೆ ಸೆಳೆಯಲಿಕ್ಕಾಗಿ ಕೇಂದ್ರ ಯತ್ನಿಸುತ್ತಿದೆ. ಇದನ್ನು ನಾವು ಬಲವಾಗಿ ವಿರೋಧಿಸುತ್ತೇವೆ. ಹಿಂಡೆನ್‌ಬರ್ಗ್ ಆರೋಪ ದೇಶದ ಅತ್ಯಂತ ಗಂಭೀರ ವಿಷಯ. ಈ ಕುರಿತಂತೆ ಜೆಪಿಸಿ ತನಿಖೆ ನಡೆಸಿ' ಎಂದು ಒತ್ತಾಯಿಸಿದರು.

ಐಐಎಸ್‌ಸಿ ಬೆಂಗಳೂರು ಅತ್ಯುತ್ತಮ ವಿಶ್ವವಿದ್ಯಾಲಯ

ನವದೆಹಲಿ (ಪಿಟಿಐ): ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯು (ಐಐಎಸ್‌ಸಿ) ಸತತ 9ನೇ ವರ್ಷವೂ ಅತ್ಯುತ್ತಮ ವಿಶ್ವವಿದ್ಯಾಲಯ ಎಂದು ಕೇಂದ್ರ ಶಿಕ್ಷಣ ಇಲಾಖೆಯು ಬಿಡುಗಡೆಗೊಳಿಸಿದ ರಾಷ್ಟ್ರೀಯ ಸಾಂಸ್ಥಿಕ ಶ್ರೇಯಾಂಕ ಸಮಿತಿ–2024ರ (ಎನ್‌ಐಆರ್‌ಎಫ್) ಪಟ್ಟಿಯಲ್ಲಿ ಘೋಷಿಸಲಾಗಿದೆ.

'ಸಮಗ್ರ' ವಿಭಾಗದಲ್ಲಿ ಭಾರತೀಯ ತಂತ್ರಜ್ಞಾನ ಸಂಸ್ಥೆ ಮದ್ರಾಸ್ (ಐಐಟಿ ಮದ್ರಾಸ್) ಸತತ 6ನೇ ವರ್ಷವೂ ಅಗ್ರಸ್ಥಾನ ಕಾಯ್ದುಕೊಂಡಿದೆ. ಈ ವಿಭಾಗದಲ್ಲಿ ಐಐಎಸ್‌ಸಿ ಬೆಂಗಳೂರು ಎರಡನೇ ಸ್ಥಾನ ಪಡೆದಿದ್ದು, ಐಐಟಿ ಬಾಂಬೆ ಮೂರನೇ ಸ್ಥಾನ ಕಾಯ್ದುಕೊಂಡಿದೆ. ಕಳೆದ ವರ್ಷ ಮೂರನೇ ಸ್ಥಾನದಲ್ಲಿದ್ದ ಐಐಟಿ ದೆಹಲಿ ಸಂಸ್ಥೆಯು ನಾಲ್ಕನೇ ಸ್ಥಾನಕ್ಕೆ ಕುಸಿದಿದೆ. ಮೊದಲ ಹತ್ತು ಸ್ಥಾನಗಳಲ್ಲಿ ಎಂಟು ಐಐಟಿ ಸಂಸ್ಥೆಗಳು ಸ್ಥಾನ ಪಡೆದಿದ್ದು, ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯ (ಜೆಎನ್‌ಯು) 10ನೇ ಸ್ಥಾನ ಪಡೆದಿವೆ.

ಅತ್ಯುತ್ತಮ ಹತ್ತು ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಸತತ 9ನೇ ವರ್ಷವೂ ಐಐಟಿ ಮದ್ರಾಸ್ ಅಗ್ರಸ್ಥಾನ ಉಳಿಸಿಕೊಂಡಿದೆ. ಮ್ಯಾನೇಜ್‌ಮೆಂಟ್ ಕಾಲೇಜುಗಳ ಪೈಕಿ ಅಹಮದಾಬಾದ್‌ನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಮೊದಲ ಸ್ಥಾನದಲ್ಲಿದ್ದು, ಐಐಎಂ ಬೆಂಗಳೂರು ಎರಡನೇ ಸ್ಥಾನ ಪಡೆದಿದೆ.



24ನೇ ಸ್ಥಾನಕ್ಕೇರಿದ ಜೆಎಸ್‌ಎಸ್

ಮೈಸೂರು: ರಾಷ್ಟ್ರೀಯ ಸಾಂಸ್ಥಿಕ ಶ್ರೇಯಾಂಕ ಸಮಿತಿಯು (ಎನ್‌ಐಆರ್‌ಎಫ್) ಸೋಮವಾರ ಪ್ರಕಟಿಸಿದ ರಾಷ್ಟ್ರೀಯ ಶ್ರೇಯಾಂಕದಲ್ಲಿ ಇಲ್ಲಿನ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯು (ಜೆಎಸ್‌ಎಸ್-ಎಎಚ್‌ಇಆರ್) 24ನೇ ಸ್ಥಾನಕ್ಕೇರಿದೆ.

2016ರಿಂದ ಅಂದರೆ, 9 ವರ್ಷಗಳಿಂದಲೂ ಅಕಾಡೆಮಿಯು ದೇಶದ ಅಗ್ರ 25ರಲ್ಲಿ ಸ್ಥಾನವನ್ನು ಗಳಿಸಿದೆ. 2024ನೇ ಸಾಲಿನ ಈ ಶ್ರೇಯಾಂಕ ಮಾಪನಕ್ಕಾಗಿ ದೇಶದ 10,845 ಉನ್ನತ ಶಿಕ್ಷಣ ಸಂಸ್ಥೆಗಳು ಭಾಗವಹಿಸಿದ್ದವು. ಜೆಎಸ್‌ಎಸ್-ಎಎಚ್‌ಇಆರ್ 24ನೇ ಸ್ಥಾನಕ್ಕೇರಿದೆ. ಹಿಂದಿನ ವರ್ಷಕ್ಕಿಂತ ಹತ್ತು ಸ್ಥಾನ ಜಿಗಿದಿದೆ.

ವೈದ್ಯ ವಿದ್ಯಾರ್ಥಿನಿ ಕೊಲೆ ಪ್ರಕರಣ • ದೇಶದ ವಿವಿಧೆಡೆ ವಿದ್ಯಾರ್ಥಿಗಳ ಪ್ರತಿಭಟನೆ

'ಪೊಲೀಸರು ವಿಫಲರಾದರೆ ಪ್ರಕರಣ ಸಿಬಿಐಗೆ'

ಕೋಲ್ಕತ್ತ (ಪಿಟಿಐ): ಇಲ್ಲಿನ ಸರ್ಕಾರಿ ಆರ್.ಜಿ. ಕರ್ ವೈದ್ಯಕೀಯ ಕಾಲೇಜಿನಲ್ಲಿ ಇತ್ತೀಚೆಗೆ ನಡೆದಿದ್ದ ವೈದ್ಯ ವಿದ್ಯಾರ್ಥಿನಿ ಕೊಲೆ ಪ್ರಕರಣವನ್ನು ಪೊಲೀಸರು ಭಾನುವಾರದೊಳಗೆ ಬೇಧಿಸದಿದ್ದರೆ, ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಲಾಗುವುದು ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಸೋಮವಾರ ತಿಳಿಸಿದರು.

ಸಂತ್ರಸ್ತೆಯ ಕುಟುಂಬದವರನ್ನು ಭೇಟಿಯಾಗಿ, ಸಾಂತ್ವನ ಹೇಳಿದ ಬಳಿಕ ಮಾತನಾಡಿದ ಅವರು, 'ಈ ಪ್ರಕರಣದ ವಿಚಾರಣೆಯನ್ನು ತ್ವರಿತ ನ್ಯಾಯಾಲಯದಲ್ಲಿ ನಡೆಸಬೇಕು ಮತ್ತು ತಪ್ಪಿತಸ್ಥರಿಗೆ ಗರಿಷ್ಠ ಶಿಕ್ಷೆಯಾಗಬೇಕು' ಎಂದು ಹೇಳಿದರು.

'ವಿದ್ಯಾರ್ಥಿನಿಯ ಕೊಲೆ ಪ್ರಕರಣದ ಆರೋಪಿಗಳನ್ನು ಪೊಲೀಸರು ಶೀಘ್ರ ಬಂಧಿಸಬೇಕು. ಈ ಕಾರ್ಯವನ್ನು ಅವರು ಭಾನುವಾರದೊಳಗೆ ಮಾಡದಿದ್ದರೆ, ಪ್ರಕರಣವನ್ನು ಸಿಬಿಐಗೆ ವಹಿಸುತ್ತೇನೆ. ಸಿಬಿಐನ ಯಶಸ್ಸಿನ ಪ್ರಮಾಣವೂ ಕಡಿಮೆ ಇದೆ ಎಂಬುದು ಗೊತ್ತಿದೆ. ಅದು ಪ್ರತಿಷ್ಠಿತ ವ್ಯಕ್ತಿಗಳ ಪ್ರಕರಣಗಳನ್ನೇ ಬೇಧಿಸಿಲ್ಲ. ಹೀಗಿದ್ದರೂ, ಈ ಪ್ರಕರಣವನ್ನು ಸಿಬಿಐಗೆ ವಹಿಸಲು ನನಗೆ ಯಾವುದೇ ಅಭ್ಯಂತರವಿಲ್ಲ' ಎಂದು ಉತ್ತರಿಸಿದರು.

'ಆಸ್ಪತ್ರೆಯ ಒಳಗಿನವರು ಈ ಕೃತ್ಯದಲ್ಲಿ ಭಾಗಿಯಾಗಿರಬಹುದು ಎಂದು ಸಂತ್ರಸ್ತೆಯ ಪೋಷಕರು ಶಂಕಿಸಿದ್ದಾರೆ. ಹೀಗಾಗಿ ಈ ಕುರಿತೂ ತನಿಖೆ ನಡೆಸುವಂತೆ ಪೊಲೀಸರಿಗೆ ಸೂಚಿಸಿದ್ದೇನೆ. ಸಂತ್ರಸ್ತೆಯ ಸ್ನೇಹಿತರು ಮತ್ತು ಇತರರನ್ನು ಪ್ರಶ್ನಿಸುವಂತೆಯೂ ತಿಳಿಸಿದ್ದೇನೆ' ಎಂದು ಬ್ಯಾನರ್ಜಿ ಹೇಳಿದರು.

ಕಿರಿಯ ವೈದ್ಯರ ಕಿಡಿ: ವೈದ್ಯ ವಿದ್ಯಾರ್ಥಿನಿಯ ಮೇಲೆ ಅತ್ಯಾಚಾರ ಎಸಗಿ, ಕೊಲೆ ಮಾಡಿದ ಪ್ರಕರಣವನ್ನು ಪರಿಹರಿಸಲು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಪೊಲೀಸರಿಗೆ ಭಾನುವಾರದವರೆಗೆ ಗಡುವನ್ನು ಏಕೆ ನೀಡಿದ್ದಾರೆ ಎಂದು ಸರ್ಕಾರಿ ಆರ್.ಜಿ. ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ವೈದ್ಯರು ಸೋಮವಾರ ಪ್ರಶ್ನಿಸಿದ್ದಾರೆ.

ಮುಖ್ಯಮಂತ್ರಿ ನೀಡಿರುವ ಪಾರದರ್ಶಕ ತನಿಖೆಯ ಭರವಸೆ ಹೊರತಾಗಿಯೂ ಪ್ರತಿಭಟನಕಾರರು ನ್ಯಾಯಾಂಗ ತನಿಖೆ, ಅಪರಾಧಿಗಳಿಗೆ ಮರಣದಂಡನೆ ಹಾಗೂ ಸಂತ್ರಸ್ತೆಯ ಕುಟುಂಬಕ್ಕೆ ಸಾಕಷ್ಟು ಪರಿಹಾರ ನೀಡುವಲ್ಲಿ ಆಗಿರುವ ವಿಳಂಬವನ್ನು ಟೀಕಿಸಿದರು.

ತನಿಖೆಯ ಬಗ್ಗೆ ಹರಡಿರುವ ವದಂತಿಗಳಿಗೆ ಸಂಬಂಧಿಸಿದಂತೆ ಕೋಲ್ಕತ್ತ ಪೊಲೀಸರು ಕ್ಷಮೆಯಾಚಿಸಬೇಕು ಎಂದು ಆಗ್ರಹಿಸಿದರು. ಆಸ್ಪತ್ರೆಯ ಎಲ್ಲ ಹಿರಿಯ ಅಧಿಕಾರಿಗಳನ್ನು ತೆಗೆದುಹಾಕಬೇಕು, ಅವರನ್ನು ಬೇರೆಡೆ ನಿಯೋಜಿಸಬಾರದು ಎಂದು ಒತ್ತಾಯಿಸಿದರು.

'ತನಿಖೆಯ ಬಗ್ಗೆ ಅಸಮಾಧಾನವಿದೆ. ನಮ್ಮ ಬೇಡಿಕೆ ಸ್ಪಷ್ಟವಾಗಿವೆ' ಎಂದು ಕಿರಿಯ ವೈದ್ಯರೊಬ್ಬರು ಹೇಳಿದರು.



ವೈದ್ಯ ವಿದ್ಯಾರ್ಥಿನಿ ಕೊಲೆ ಖಂಡಿಸಿ ನವದೆಹಲಿಯಲ್ಲಿ ವೈದ್ಯರು ಮಳೆಯಲ್ಲಿಯೇ ಪ್ರತಿಭಟನೆ ನಡೆಸಿದರು — ಪಿಟಿಐ ಚಿತ್ರ

ಪ್ರಾಂಶುಪಾಲ ರಾಜೀನಾಮೆ

ವಿದ್ಯಾರ್ಥಿಗಳ ಪ್ರತಿಭಟನೆ ಹಿನ್ನೆಲೆಯಲ್ಲಿ ಕಾಲೇಜಿನ ಪ್ರಾಂಶುಪಾಲ ಸಂದೀಪ್ ಘೋಷ್ ಪ್ರಾಂಶುಪಾಲ ಹುದ್ದೆ ಮತ್ತು ಸರ್ಕಾರಿ ಸೇವೆಗೆ ಸೋಮವಾರ ರಾಜೀನಾಮೆ ನೀಡಿದ್ದಾರೆ.

ಅಲ್ಲದೆ, ವೈದ್ಯಕೀಯ ಸೂಪರಿಂಟೆಂಡೆಂಟ್ ಮತ್ತು ಉಪ ಪ್ರಾಂಶುಪಾಲ (ಎಂಎಸ್‌ವಿಪಿ) ಸಂಜಯ್ ವಶಿಷ್ಠ ಅವರನ್ನು ನಿರ್ಲಕ್ಷ್ಯದ ಆರೋಪದ ಮೇಲೆ ಸ್ಥಾನದಿಂದ ತೆರವುಗೊಳಿಸಲಾಗಿದೆ. ಎದೆರೋಗ ವೈದ್ಯಕೀಯ ವಿಭಾಗದ ಮುಖ್ಯಸ್ಥರು ಮತ್ತು ಆಸ್ಪತ್ರೆಯ ಭದ್ರತಾ ವ್ಯವಸ್ಥೆಯ ಉಸ್ತುವಾರಿಯಾದ ಎಸಿಪಿಯನ್ನು ಆ ಸ್ಥಾನಗಳಿಂದ ತೆಗೆಯಲಾಗಿದೆ ಎಂದು ಮಮತಾ ಹೇಳಿದರು.

ವೈದ್ಯಕೀಯ ಸೇವೆ ಸ್ಥಗಿತ

- ವೈದ್ಯ ವಿದ್ಯಾರ್ಥಿನಿಯ ಅತ್ಯಾಚಾರ ಮತ್ತು ಕೊಲೆಯನ್ನು ವಿರೋಧಿಸಿ ಸ್ಥಾನಿಕ ವೈದ್ಯರ ಸಂಘಗಳ ಒಕ್ಕೂಟವು (ಫೋರ್ಡಾ) ಸೋಮವಾರ ದೇಶವ್ಯಾಪಿ ಒಪಿಡಿಗಳು ಮತ್ತು ತುರ್ತು ಅಲ್ಲದ ಸೇವೆ ಸ್ಥಗಿತಗೊಳಿಸಲು ಕರೆ ನೀಡಿತ್ತು.
- ಫೋರ್ಡಾ ಕರೆಯಂತೆ ದೆಹಲಿಯ 'ಏಮ್ಸ್' ಸ್ಥಾನಿಕ ವೈದ್ಯರ ಸಂಘ ಸೇರಿದಂತೆ ದೆಹಲಿಯ 10 ಆಸ್ಪತ್ರೆಗಳು ಒಪಿಡಿ, ತುರ್ತು ಅಲ್ಲದ ಸೇವೆಗಳನ್ನು ಸ್ಥಗಿತಗೊಳಿಸಿ ಪ್ರತಿಭಟಿಸಿದವು.
- ಆರ್.ಜಿ. ಕರ್ ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿಗಳು ನಾಲ್ಕನೇ ದಿನವೂ ಪ್ರತಿಭಟನೆ ಮುಂದುವರಿಸಿದರು. ಸಂತ್ರಸ್ತೆಯ ಮರಣೋತ್ತರ ಪರೀಕ್ಷಾ ವರದಿ ಮತ್ತು ಸಭಾಂಗಣದಲ್ಲಿನ ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿಯನ್ನು ಬಹಿರಂಗ ಪಡಿಸಬೇಕು ಎಂದು ಆಗ್ರಹಿಸಿದರು.
- ಲಖನೌನಲ್ಲಿ ವೈದ್ಯಕೀಯ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು
- ಚಂಡೀಗಢದ ಸ್ನಾತಕೋತ್ತರ ವೈದ್ಯಕೀಯ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯ ಸ್ಥಾನಿಕ ವೈದ್ಯರು ಸೋಮವಾರ ಪ್ರತಿಭಟನೆ ನಡೆಸಿದರು. ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕು ಎಂದು ಆಗ್ರಹಿಸಿದರು.
- ಅತ್ಯಾಚಾರ–ಕೊಲೆ ಖಂಡಿಸಿ ಮಹಾರಾಷ್ಟ್ರದ ಸ್ಥಾನಿಕ ವೈದ್ಯರು ಮಂಗಳವಾರದಿಂದ ಅನಿರ್ದಿಷ್ಟ ಅವಧಿಯ ಮುಷ್ಕರ ನಡೆಸಲಿದ್ದಾರೆ.

ಬಿಜೆಪಿಯಲ್ಲಿ ಹೆಚ್ಚಿದ ಒಡಲ ಉರಿ

ಒಂದನೇ ಪುಟದಿಂದ...

ಈ ಬಣಕ್ಕೆ ಸೇರ್ಪಡೆಗೊಳ್ಳುವ ಬಂಡಾಯಗಾರರ ಸಂಖ್ಯೆಯೂ ದಿನೇ ದಿನೇ ಹೆಚ್ಚಾಗಿದೆ. 'ಪಕ್ಷದಲ್ಲಿ ಹೊಂದಾಣಿಕೆ ರಾಜಕಾರಣವನ್ನು ಕೊನೆಗೊಳಿಸುವುದೇ ನಮ್ಮ ಉದ್ದೇಶ' ಎಂದು ಈ ಗುಂಪು ಹೇಳಿಕೊಂಡಿದೆ.

ಶಾಸಕರಾದ ರಮೇಶ ಜಾರಕಿಹೊಳಿ, ಬಿ.ಪಿ.ಹರೀಶ್ ಈ ಗುಂಪಿನಲ್ಲಿ ಮುಂಚೂಣಿಯಲ್ಲಿದ್ದಾರೆ. ಮಾಜಿ ಶಾಸಕ ಅರವಿಂದ ಲಿಂಬಾವಳಿ ಮತ್ತು ಮಾಜಿ ಸಂಸದ ಅಣ್ಣಾಸಾಹೇಬ ಜೊಲ್ಲೆ (ಇಬ್ಬರ ಪತ್ನಿಯರೂ ಶಾಸಕಿಯರು), ಮಾಜಿ ಶಾಸಕ ಕುಮಾರ್ ಬಂಗಾರಪ್ಪ, ಮಾಜಿ ಸಂಸದರಾದ ಪ್ರತಾಪ್ ಸಿಂಹ, ಜಿ.ಎಂ.ಸಿದ್ದೇಶ್ವರ, ಜೆಡಿಎಸ್ ಮುಖಂಡ ಹಾಗೂ ಯಡಿಯೂರಪ್ಪ ಅವರ ಮಾಜಿ ಆಪ್ತ ಕಾರ್ಯದರ್ಶಿ ಎನ್.ಆರ್. ಸಂತೋಷ್ ಈ ಸಭೆಗಳಲ್ಲಿ ಭಾಗವಹಿಸಿದ್ದರು. ಇವರಲ್ಲಿ ಬಹುತೇಕರು ಈ ಹಿಂದೆ ಬಿ.ಎಸ್.ಯಡಿಯೂರಪ್ಪ ಅವರ ಆಪ್ತ ವಲಯದಲ್ಲೇ ಗುರುತಿಸಿಕೊಂಡವರು.

ಬಸನಗೌಡ ಪಾಟೀಲ ಯತ್ನಾಳ ನೇತೃತ್ವದ ವಿರೋಧಿ ಬಣ ಮೈಸೂರು ಚಲೋದತ್ತ ಸುಳಿಯಲಿಲ್ಲ. ಬದಲಿಗೆ ಪಕ್ಷದ ಪಾದಯಾತ್ರೆಯ ಬಗ್ಗೆ ವ್ಯಂಗ್ಯವಾಡಿ, ಡಿ.ಕೆ.ಶಿವಕುಮಾರ್ ಅವರನ್ನು ಮುಖ್ಯಮಂತ್ರಿ ಮಾಡುವ ಉದ್ದೇಶದ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದು ವಿಜಯೇಂದ್ರ ಅವರನ್ನು ಕುಟುಕಿದ್ದರು. ಅಲ್ಲದೇ, ಕೂಡಲಸಂಗಮದಿಂದ ಬಳ್ಳಾರಿಗೆ ತಾವು ಪ್ರತ್ಯೇಕ ಪಾದಯಾತ್ರೆ ಹಮ್ಮಿಕೊಳ್ಳುವುದಾಗಿ ಘೋಷಿಸುವ ಮೂಲಕ ಸಡ್ಡು ಹೊಡೆದಿದ್ದರು.

ಆರ್‌ಎಸ್‌ಎಸ್ ಮಧ್ಯಪ್ರವೇಶ?

ಬಿಜೆಪಿಯಲ್ಲಿ ಅತೃಪ್ತಿ ಮತ್ತು ಬಂಡಾಯವನ್ನು ಶಮನ ಮಾಡಲು ಆರ್‌ಎಸ್‌ಎಸ್ ಮಧ್ಯಪ್ರವೇಶಿಸುವ ಸಾಧ್ಯತೆ ಇದೆ. ಈ ಸಂಬಂಧ ಇದೇ 21ರಂದು ಆಯ್ದ ಮುಖಂಡರನ್ನು ಮಾತುಕತೆಗೆ ಆಹ್ವಾನಿಸಲಿದೆ ಎಂದು ಮೂಲಗಳು ಹೇಳಿವೆ.

ರಾಷ್ಟ್ರಮಟ್ಟದಲ್ಲಿಯೂ ಬಿಜೆಪಿ ಮತ್ತು ಆರ್‌ಎಸ್‌ಎಸ್ ಮಧ್ಯೆ ಸಮನ್ವಯ ಸಭೆ ನಡೆಯಲಿದೆ. ರಾಜ್ಯದಲ್ಲಿ ಭಿನ್ನಮತ ತಾರಕಕ್ಕೆ ಏರುವ ಮೊದಲೇ ಅದನ್ನು ಶಮನ ಮಾಡಲು ಸಂಘದ ಮುಖಂಡರು ಮುಂದಾಗಿದ್ದಾರೆ ಎನ್ನಲಾಗಿದೆ.

'ಕೇಜ್ರಿವಾಲ್ ಪತ್ರ: ಸೌಲಭ್ಯದ ದುರ್ಬಳಕೆ'


ನವದೆಹಲಿ (ಪಿಟಿಐ): ದೆಹಲಿಯ ಸಚಿವೆ ಆತಿಶಿ ಅವರು ಸ್ವಾತಂತ್ರ್ಯೋತ್ಸವದ ದಿನ ತ್ರಿವರ್ಣ ಧ್ವಜ ಹಾರಿಸಲಿದ್ದಾರೆ ಎಂದು ದೆಹಲಿಯ ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನಾ ಅವರಿಗೆ ತಾವು ಬರೆದಿರುವ ಪತ್ರವು ಸೌಲಭ್ಯಗಳ ದುರ್ಬಳಕೆ ಎಂದು ತಿಹಾರ್ ಜೈಲಿನ ಅಧಿಕಾರಿಗಳು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ತಿಳಿಸಿದ್ದಾರೆ.

ಈ ಪತ್ರವನ್ನು ಸಕ್ಸೇನಾ ಅವರಿಗೆ ತಲುಪಿಸಿಲ್ಲ ಎಂದು ಕೂಡ ಅಧಿಕಾರಿಗಳು ಕೇಜ್ರಿವಾಲ್ ಅವರಿಗೆ ಹೇಳಿದ್ದಾರೆ. ಅವಕಾಶ ಇಲ್ಲದ ಚಟುವಟಿಕೆಗಳನ್ನು ನಡೆಸಬಾರದು ಎಂದು ತಿಹಾರ್‌ನ ಎರಡನೆಯ ಸಂಖ್ಯೆಯ ಜೈಲಿನ ಎಸ್‌ಪಿ, ಕೇಜ್ರಿವಾಲ್ ಅವರಿಗೆ ಹೇಳಿದ್ದಾರೆ. ಅನುಮತಿ ಇಲ್ಲದ ಚಟುವಟಿಕೆಗಳನ್ನು ಮುಂದುವರಿಸಿದರೆ ಸೌಲಭ್ಯಗಳಿಗೆ ಕಡಿವಾಣ ಹಾಕಬೇಕಾಗುತ್ತದೆ ಎಂದಿದ್ದಾರೆ.

ದೆಹಲಿ ಸರ್ಕಾರ ನಡೆಸುವ ಸ್ವಾತಂತ್ರ್ಯೋತ್ಸವದಲ್ಲಿ ಆತಿಶಿ ಅವರು ತ್ರಿವರ್ಣ ಧ್ವಜ ಆರೋಹಣ ಮಾಡಲಿದ್ದಾರೆ ಎಂದು ಲೆಫ್ಟಿನೆಂಟ್ ಗವರ್ನರ್ ಅವರನ್ನು ಉದ್ದೇಶಿಸಿ ಕಳೆದ ವಾರ ಬರೆದಿದ್ದ ಪತ್ರದಲ್ಲಿ ಕೇಜ್ರಿವಾಲ್ ಹೇಳಿದ್ದರು. ಆದರೆ ಮುಖ್ಯಮಂತ್ರಿಯಿಂದ ಯಾವುದೇ ಪತ್ರ ಬಂದಿಲ್ಲ ಎಂದು ಲೆಫ್ಟಿನೆಂಟ್ ಗವರ್ನರ್ ಕಚೇರಿ ತಿಳಿಸಿತ್ತು. ಕೇಜ್ರಿವಾಲ್ ಅವರು ಈಗ ತಿಹಾರ್ ಜೈಲಿನಲ್ಲಿದ್ದಾರೆ.

ಷೇರುಪೇಟೆ ವಹಿವಾಟು

56



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,367
ಇಂದಿನ ಅಂತ್ಯ	24,347
▼	20
ದಿನದ ಕನಿಷ್ಠ	24,212

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹200-463
ದ್ವಿತಳಿ (ಬಿ.ವಿ)	₹255-623

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹490
12 ಕ್ಕೆ	₹68
ಮೈಸೂರು	
100ಕ್ಕೆ	₹470

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1540 (1540)
ಸೋಯಾ (ರಿಫೈನ್ಡ್)	₹945 (945)
ಸೂರ್ಯಕಾಂತಿ (ರಿಫೈನ್ಡ್)	₹955 (955)
ಪಾಮೋಲಿನ್	₹915 (915)

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹9000-9740
ಬೆಂಗಳೂರು	₹10000-12000
ಕೆ.ಆರ್.ಪೇಟೆ	₹9455-9455
ತಿಪಟೂರು	₹9700-9901
ತುರುವೇಕೆರೆ	₹9500-9900

ವಿನಿಮಯ ದರ

$ ಡಾಲರ್	83.97
£ ಪೌಂಡ್	107.16
€ ಯುರೊ	91.76
¥ ಯೆನ್ (100ಕ್ಕೆ)	57

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹16250
ಎಸಿ	₹10080
ಆರ್‌ಪಿ	₹18500
ಆರ್‌ಸಿ	₹10010

ಆಹಾರ ಪದಾರ್ಥಗಳ ಬೆಲೆಯಲ್ಲಿ ಇಳಿಕೆ • ಆರ್‌ಬಿಐನ ಗುರಿಯಾದ ಶೇ4ಕ್ಕಿಂತ ಕಡಿಮೆ

ಚಿಲ್ಲರೆ ಹಣದುಬ್ಬರ: 5 ವರ್ಷದ ಕನಿಷ್ಠ

ನವದೆಹಲಿ (ಪಿಟಿಐ): ಆಹಾರ ಪದಾರ್ಥಗಳ ಬೆಲೆ ಇಳಿಕೆಯಿಂದ ದೇಶದ ಚಿಲ್ಲರೆ ಹಣದುಬ್ಬರವು ಜುಲೈ ತಿಂಗಳಲ್ಲಿ ಶೇ 3.54ಕ್ಕೆ ಇಳಿಕೆಯಾಗಿದೆ. ಇದು 5 ವರ್ಷದ ಕನಿಷ್ಠ ಮಟ್ಟವಾಗಿದೆ.

ಗ್ರಾಹಕ ಬೆಲೆ ಸೂಚ್ಯಂಕ ಆಧಾರಿತ (ಸಿಪಿಐ) ಚಿಲ್ಲರೆ ಹಣದುಬ್ಬರ ದರವು ಜೂನ್‌ನಲ್ಲಿ ಶೇ 5.08ರಷ್ಟು ದಾಖಲಾಗಿತ್ತು. 2023ರ ಜುಲೈನಲ್ಲಿ ಶೇ 7.44ರಷ್ಟಿತ್ತು. ಚಿಲ್ಲರೆ ಹಣದುಬ್ಬರವು 2019ರ ಸೆಪ್ಟೆಂಬರ್ ನಂತರ ಮೊದಲ ಬಾರಿಗೆ ರಿಸರ್ವ್ ಬ್ಯಾಂಕ್‌ನ ಗುರಿಯಾದ ಶೇ 4ಕ್ಕಿಂತ ಕಡಿಮೆಯಾಗಿದೆ.

ಜೂನ್‌ನಲ್ಲಿ ಆಹಾರ ಪದಾರ್ಥಗಳ ಹಣದುಬ್ಬರವು ಶೇ 9.36ರಷ್ಟಿತ್ತು. ಇದು ಜುಲೈನಲ್ಲಿ ಶೇ 5.42ಕ್ಕೆ ಇಳಿದಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಶೇ 11.51ರಷ್ಟಿತ್ತು ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿಯ (ಎನ್‌ಎಸ್‌ಒ) ವರದಿ ಸೋಮವಾರ ತಿಳಿಸಿದೆ.


2019ರ ಸೆಪ್ಟೆಂಬರ್‌ನಲ್ಲಿ ಚಿಲ್ಲರೆ ಹಣದುಬ್ಬರ ದರವು ಶೇ 3.99ರಷ್ಟು ದಾಖಲಾಗಿತ್ತು.

ಹಾಲು ಮತ್ತು ಹಾಲಿನ ಉತ್ಪನ್ನಗಳ ವಾರ್ಷಿಕ ಹಣದುಬ್ಬರವು ಶೇ 2.99, ಎಣ್ಣೆ ಮತ್ತು ಕೊಬ್ಬು (–) ಶೇ 1.17, ಹಣ್ಣುಗಳು ಶೇ 3.84 ಮತ್ತು ಮಸಾಲೆ ಪದಾರ್ಥಗಳು (–) ಶೇ 1.43ರಷ್ಟು ದಾಖಲಾಗಿವೆ. ತರಕಾರಿಗಳ ಹಣದುಬ್ಬರವು ಶೇ 6.83 ಮತ್ತು ಸಿರಿಧಾನ್ಯಗಳು ಮತ್ತು ಉತ್ಪನ್ನಗಳು ಶೇ 8.14ರಷ್ಟು ದಾಖಲಿಸಿವೆ.

ಹಣದುಬ್ಬರವು ಗ್ರಾಮೀಣ ಪ್ರದೇಶದಲ್ಲಿ ರಾಷ್ಟ್ರೀಯ ಸರಾಸರಿಗಿಂತ ಶೇ 4.1ರಷ್ಟು ಹೆಚ್ಚಿದ್ದರೆ, ನಗರ ಪ್ರದೇಶಗಳಲ್ಲಿ ಶೇ 2.98ರಷ್ಟಿದೆ. ರಾಜ್ಯಗಳ ಪೈಕಿ ಬಿಹಾರದಲ್ಲಿ ಅತಿ ಹೆಚ್ಚು ಹಣದುಬ್ಬರ ವಿದ್ದು ಶೇ 5.87ರಷ್ಟು ದಾಖಲಾಗಿದೆ. ಜಾರ್ಖಂಡ್‌ನಲ್ಲಿ ಅತಿ ಕಡಿಮೆ ಶೇ 1.72ರಷ್ಟು ಇದೆ.

‘ಜುಲೈನಲ್ಲಿ ಸಿಪಿಐ ಹಣದುಬ್ಬರವು 59 ತಿಂಗಳ ಕನಿಷ್ಠಕ್ಕೆ ಇಳಿದಿದೆ. ಇದು ಐಸಿಆರ್‌ಎ ಅಂದಾಜಿಗಿಂತ ಸ್ವಲ್ಪ ಕಡಿಮೆ’ ಎಂದು ಐಸಿಆರ್‌ಎನ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್ ಹೇಳಿದ್ದಾರೆ.

ಭಾರತೀಯ ಹವಾಮಾನ ಇಲಾಖೆ ನಿರೀಕ್ಷೆಯಂತೆ ಆಗಸ್ಟ್ ಮತ್ತು ಸೆಪ್ಟೆಂಬರ್‌ನಲ್ಲಿ ಹೆಚ್ಚು ಮಳೆಯಾಗಲಿದೆ. ಕೆಲವು ರಾಜ್ಯಗಳಲ್ಲಿ ಭಾರಿ ಮಳೆ ಮತ್ತು ಪ್ರವಾಹದ ಬಗ್ಗೆ ಎಚ್ಚರಿಕೆ ವಹಿಸಬೇಕಾಗಿದೆ. ಇದು ಬೆಳೆಯ ಮೇಲೆ ಪರಿಣಾಮ ಬೀರಲಿದೆ ಎಂದು ನಾಯರ್ ಹೇಳಿದ್ದಾರೆ.



ಕೈಗಾರಿಕಾ ಉತ್ಪಾದನಾ ಸೂಚ್ಯಂಕ ಇಳಿಕೆ

ದೇಶದ ಕೈಗಾರಿಕಾ ಉತ್ಪಾದನಾ ಬೆಳವಣಿಗೆ ಜೂನ್ ತಿಂಗಳಲ್ಲಿ ಶೇ 4.2ರಷ್ಟಾಗಿದ್ದು, 5 ತಿಂಗಳ ಕನಿಷ್ಠ ಮಟ್ಟಕ್ಕೆ ದಾಖಲಾಗಿದೆ.

ತಯಾರಿಕಾ ವಲಯವು ನಿರೀಕ್ಷಿತ ಪ್ರಮಾಣದಲ್ಲಿ ಪ್ರಗತಿ ಸಾಧಿಸಿಲ್ಲ. ಇದರಿಂದ ಸೂಚ್ಯಂಕ ಇಳಿಕೆಯಾಗಿದೆ. ಆದರೆ, ವಿದ್ಯುತ್ ಮತ್ತು ಗಣಿಗಾರಿಕೆ ವಲಯವು ಉತ್ತಮವಾಗಿ ಕಾರ್ಯನಿರ್ವಹಿಸಿವೆ.

ಕೈಗಾರಿಕಾ ಉತ್ಪಾದನೆ ಸೂಚ್ಯಂಕ (ಐಐಪಿ) ಆಧಾರದ ಮೇಲೆ ಲೆಕ್ಕ ಹಾಕುವ ಈ ಬೆಳವಣಿಗೆಯು ಮೇ ತಿಂಗಳಲ್ಲಿ ಶೇ 6.2ರಷ್ಟು ದಾಖಲಾಗಿತ್ತು. ಏಪ್ರಿಲ್‌ನಲ್ಲಿ ಶೇ 5, ಮಾರ್ಚ್‌ನಲ್ಲಿ ಶೇ 5.5, ಫೆಬ್ರುವರಿಯಲ್ಲಿ ಶೇ 5.6 ಮತ್ತು ಜನವರಿಯಲ್ಲಿ ಶೇ 4.2ರಷ್ಟು ಆಗಿತ್ತು.

ಈ ಹಣಕಾಸು ವರ್ಷದ ಏಪ್ರಿಲ್–ಜೂನ್ ಅವಧಿಯಲ್ಲಿ ಐಐಪಿ ಬೆಳವಣಿಗೆ ಶೇ 5.2ರಷ್ಟು ದಾಖಲಾಗಿದೆ. ಇದು ಹಿಂದಿನ ವರ್ಷದ ಇದೇ ಅವಧಿಯಲ್ಲಿ ಶೇ 4.7ರಷ್ಟಿತ್ತು. 2023ರ ಜೂನ್‌ನಲ್ಲಿ ಶೇ 4 ಆಗಿತ್ತು ಎಂದು ಕೇಂದ್ರ ಸಾಂಖ್ಯಿಕ ಮತ್ತು ಯೋಜನಾ ಅನುಷ್ಠಾನ ಸಚಿವಾಲಯದ ಅಂಕಿ–ಅಂಶಗಳು ತಿಳಿಸಿವೆ.

ತಯಾರಿಕಾ ವಲಯದ ಬೆಳವಣಿಗೆ ಹಿಂದಿನ ವರ್ಷದ ಜೂನ್‌ನಲ್ಲಿ ಶೇ 3.5ರಷ್ಟಿತ್ತು. ಅದು ಈ ಬಾರಿ ಶೇ 2.6ಕ್ಕೆ ಇಳಿದಿದೆ. ಗಣಿಗಾರಿಕೆ ವಲಯವು ಶೇ 10.3 ಮತ್ತು ವಿದ್ಯುತ್ ವಲಯವು ಶೇ 8.6ರಷ್ಟು ಪ್ರಗತಿ ದಾಖಲಿಸಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಕ್ರಮವಾಗಿ ಶೇ 7.6 ಮತ್ತು ಶೇ 4.2 ರಷ್ಟಿತ್ತು. ಮೂಲಸೌಕರ್ಯ/ನಿರ್ಮಾಣ ಸರಕುಗಳ ಬೆಳವಣಿಗೆ ಶೇ 4.4 ಆಗಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಶೇ 13.3ರಷ್ಟಿತ್ತು ಎಂದು ತಿಳಿಸಿದೆ.

ಸುದ್ದಿ 2 ನಿಮಿಷ

ನೇರ ತೆರಿಗೆ ಸಂಗ್ರಹ ಶೇ 22ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): 2024–25ರ ಹಣಕಾಸು ವರ್ಷದ ಏಪ್ರಿಲ್‌ನಿಂದ ಆಗಸ್ಟ್ 11ರ ವರೆಗೆ ನಿವ್ವಳ ನೇರ ತೆರಿಗೆ ಸಂಗ್ರಹವು ಶೇ 22ರಷ್ಟು ಏರಿಕೆಯಾಗಿದ್ದು, ₹6.93 ಲಕ್ಷ ಕೋಟಿ ಸಂಗ್ರಹವಾಗಿದೆ ಎಂದು ಸರ್ಕಾರವು ಸೋಮವಾರ ತಿಳಿಸಿದೆ.

ವೈಯಕ್ತಿಕ ಆದಾಯ ತೆರಿಗೆ (ಪಿಐಟಿ) ₹4.47 ಲಕ್ಷ ಕೋಟಿ ಮತ್ತು ಕಂಪನಿಗಳ ವರಮಾನ ತೆರಿಗೆ (ಸಿಐಟಿ) ₹2.22 ಲಕ್ಷ ಕೋಟಿ ಇದರಲ್ಲಿ ಸೇರಿವೆ.

ಷೇರು ವಹಿವಾಟು ತೆರಿಗೆ (ಎಸ್‌ಟಿಟಿ) ₹21,599 ಕೋಟಿ ಮತ್ತು ಇತರೆ ತೆರಿಗೆಗಳಿಂದ ₹1,617 ಕೋಟಿ ಸಂಗ್ರಹವಾಗಿದೆ.



2023-24ರ ಆದಾಯ ತೆರಿಗೆ ರಿಟರ್ನ್ಸ್ (ಐಟಿಆರ್) ಸಲ್ಲಿಕೆಯಲ್ಲಿನ ಹೆಚ್ಚಳದಿಂದಾಗಿ ತೆರಿಗೆ ಸಂಗ್ರಹದಲ್ಲಿ ಏರಿಕೆಯಾಗಿದೆ. ಜುಲೈ 31ರೊಳಗೆ ದಾಖಲೆಯ 7.28 ಕೋಟಿ ರಿಟರ್ನ್ಸ್ ಸಲ್ಲಿಕೆಯಾಗಿವೆ.

ಈ ಅವಧಿಯಲ್ಲಿ ₹1.20 ಲಕ್ಷ ಕೋಟಿ ಮರುಪಾವತಿ (ರೀಫಂಡ್) ಮಾಡಲಾಗಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಮರುಪಾವತಿ ಪ್ರಮಾಣವು ಶೇ 33ರಷ್ಟು ಹೆಚ್ಚಿದೆ.

ಒಟ್ಟಾರೆಯಾಗಿ, ನೇರ ತೆರಿಗೆ ಸಂಗ್ರಹವು ₹8.13 ಲಕ್ಷ ಕೋಟಿಯಾಗಿದೆ. ಇದರಲ್ಲಿ ₹4.82 ಲಕ್ಷ ಕೋಟಿ ವೈಯಕ್ತಿಕ ಆದಾಯ ತೆರಿಗೆ ಮತ್ತು ₹3.08 ಲಕ್ಷ ಕೋಟಿ ಕಂಪನಿಗಳ ವರಮಾನ ತೆರಿಗೆ ಸೇರಿದೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ನೇರ ತೆರಿಗೆಗಳಿಂದ ₹22.12 ಲಕ್ಷ ಕೋಟಿ ಸಂಗ್ರಹಿಸಲು ಸರ್ಕಾರವು ನಿರ್ಧರಿಸಿದೆ.

ತಜ್ಞರ ಸಮಿತಿ ರಚಿಸಿದ ಆರ್‌ಬಿಐ

ಮುಂಬೈ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಹಂಚಿಕೊಳ್ಳುವ ಅಂಕಿ–ಅಂಶವು ಅಂತರ ರಾಷ್ಟ್ರೀಯ ಮಾನದಂಡಗಳಿಗೆ ಅನುಗುಣವಾಗಿದೆಯೇ ಎಂದು ಖಚಿತಪಡಿಸಿಕೊಳ್ಳಲು ಆರ್‌ಬಿಐನ ಡೆಪ್ಯುಟಿ ಗವರ್ನರ್ ಮೈಕೆಲ್ ಪಾತ್ರಾ ನೇತೃತ್ವದಲ್ಲಿ ಸೋಮವಾರ ಸಮಿತಿಯನ್ನು ರಚಿಸಿದೆ.

10 ಸದಸ್ಯರ ತಜ್ಞರ ಸಮಿತಿಯು ಈ ವರ್ಷದ ನವೆಂಬರ್ ಅಂತ್ಯದೊಳಗೆ ವರದಿಯನ್ನು ಸಲ್ಲಿಸುವಂತೆ ಸೂಚಿಸಿದೆ. ಪಾತ್ರಾ ಅಧ್ಯಕ್ಷತೆಯಲ್ಲಿನ ಸಮಿತಿಯು, ಅಂಕಿ– ಅಂಶಗಳಗುಣಮಟ್ಟವನ್ನು ಪರಿಶೀಲಿಸಲಿದ್ದು, ಸುಧಾರಣೆಗೆ ಸಲಹೆ ನೀಡಲಿದೆ.

ರಾಷ್ಟ್ರೀಯ ಸಾಂಖ್ಯಿಕ ಆಯೋಗದ ಮಾಜಿ ಅಧ್ಯಕ್ಷ ಆರ್. ಬಿ. ಬರ್ಮನ್, ರಾಷ್ಟ್ರೀಯ ಅನ್ವಯಿಕ ಆರ್ಥಿಕ ಸಂಶೋಧನಾ ಮಂಡಳಿಯ ಸೋನಾಲ್ದೆ ದೇಸಾಯಿ, ಪುಣೆಯ ನ್ಯಾಷನಲ್ ಇನ್ಸಿಟ್ಯೂಟ್ ಆಫ್ ಬ್ಯಾಂಕ್ ಮ್ಯಾನೇಜ್‌ಮೆಂಟ್‌ನ ನಿರ್ದೇಶಕ ಪಾರ್ಥ ರೇ, ರಾಷ್ಟ್ರೀಯ ಸಾಂಖ್ಯಿಕ ಆಯೋಗದ ಮಾಜಿ ಅಧ್ಯಕ್ಷ ಬಿಮಲ್ ರಾಯ್, ಒಇಸಿಡಿಯ ಮಾಜಿ ಮುಖ್ಯ ಸಂಖ್ಯಾಶಾಸ್ತ್ರಜ್ಞ ಪಾಲ್ ಶ್ರೇಯರ್, ಬ್ಯಾಂಕ್ ಆಫ್ ಇಂಟರ್‌ನ್ಯಾಷನಲ್ ಸೆಟಲ್‌ಮೆಂಟ್ಸ್‌ನ ಬ್ರೂನೋ ಟಿಸ್ಸಾಟ್ ಮತ್ತು ಆರ್‌ಬಿಐನ ಮಾಜಿ ಕಾರ್ಯನಿರ್ವಾಹಕ ನಿರ್ದೇಶಕ ಸುದರ್ಶನ್ ಸೇನ್, ಆರ್‌ಬಿಐನ ಕಾರ್ಯ ನಿರ್ವಾಹಕ ನಿರ್ದೇಶಕರಾದ ಮುನೀಶ್ ಕಪೂರ್ ಮತ್ತು ಓ.ಪಿ.ಮಾಲ್ ತಜ್ಞರ ಸಮಿತಿಯ ಸದಸ್ಯರಾಗಿರುತ್ತಾರೆ ಎಂದು ಆರ್‌ಬಿಐ ತಿಳಿಸಿದೆ.

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹242
ಆರ್‌ಎಸ್‌ಎಸ್-5	₹232
ಗುಡ್ ಲಾಟ್	₹221

ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಭೆ

ಈ ಬಾರಿ ಅದ್ದೂರಿ ದಸರಾ ಆಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ಬಾರಿ ನಾಡಹಬ್ಬ ಮೈಸೂರು ದಸರಾವನ್ನು ವಿಜೃಂಭಣೆಯಿಂದ ಆಚರಿಸಲು ನಿರ್ಧರಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ವಿಧಾನಸೌಧದಲ್ಲಿ ಸೋಮವಾರ ನಡೆದ ದಸರಾ ಕುರಿತ ಉನ್ನತಮಟ್ಟದ ಸಭೆಯ ಬಳಿಕ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

‘ಕಳೆದ ವರ್ಷ ಬರಗಾಲದ ಕಾರಣ ದಸರಾ ಅದ್ದೂರಿಯಿಂದ ಆಚರಿಸಲು ಆಗಿರಲಿಲ್ಲ. ಈ ಬಾರಿ ರಾಜ್ಯದಾದ್ಯಂತ ಉತ್ತಮ ಮಳೆಯಾಗಿದ್ದು, ಬಹುತೇಕ ಎಲ್ಲ ಜಲಾಶಯಗಳು ತುಂಬಿವೆ. ಹೀಗಾಗಿ ದಸರಾವನ್ನು ವಿಜೃಂಭಣೆಯಿಂದ ಜನರ ಹಬ್ಬವಾಗಿ ಆಚರಿಸಲು ತೀರ್ಮಾನಿಸಿದ್ದೇವೆ’ ಎಂದು ಹೇಳಿದರು.

ಕಳೆದ ವರ್ಷ ದಸರಾ ಆಚರಣೆಗೆ ₹30 ಕೋಟಿ ನೀಡಲಾಗಿತ್ತು. ಈ ಬಾರಿ ಹೆಚ್ಚು ಅನುದಾನ ಒದಗಿಸಲಾಗುವುದು. ಜಂಬೂ ಸವಾರಿಯಲ್ಲಿ ಭಾಗವಹಿಸುವ ಟ್ಯಾಬ್ಲೋಗಳು ಹೆಚ್ಚು ಆಕರ್ಷಕ ಮತ್ತು ವೈವಿಧ್ಯಮಯವಾಗಿರಬೇಕು ಎಂದು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

21 ದಿನಗಳ ದೀಪಾಲಂಕಾರ

ಈ ಬಾರಿ ದಸರಾ ದೀಪಾಲಂಕಾರ 21 ದಿನಗಳವರೆಗೆ ವಿಸ್ತರಿಸಲು ನಿರ್ಧರಿಸಲಾಗಿದೆ. ಮೈಸೂರಿನ ಪ್ರಮುಖ ರಸ್ತೆಗಳು ವೃತ್ತಗಳು ವಿದ್ಯುದ್ದೀಪಗಳಿಂದ ಝಗಮಗಿಸಲಿವೆ.

ಇಂಧನ ಸಚಿವ ಕೆ.ಜೆ.ಜಾರ್ಜ್ ಅವರ ನೇತೃತ್ವದಲ್ಲಿ ಬೆಳಕು ಭವನದಲ್ಲಿ ನಡೆದ ಸಭೆಯಲ್ಲಿ, ದಸರಾ ಉತ್ಸವ ಆರಂಭಕ್ಕೆ ಒಂದು ದಿನ ಮೊದಲು ಅಂದರೆ, ಅ. 2 ರಿಂದ ಒಟ್ಟು 21 ದಿನಗಳು ದೀಪಾಲಂಕಾರ ಮಾಡಲು ನಿರ್ಧರಿಸಲಾಯಿತು.

ಮೈಸೂರಿನಲ್ಲಿ 130 ಕಿ.ಮೀ ರಸ್ತೆಗಳ ಉದ್ದಕ್ಕೂ ದೀಪಗಳು ಬೆಳಗಲಿವೆ. 84 ವೃತ್ತಗಳು, ಉದ್ಯಾನವನ ಸೇರಿ ಪ್ರಮುಖ 64 ಸ್ಥಳಗಳಲ್ಲಿ ವಿದ್ಯುತ್ ದೀಪಗಳು ಕಂಗೊಳಿಸಲಿವೆ.

ಅಕ್ಟೋಬರ್ 3ರಂದು ಚಾಮುಂಡಿ ಬೆಟ್ಟದಲ್ಲಿ ಬೆಳಿಗ್ಗೆ 9.15ಕ್ಕೆ ದಸರಾ ಮಹೋತ್ಸವಕ್ಕೆ ಚಾಲನೆ ದೊರೆಯಲಿದೆ. ಉದ್ಘಾಟನೆ ದಿನವೇ ವಸ್ತು ಪ್ರದರ್ಶನ ಕೂಡಾ ಆರಂಭಿಸಲು ಸೂಚಿಸಲಾಗಿದೆ. ಎಲ್ಲಾ ಮಳಿಗೆಗಳು ಉದ್ಘಾಟನೆಯಂದೇ ಸಜ್ಜುಗೊಳಿಸಲು ಇಲಾಖಾ ಕಾರ್ಯದರ್ಶಿಗಳಿಗೆ ಸೂಚನೆ ನೀಡಲಾಗಿದೆ. ವಸ್ತು ಪ್ರದರ್ಶನದಲ್ಲಿ ಎಲ್ಲ ಇಲಾಖೆಗಳ ಮಳಿಗೆಗಳಲ್ಲಿ ಸರ್ಕಾರದ ಸಾಧನೆಗಳು, ಗ್ಯಾರಂಟಿ ಯೋಜನೆಗಳನ್ನು ಬಿಂಬಿಸುವ ಕೆಲಸ ಆಗಬೇಕು ಎಂದು ಅಧಿಕಾರಿಗಳಿಗೆ ಹೇಳಿದ್ದೇವೆಂದು ತಿಳಿಸಿದರು.

ಆಗಸ್ಟ್ 21ರಂದು ಬೆಳಿಗ್ಗೆ 10.10 ಗಂಟೆಯಿಂದ ಹುಣಸೂರು ತಾಲ್ಲೂಕಿನ ವೀರನಹೊಸಹಳ್ಳಿಯಲ್ಲಿ ಗಜಪೂಜೆ ಮಾಡಲಾಗುವುದು. ಅಕ್ಟೋಬರ್ 3 ರಿಂದ 12 ರವರೆಗೆ ನಡೆಯಲಿದೆ. ಸಂಪ್ರದಾಯದಂತೆ 9 ದಿನ ಕಾರ್ಯಕ್ರಮಗಳು ಹಾಗೂ 10 ನೇ ದಿನ ಜಂಬೂ ಸವಾರಿ ಏರ್ಪಾಡು ಮಾಡಲಾಗುತ್ತದೆ. ಅಕ್ಟೋಬರ್ 12 ರಂದು ಮಧ್ಯಾಹ್ನ 1.41 ರಿಂದ 2.10 ಗಂಟೆಯವರೆಗೆ ಜಂಬೂ ಸವಾರಿ, ನಂದಿ ಧ್ವಜ ಪೂಜೆ ಹಾಗೂ ಸಂಜೆ 4 ಗಂಟೆಯಿಂದ ಪುಷ್ಪಾರ್ಚನೆ ನಡೆಯಲಿದೆ ಎಂದು ಸಿದ್ದರಾಮಯ್ಯ ವಿವರಿಸಿದರು.

ಪ್ರವಾಸಿಗರ ನೆರವಿಗಾಗಿ ಟೂರಿಸ್ಟ್ ಮಿತ್ರ ಮತ್ತು ಹೋಂಗಾರ್ಡ್‌ಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ನೇಮಕ ಮಾಡಲಾಗುವುದು. ಪಾರ್ಕಿಂಗ್, ಭದ್ರತಾ ವ್ಯವಸ್ಥೆಯಲ್ಲಿ ಯಾವುದೇ ಲೋಪ ಆಗದಂತೆ ಸಿದ್ಧತೆ ಕೈಗೊಳ್ಳುವಂತೆ ಪೊಲೀಸ್ ಇಲಾಖೆಗೆ ಸೂಚನೆ ನೀಡಲಾಗಿದೆ. ಪ್ರವಾಸೋದ್ಯಮ ಇಲಾಖೆಯಿಂದ ಮೈಸೂರನ್ನು ಕೇಂದ್ರವಾಗಿರಿಸಿಕೊಂಡು ಕೆಎಸ್‌ಆರ್‌ಟಿಸಿ ಸಹಯೋಗದೊಂದಿಗೆ ಪ್ರವಾಸಿ ಸರ್ಕ್ಯೂಟ್ ರೂಪಿಸಲಾಗುವುದು ಎಂದು ಅವರು ಹೇಳಿದರು.

ಸಾಂಸ್ಕೃತಿಕ ಕಾರ್ಯಕ್ರಮ, ವಸ್ತುಪ್ರದರ್ಶನ, ದೀಪಾಲಂಕಾರ, ಆಹಾರ ಮೇಳ ಮತ್ತಿತ್ತರ ಕಾರ್ಯಕ್ರಮಗಳನ್ನು ಅತ್ಯಂತ ವ್ಯವಸ್ಥಿತವಾಗಿ, ಅರ್ಥಪೂರ್ಣವಾಗಿ ಆಯೋಜಿಸಬೇಕು. ಸ್ಥಳೀಯರಿಗೆ ಪ್ರೋತ್ಸಾಹ ಕೊಡಬೇಕಾಗಿರುವುದರಿಂದ ಸ್ಥಳೀಯ ಕಲಾವಿದರಿಗೆ ಹೆಚ್ಚು ಅವಕಾಶ ದೊರಕಿಸಬೇಕು. ಇದೇ ವೇಳೆ ದಸರಾಕ್ಕೆ ಹೊಸ ರೂಪ ನೀಡುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಲು ಸೂಚನೆ ನೀಡಲಾಗಿದೆ ಎಂದರು.

ದಸರಾ ಉದ್ಘಾಟನೆಗೆ ಯಾರನ್ನು ಆಹ್ವಾನಿಸಬೇಕು ಎಂಬುದನ್ನು ಮುಖ್ಯಮಂತ್ರಿ ಅವರ ವಿವೇಚನೆಗೆ ಬಿಡಲು ಸಭೆ ನಿರ್ಧರಿಸಿದೆ.

ಅದಾನಿ ಸಮೂಹದ ಎಂಟು ಕಂಪನಿಗಳ ಷೇರಿನ ಮೌಲ್ಯ ಇಳಿಕೆ

ನವದೆಹಲಿ (ಪಿಟಿಐ): ಅದಾನಿ ಸಮೂಹದ 10 ಕಂಪನಿಗಳ ಪೈಕಿ 8 ಕಂಪನಿಗಳ ಷೇರಿನ ಮೌಲ್ಯ ಸೋಮವಾರ ಇಳಿಕೆಯಾಗಿದೆ.

ಅದಾನಿ ವಿಲ್ಮರ್ (ಶೇ4.14), ಅದಾನಿ ಟೋಟಲ್ ಗ್ಯಾಸ್ (ಶೇ3.88), ಅದಾನಿ ಎನರ್ಜಿ ಸಲ್ಯೂಷನ್ಸ್ (ಶೇ 3.70), ಎನ್‌ಡಿಟಿವಿ (ಶೇ 3.08), ಅದಾನಿ ಪೋರ್ಟ್ಸ್ (ಶೇ 2.02), ಅದಾನಿ ಎಂಟರ್‌ಪ್ರೈಸಸ್ (ಶೇ 1.09), ಎಸಿಸಿ (ಶೇ 0.97) ಮತ್ತು ಅದಾನಿ ಪವರ್ (ಶೇ 0.65) ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ. ಅಂಬುಜಾ ಸಿಮೆಂಟ್ಸ್ (ಶೇ 0.55), ಅದಾನಿ ಗ್ರೀನ್ ಎನರ್ಜಿ (ಶೇ 0.22) ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಇಳಿಕೆಗೆ ಕಾರಣವೇನು?: ಅದಾನಿ ಸಮೂಹದ ಸಾಗರೋತ್ತರ ಹೂಡಿಕೆಯಲ್ಲಿ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ಅಧ್ಯಕ್ಷೆ ಮಾಧವಿ ಪುರಿ ಬುಚ್ ಮತ್ತು ಅವರ ಪತಿ ಧವಲ್ ಬುಚ್ ಪಾಲುದಾರಿಕೆ ಹೊಂದಿದ್ದರು ಎಂದು ಅಮೆರಿಕದ ಶಾರ್ಟ್ ಸೆಲ್ಲರ್ ಕಂಪನಿ ಹಿಂಡೆನ್‌ಬರ್ಗ್ ರಿಸರ್ಚ್ ಆರೋಪಿಸಿದೆ. ಇದರಿಂದ ಅದಾನಿ ಸಮೂಹದ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಷೇರು ಸೂಚ್ಯಂಕ ಇಳಿಕೆ: ಸೆನ್ಸೆಕ್ಸ್ 56 ಅಂಶ ಇಳಿಕೆಯಾಗಿ, 79,648ಕ್ಕೆ ಅಂತ್ಯಗೊಂಡಿತು. ನಿಫ್ಟಿ 20 ಅಂಶ ಕಡಿಮೆಯಾಗಿ, 24,347ಕ್ಕೆ ಸ್ಥಿರಗೊಂಡಿದೆ.

ಆರು ರಂಗಾಯಣಗಳಿಗೆ ನಿರ್ದೇಶಕರ ನೇಮಕ



ಸತೀಶ್ ತಿಪಟೂರು | ರಾಜು ತಾಳಿಕೋಟೆ | ಪ್ರಸನ್ನ ಡಿ. ಸಾಗರ | ಡಾ. ಸುಜಾತ ಜಂಗಮ ಶೆಟ್ಟಿ. | ವೆಂಕಟರಮಣ ಐತಾಳ | ಮಲ್ಲಿಕಾರ್ಜುನ ಕಡಕೋಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಆರು ರಂಗಾಯಣಗಳಿಗೆ ನಿರ್ದೇಶಕರನ್ನು ನೇಮಕ ಮಾಡಿ ರಾಜ್ಯ ಸರ್ಕಾರ ಸೋಮವಾರ ಆದೇಶ ಹೊರಡಿಸಿದೆ.

ಮೈಸೂರು ರಂಗಾಯಣಕ್ಕೆ ಸತೀಶ್ ತಿಪಟೂರು, ಧಾರವಾಡಕ್ಕೆ ರಾಜು ತಾಳಿಕೋಟೆ, ಶಿವಮೊಗ್ಗಕ್ಕೆ ಪ್ರಸನ್ನ ಡಿ. ಸಾಗರ, ಕಲಬುರಗಿ ರಂಗಾಯಣಕ್ಕೆ ಡಾ. ಸುಜಾತ ಜಂಗಮ ಶೆಟ್ಟಿ, ಕಾರ್ಕಳದ ಯಕ್ಷ ರಂಗಾಯಣಕ್ಕೆ ವೆಂಕಟರಮಣ ಐತಾಳ ಹಾಗೂ ದಾವಣಗೆರೆಯ ವೃತ್ತಿ ರಂಗಭೂಮಿ ರಂಗಾಯಣಕ್ಕೆ ಮಲ್ಲಿಕಾರ್ಜುನ ಕಡಕೋಳ ಅವರನ್ನು ನಿರ್ದೇಶಕರನ್ನಾಗಿ ನೇಮಕ ಮಾಡಲಾಗಿದೆ.

ಸೇನೆಯ ಕಸ್ಟಡಿಗೆ ಐಎಸ್‌ಐ ಮಾಜಿ ಮುಖ್ಯಸ್ಥ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐನ ಮಾಜಿ ಮುಖ್ಯಸ್ಥ ಲೆಫ್ಟಿನೆಂಟ್ ಜನರಲ್ (ನಿವೃತ್ತ) ಫೈಜ್ ಹಮೀದ್ ಅವರನ್ನು ತಮ್ಮ ವಶಕ್ಕೆ ತೆಗೆದುಕೊಂಡದ್ದಾಗಿ ಪಾಕ್ ಸೇನೆ ಸೋಮವಾರ ಹೇಳಿದೆ.

ಗೃಹ ನಿರ್ಮಾಣ ಯೋಜನೆಯಲ್ಲಿ ನಡೆದಿದೆ ಎನ್ನಲಾದ ಹಗರಣಕ್ಕೆ ಸಂಬಂಧಿಸಿದಂತೆ ಫೈಜ್ ಅವರು ಸೇನಾ ವಿಚಾರಣೆ ಎದುರಿಸಲಿದ್ದಾರೆ. ‘ಫೈಜ್ ಹಮೀದ್ ವಿರುದ್ಧದ ಆರೋಪಗಳ ಸತ್ಯಾಸತ್ಯತೆ ಖಚಿತಪಡಿಸಿಕೊಳ್ಳಲು, ಪಾಕಿಸ್ತಾನದ ಸುಪ್ರೀಂ ಕೋರ್ಟ್‌ನ ಆದೇಶದ ಪ್ರಕಾರ ಪಾಕ್ ಸೇನೆಯು ವಿವರವಾದ ತನಿಖೆ ಕೈಗೊಂಡಿದೆ’ ಎಂದು ಸೇನೆಯ ಮೂಲಗಳು ಹೇಳಿವೆ.

ಬಾಂಗ್ಲಾದಲ್ಲಿ ಹಿಂದೂಗಳ ಮೇಲೆ ದಾಳಿ: ಪ್ರತಿಭಟನೆ

ಹ್ಯೂಸ್ಟನ್ (ಪಿಟಿಐ): ಬಾಂಗ್ಲಾದೇಶದಲ್ಲಿನ ಹಿಂದೂಗಳು ಮತ್ತು ಇತರ ಅಲ್ಪಸಂಖ್ಯಾತರನ್ನು ಗುರಿಯಾಗಿಸಿಕೊಂಡು ಇಸ್ಲಾಮಿಕ್ ಉಗ್ರರು ನಡೆಸುತ್ತಿರುವ ದಾಳಿಯನ್ನು ಖಂಡಿಸಿ ಭಾರತ ಮೂಲದ 300ಕ್ಕೂ ಹೆಚ್ಚು ಅಮೆರಿಕನ್ನರು ಹಾಗೂ ಬಾಂಗ್ಲಾ ಮೂಲದ ಹಿಂದೂಗಳು ಇಲ್ಲಿನ ಶುಗರ್ ಲ್ಯಾಂಡ್ ಸಿಟಿ ಹಾಲ್‌ನಲ್ಲಿ ಭಾನುವಾರ ಪ್ರತಿಭಟನೆ ನಡೆಸಿದರು.

ಮತ್ತಷ್ಟು ದೌರ್ಜನ್ಯ ನಡೆಯುವುದನ್ನು ತಡೆಗಟ್ಟಲು ,ಬಾಂಗ್ಲಾದೇಶದಲ್ಲಿನ ಅಲ್ಪಸಂಖ್ಯಾತ ಸಮುದಾಯಗಳನ್ನು ರಕ್ಷಿಸಲು ಬೈಡನ್ ಆಡಳಿತ ತಕ್ಷಣವೇ ಮಧ್ಯಪ್ರವೇಶಿಸಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಬಾಂಗ್ಲಾದೇಶ: ಪ್ರತಿಭಟನೆ ವೇಳೆ ರೈಫಲ್ ಲೂಟಿ

ಶಸ್ತ್ರಾಸ್ತ್ರ ಒಪ್ಪಿಸಲು 19ರ ಗಡುವು

ಢಾಕಾ (ಪಿಟಿಐ): ಪ್ರತಿಭಟನೆಯ ಸಮಯದಲ್ಲಿ ಪೊಲೀಸ್ ಠಾಣೆಗಳಿಂದ ಲೂಟಿ ಮಾಡಿರುವ ರೈಫಲ್‌ಗಳು ಒಳಗೊಂಡಂತೆ ಅಕ್ರಮವಾಗಿ ಇರಿಸಿಕೊಂಡಿರುವ ಶಸ್ತ್ರಾಸ್ತ್ರಗಳನ್ನು ಆಗಸ್ಟ್ 19ರ ಒಳಗಾಗಿ ಒಪ್ಪಿಸುವಂತೆ ಬಾಂಗ್ಲಾದೇಶದ ಗೃಹ ವ್ಯವಹಾರಗಳ ಸಲಹೆಗಾರ ಬ್ರಿಗೇಡಿಯರ್ ಜನರಲ್ (ನಿವೃತ್ತ) ಎಂ.ಸಖಾವತ್ ಹುಸೇನ್ ಅವರು ಗಡುವು ನೀಡಿದ್ದಾರೆ.

ತಮ್ಮಲ್ಲಿರುವ ಶಸ್ತ್ರಾಸ್ತ್ರಗಳನ್ನು ಸಮೀಪದ ಪೊಲೀಸ್ ಠಾಣೆಗಳಿಗೆ ಹಿಂತಿರುಗಿಸಬೇಕು. ನಿಗದಿತ ಗಡುವಿನ ಬಳಿಕ ಅಧಿಕಾರಿಗಳು ಶೋಧ ಕಾರ್ಯ ನಡೆಸಲಿದ್ದು, ಆ ವೇಳೆ ಯಾರಾದರೂ ಅನಧಿಕೃತವಾಗಿ ಶಸ್ತ್ರಾಸ್ತ್ರಗಳನ್ನು ಹೊಂದಿದ್ದರೆ ಅವರ ವಿರುದ್ಧ ಪ್ರಕರಣ ದಾಖಲಿಸಲಾಗುವುದು ಎಂದು ಹುಸೇನ್ ಹೇಳಿರುವುದಾಗಿ ‘ಡೈಲಿ ಸ್ಟಾರ್’ ದಿನಪತ್ರಿಕೆ ವರದಿ ಮಾಡಿದೆ.

ಇಲ್ಲಿನ ಸೇನಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಅರೆಸೇನಾ ಪಡೆಯ ಸಿಬ್ಬಂದಿಯನ್ನು ಸೋಮವಾರ ಭೇಟಿ ಮಾಡಿದ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು. ಈಚೆಗೆ ನಡೆದ ಹಿಂಸಾಚಾರದ ವೇಳೆ ಅರೆಸೇನಾ ಪಡೆಯ ಹಲವು ಸಿಬ್ಬಂದಿ ಗಾಯಗೊಂಡಿದ್ದರು.

ದೇಶದಾದ್ಯಂತ ನಡೆದ ಪ್ರತಿಭಟನೆಯಲ್ಲಿ ವಿದ್ಯಾರ್ಥಿಗಳೂ ಒಳಗೊಂಡಂತೆ ಸುಮಾರು 500 ಮಂದಿ ಮೃತಪಟ್ಟಿದ್ದು, ಸಾವಿರಾರು ಮಂದಿ ಗಾಯಗೊಂಡಿದ್ದಾರೆ ಎಂದು ಅವರು ಮಾಹಿತಿ ನೀಡಿದರು. ‘ಯುವಕನೊಬ್ಬ 7.62 ಎಂಎಂ ರೈಫಲ್ ಅನ್ನು ಕೊಂಡೊಯ್ಯುತ್ತಿರುವ ದೃಶ್ಯವಿರುವ ವಿಡಿಯೊ ಹರಿದಾಡಿದೆ. ಅಂದರೆ ಅವರು ಇನ್ನೂ ರೈಫಲ್ ಒಪ್ಪಿಸಿಲ್ಲ. ಭಯದಿಂದಾಗಿ ನೀವು ಬಂದೂಕು ವಾಪಸ್ ಮಾಡದಿದ್ದರೆ, ಬೇರೆಯವರ ಮೂಲಕ ಒಪ್ಪಿಸಿ’ ಎಂದು ಹೇಳಿದರು.

ಪೊಲೀಸರ ಮುಷ್ಕರ ಅಂತ್ಯ: ಬಾಂಗ್ಲಾದೇಶದ ಪೊಲೀಸರು ತಮ್ಮ ಮುಷ್ಕರ ಅಂತ್ಯಗೊಳಿಸಲು ಒಪ್ಪಿದ್ದು, ಸೋಮವಾರ ಕರ್ತವ್ಯಕ್ಕೆ ಹಾಜರಾದರು ಎಂದು ಮಾಧ್ಯಮಗಳು ವರದಿ ಮಾಡಿವೆ. ಪೊಲೀಸರು ಮತ್ತು ವಿದ್ಯಾರ್ಥಿಗಳ ನಡುವೆ ದೇಶದಾದ್ಯಂತ ಘರ್ಷಣೆ ನಡೆದ ಹಿನ್ನೆಲೆಯಲ್ಲಿ ಬಾಂಗ್ಲಾ ಪೊಲೀಸರು ಆಗಸ್ಟ್ 6ರಿಂದ ಮುಷ್ಕರ ಆರಂಭಿಸಿ, ಕರ್ತವ್ಯದಿಂದ ದೂರವುಳಿದಿದ್ದರು.



ಬಾಂಗ್ಲಾದೇಶ ಪೊಲೀಸರು ಮುಷ್ಕರ ಅಂತ್ಯಗೊಳಿಸಿ ಸೋಮವಾರ ಕರ್ತವ್ಯಕ್ಕೆ ಹಾಜರಾದರು —ಎಎಫ್‌ಪಿ ಚಿತ್ರ

ಭ್ರಷ್ಟಾಚಾರ ಪ್ರಕರಣ: ಯೂನಸ್ ದೋಷಮುಕ್ತ

ಬಾಂಗ್ಲಾದೇಶದ ಮಧ್ಯಂತರ ಸರ್ಕಾರದ ಮುಖ್ಯಸ್ಥ ಮೊಹಮ್ಮದ್ ಯೂನಸ್ ಅವರನ್ನು ಭ್ರಷ್ಟಾಚಾರ ಪ್ರಕರಣದಲ್ಲಿ ದೋಷಮುಕ್ತಗೊಳಿಸಲಾಗಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ. ಯೂನಸ್ ಅವರು ಮಧ್ಯಂತರ ಸರ್ಕಾರದ ಮುಖ್ಯಸ್ಥರಾಗಿ ಪ್ರಮಾಣ ವಚನ ಸ್ವೀಕರಿಸಿದ ಮೂರು ದಿನಗಳ ಬಳಿಕ ಈ ಬೆಳವಣಿಗೆ ನಡೆದಿದೆ.

ಗ್ರಾಮೀಣ್ ಟೆಲಿಕಾಂ ವರ್ಕರ್ಸ್ ಮತ್ತು ಎಂಪ್ಲಾಯೀಸ್ ವೆಲ್ಫೇರ್ ಫಂಡ್‌ನ ಹಣ ದುರುಪಯೋಗಪಡಿಸಿಕೊಂಡ ಆರೋಪದಲ್ಲಿ ಭ್ರಷ್ಟಾಚಾರ ನಿಗ್ರಹ ಆಯೋಗವು ಅವರ ವಿರುದ್ಧ ಈ ಹಿಂದೆ ಪ್ರಕರಣ ದಾಖಲಿಸಿಕೊಂಡಿತ್ತು.

ಯೂನಸ್ ವಿರುದ್ಧದ ಪ್ರಕರಣವನ್ನು ಕೈಬಿಡಬೇಕೆಂದು ಕೋರಿ ಆಯೋಗವು ಸಲ್ಲಿಸಿದ್ದ ಮನವಿಯನ್ನು ಪುರಸ್ಕರಿಸಿದ ಢಾಕಾದ ವಿಶೇಷ ನ್ಯಾಯಾಲಯದ ನ್ಯಾಯಾಧೀಶರು, ಅವರನ್ನು ದೋಷಮುಕ್ತಗೊಳಿಸಿದರು.

ದುಷ್ಕೃತ್ಯ ಸಹಿಸಲ್ಲ: ಸಿಜೆ

ನ್ಯಾಯಾಂಗ ವ್ಯವಸ್ಥೆಯಲ್ಲಿದ್ದುಕೊಂಡು ಯಾರಾದರೂ ‘ದುಷ್ಕೃತ್ಯ’ದಲ್ಲಿ ತೊಡಗಿದರೆ ಅದನ್ನು ಸಹಿಸುವುದಿಲ್ಲ ಎಂದು ಬಾಂಗ್ಲಾದೇಶ ಸುಪ್ರೀಂ ಕೋರ್ಟ್‌ನ ನೂತನ ಮುಖ್ಯ ನ್ಯಾಯಮೂರ್ತಿ ಸೈಯದ್ ರೆಫಾತ್ ಅಹ್ಮದ್ ಎಚ್ಚರಿಸಿದ್ದಾರೆ.

ಅಟಾರ್ನಿ ಜನರಲ್ ಅವರ ಕಚೇರಿಯಲ್ಲಿ ಆಯೋಜಿಸಿದ್ದ ಔತಣಕೂಟದಲ್ಲಿ ಮಾತನಾಡಿದ ಅವರು, ‘ದೇಶದಲ್ಲಿ ನ್ಯಾಯದ ಬದಲಾಗಿ ಇಷ್ಟು ದಿನ ಚಾಲ್ತಿಯಲ್ಲಿದ್ದ ದಬ್ಬಾಳಿಕೆಯ ನೀತಿ ಈಗ ಅಂತ್ಯಗೊಂಡಿದೆ. ಆದ್ದರಿಂದ ನ್ಯಾಯಾಂಗದ ವಿರುದ್ಧವಾಗಿ ಯಾರಾದರೂ ಕಾನೂನುಬಾಹಿರ ಚಟುವಟಿಕೆಯಲ್ಲಿ ಭಾಗಿಯಾಗಿರುವುದು ಕಂಡುಬಂದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು’ ಎಂದರು.

‘ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಸೇರಿದಂತೆ ಶೇಖ್ ಹಸೀನಾ ಅವರ ಸರ್ಕಾರವನ್ನು ಉರುಳಿಸುವ ಚಳವಳಿಯಲ್ಲಿ ಪಾಲ್ಗೊಂಡ ಎಲ್ಲರಿಗೂ ಅಭಿನಂದನೆ ಸಲ್ಲಿಸುತ್ತೇವೆ’ ಎಂದು ಹೇಳಿದರು.

ಬ್ರೈಲ್ ಲಿಪಿಯ ಡೆಬಿಟ್ ಕಾರ್ಡ್ ಬಿಡುಗಡೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಪಂಜಾಬ್ ನ್ಯಾಷನಲ್ ಬ್ಯಾಂಕ್ ದೃಷ್ಟಿದೋಷ ಇರುವ ಗ್ರಾಹಕರ ಅನುಕೂಲಕ್ಕಾಗಿ ಬ್ರೈಲ್ ಲಿಪಿಯಲ್ಲಿರುವ ‘ಪಿಎನ್‌ಬಿ ಅಂತಃದೃಷ್ಟಿ’ ಡೆಬಿಟ್ ಕಾರ್ಡ್ ಬಿಡುಗಡೆ ಮಾಡಿದೆ.

ಈ ಸಂಪರ್ಕರಹಿತ ನ್ಯಾಷನಲ್ ಕಾಮನ್ ಮೊಬಿಲಿಟಿ ಕಾರ್ಡ್‌ನ (ಎನ್‌ಸಿಎಂಸಿ) ಡೆಬಿಟ್ ಕಾರ್ಡ್ ರುಪೇ ನೆಟ್‌ವರ್ಕ್‌ನಲ್ಲಿ ಲಭ್ಯವಿದೆ ಎಂದು ಬ್ಯಾಂಕ್ ತಿಳಿಸಿದೆ.

ದೃಷ್ಟಿಹೀನರಿಗೆ ಆರ್ಥಿಕ ಸ್ವಾತಂತ್ರ್ಯ ಮತ್ತು ಅನುಕೂಲ ಕಲ್ಪಿಸಲು ಈ ಕಾರ್ಡ್‌ಗಳನ್ನು ವಿನ್ಯಾಸಗೊಳಿಸಲಾಗಿದೆ. ಇದರಿಂದ ಅವರು ಸುಲಭವಾಗಿ ಹಣಕಾಸು ನಿರ್ವಹಣೆ ಮಾಡಲು ಸಾಧ್ಯವಾಗಲಿದೆ ಎಂದು ಬ್ಯಾಂಕ್ ಹೇಳಿದೆ.



ಲಾಸ್ ಏಂಜಲೀಸ್ ಮೇಯರ್ ಕ್ಯಾರನ್ ಬಾಸ್ ಅವರಿಗೆ ಒಲಿಂಪಿಕ್ ಧ್ವಜ ಹಸ್ತಾಂತರಿಸಿದ ಐಒಸಿ ಅಧ್ಯಕ್ಷ ಥಾಮಸ್ ಬಾಕ್ –ಎಪಿ/ಪಿಟಿಐ ಚಿತ್ರ

ಪ್ಯಾರಿಸ್‌ನಲ್ಲಿ ಒಲಿಂಪಿಕ್ಸ್‌ಗೆ ಭವ್ಯ ತೆರೆ | 2028ರಲ್ಲಿ ಲಾಸ್ ಏಂಜಲೀಸ್‌ನಲ್ಲಿ ಕೂಟ

ಹಾಲಿವುಡ್ ಸನಿಹ ಕ್ರೀಡಾ ತಾರೆಗಳು!

ಲಾಸ್ ಏಂಜಲೀಸ್ (ಎಪಿ): ಭಾನುವಾರ ರಾತ್ರಿ ಪ್ಯಾರಿಸ್ ಒಲಿಂಪಿಕ್ಸ್ ಮುಕ್ತಾಯ ಸಮಾರಂಭದಲ್ಲಿ ಲಾಸ್ ಏಂಜಲೀಸ್ ಮೇಯರ್ ಕ್ಯಾರೆನ್ ಬಾಸ್ ಅವರಿಗೆ ಅಂತರರಾಷ್ಟ್ರೀಯ ಒಲಿಂಪಿಕ್ ಕಮಿಟಿ ಮುಖ್ಯಸ್ಥ ಥಾಮಸ್ ಬಾಕ್ ಒಲಿಂಪಿಕ್ ಧ್ವಜವನ್ನು ಹಸ್ತಾಂತರಿಸಿದರು. ಆಗ ದೀಪಾಲಂಕಾರದಲ್ಲಿ ಕಂಗೊಳಿಸುತ್ತಿದ್ದ ಕ್ರೀಡಾಂಗಣದ ಮೇಲ್ಛಾವಣಿಯಿಂದ ಇಳಿದು ಬಂದ ಹಾಲಿವುಡ್ ಸೂಪರ್‌ಸ್ಟಾರ್ ಟಾಮ್ ಕ್ರೂಸ್ ಬಾಸ್ ಅವರಿಂದ ಬಾವುಟ ಪಡೆದು ಸೂಪರ್ ಬೈಕ್ ಏರಿ ಹೊರಟರು.

2028ರ ಒಲಿಂಪಿಕ್ ಕೂಟವನ್ನು ಆಯೋಜಿಸಲಿರುವ ಲಾಸ್ ಏಂಜಲೀಸ್‌ನತ್ತ ಕ್ರೀಡಾಲೋಕದ ಪಯಣ ಶುರು ಎಂಬುದನ್ನು ಕ್ರೂಸ್ ಸಾಂಕೇತಿಕವಾಗಿ ತೋರಿಸಿದರು. ಹಾಲಿವುಡ್ ಇರುವ ನಗರ ಲಾಸ್ ಏಂಜಲೀಸ್ ಈಗ ಸಿನಿಪ್ರಿಯರನ್ನಷ್ಟೇ ಅಲ್ಲ. ಕ್ರೀಡಾ ತಾರೆಯರನ್ನೂ ಕೈಬೀಸಿ ಕರೆಯುತ್ತಿದೆ.

ಈ ನಗರವು ಒಲಿಂಪಿಕ್ ಕೂಟವನ್ನು ಮೂರನೇ ಬಾರಿ ಆಯೋಜಿಸಲಿದೆ. 1932 ಮತ್ತು 1984ರಲ್ಲಿ ಇಲ್ಲಿ ಒಲಿಂಪಿಕ್ಸ್ ಆಯೋಜನೆಯಾಗಿತ್ತು.

ಒಲಿಂಪಿಕ್ಸ್ ಆಯೋಜನೆಗಾಗಿ ನಡೆದ ಬಿಡ್ ಪ್ರಕ್ರಿಯೆಯಲ್ಲಿ ಪ್ಯಾರಿಸ್ ನಗರಕ್ಕೆ 2024ರ ಕೂಟ ಲಭಿಸಿತ್ತು. ಆಗ ಲಾಸ್ ಏಂಜಲೀಸ್‌ಗೆ 2028ರ ಕೂಟವನ್ನು 'ಸಮಾಧಾನಕರ ಬಹುಮಾನ' ಎಂದು ಪ್ರದಾನ ಮಾಡಲಾಗಿತ್ತು.

ಅಮೆರಿಕವು 1932ರಲ್ಲಿ ಕೂಟದ ಆತಿಥ್ಯಕ್ಕೆ ಬಿಡ್ ಸಲ್ಲಿಸಿದ್ದ ಏಕೈಕ ದೇಶವಾಗಿತ್ತು. ಆ ಸಂದರ್ಭದಲ್ಲಿ ಆರ್ಥಿಕ ಹಿಂಜರಿತ ಮತ್ತು ಪ್ರಮುಖ ರಾಷ್ಟ್ರಗಳ ತಂಡಗಳ ಗೈರುಹಾಜರಿ ಆ ಕೂಟವನ್ನು ಕಾಡಿದ್ದವು. ಈ ನಡುವೆಯೂ ಅಮೆರಿಕದ ಬೇಬ್ ಡಿಡ್‌ರಿಕ್ಸನ್ ಝುಹಾರಿಯಾಸ್ ಅವರು ಮಹಿಳೆಯರ ಜಾವೆಲಿನ್ ಮತ್ತು ಹರ್ಡಲ್ಸ್‌ನಲ್ಲಿ ಚಿನ್ನದ ಪದಕ ಜಯಿಸಿದ್ದರು.

ಆದರೆ 1984ರಲ್ಲಿ ಒಲಿಂಪಿಕ್ ಕೂಟವನ್ನು ಅದ್ದೂರಿಯಾಗಿ ಆಯೋಜಿಸಿದ ಲಾಸ್ ಏಂಜಲೀಸ್ ಅಪಾರ ಮೆಚ್ಚುಗೆಗೆ ಪಾತ್ರವಾಯಿತು. 'ಶ್ರೇಷ್ಠ ಒಲಿಂಪಿಕ್ಸ್' ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು. ಆಧುನಿಕತೆ ಮತ್ತು ಸಾಂಪ್ರದಾಯಿಕತೆ ಮೇಳೈಸಿದ್ದ ಕಾರ್ಯಕ್ರಮಗಳು ಗಮನ ಸೆಳೆದವು. ಹಾಲಿವುಡ್ ತಾರೆಗಳು ವಿಜೃಂಭಿಸಿದರು. ಡೆಕಥ್ಲಾನ್ ಚಾಂಪಿಯನ್ ರೆಫರ್ ಜಾನ್ಸನ್ ಕ್ರೀಡಾಜ್ಯೋತಿಯನ್ನು ಬೆಳಗಿದ್ದರು. ಅದಕ್ಕಾಗಿ ವಿನೂತನವಾದ ಜೆಟ್‌ಪ್ಯಾಕ್ ಮಾಡಲಾಗಿತ್ತು. ಈ ಕಾರ್ಯಕ್ರಮಕ್ಕೆ 'ಸ್ಟಾರ್ ವಾರ್ಸ್' ರೂವಾರಿ ಜಾನ್ ವಿಲಿಯಮ್ಸ್ ಅವರು ಸಂಗೀತ ನೀಡಿದ್ದರು.

ಪೌರ್ವಾತ್ಯ ದೇಶಗಳು ಈ ಕೂಟವನ್ನು ಬಹಿಷ್ಕರಿಸಿದ್ದವು. ಇದರಲ್ಲಿ ಅಮೆರಿಕವು ಪ್ರಾಬಲ್ಯ ಮೆರೆಯಿತು. ಕಾರ್ಲ್ ಲೂಯಿಸ್ ಮತ್ತು ಮೇರಿ ಲೌ ರೆಟನ್ ಅವರು ಕ್ರೀಡಾಪ್ರೇಮಿಗಳ ಮನೆಮಾತಾದರು. ಆಗಿನ್ನೂ ವೃತ್ತಿಜೀವನ ಆರಂಭಿಸಿದ್ದ ಮೈಕೆಲ್ ಜೋರ್ಡನ್ ಅಮೆರಿಕ ಪುರುಷರ ಬ್ಯಾಸ್ಕೆಟ್‌ಬಾಲ್ ತಂಡವು ಚಿನ್ನ ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸಿದರು.


'ನಮ್ಮಲ್ಲಿ ನಡೆಯುವ ಕೂಟವು ಆಧುನಿಕ ಒಲಿಂಪಿಕ್ಸ್‌ನ ಅತ್ಯಂತ ಯುವಚೈತನ್ಯದಿಂದ ಕೂಡಿರಬೇಕು. ಸಕಾರಾತ್ಮಕವಾದ ಕಾರ್ಯವಾಗಬೇಕು' ಎಂದು ಒಲಿಂಪಿಕ್ಸ್‌ನಲ್ಲಿ ನಾಲ್ಕು ಬಾರಿ ಚಿನ್ನ ಗೆದ್ದಿರುವ ಜೆನೆತ್ ಇವಾನ್ಸ್ ಹೇಳಿದ್ದಾರೆ. ಅವರು 2028ರ ಕೂಟದ ಸಂಘಟನಾ ಸಮಿತಿಯ ಮುಖ್ಯ ಅಥ್ಲೀಟ್ ಅಧಿಕಾರಿಯಾಗಿದ್ದಾರೆ.

ಕಟ್ಟಡ ನಿರ್ಮಾಣ ಇಲ್ಲ: ಪ್ಯಾರಿಸ್‌ನಲ್ಲಿ ವಿನೂತನ ರೀತಿಯ ಉದ್ಘಾಟನೆ ಸಮಾರಂಭ ನಡೆಸಿರುವುದು ಈಗ ಮುಂದಿನ ಒಲಿಂಪಿಕ್ಸ್‌ಗೂ ಹೊಸ ಯೋಜನೆ ರೂಪಿಸಲು ಕಾರಣವಾಗಲಿದೆ.

ಲಾಸ್ ಏಂಜಲೀಸ್‌ನಲ್ಲಿ ಈ ಮುಂಚೆಯೇ ಇರುವ ಕ್ರೀಡಾಗ್ರಾಮದ ಮೂಲಸೌಲಭ್ಯಗಳನ್ನೇ ನವೀಕರಣ ಮಾಡಿ ಬಳಕೆ ಮಾಡಲು ಉದ್ದೇಶಿಸಲಾಗಿದೆ.

'ಈ ಕ್ರೀಡಾಕೂಟದಲ್ಲಿ ಕಟ್ಟಡ ನಿರ್ಮಾಣ ಇಲ್ಲ' ಎಂದು ಇವಾನ್ಸ್ ಹೇಳಿದ್ದಾರೆ.

ಎರಡು ಎನ್‌ಎಫ್‌ಎಲ್ ತಂಡಗಳು ಇರುವ ತಾಣ ಇದು. ಇಲ್ಲಿಯ ಪ್ರತಿಷ್ಠಿತ ಸೊಫೈ ಕ್ರೀಡಾಂಗಣದಲ್ಲಿ ಸೂಪರ್ ಬೌಲ್ ಮತ್ತಿತರ ದೊಡ್ಡ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಅದನ್ನು ಒಲಿಂಪಿಕ್ಸ್‌ಗಾಗಿ ನವೀಕರಿಸಲಾಗುತ್ತಿದೆ.




ಪ್ಯಾರಿಸ್ ಒಲಿಂಪಿಕ್ಸ್ ಮುಕ್ತಾಯ ಸಮಾರಂಭದಲ್ಲಿ ಸಿಡಿಮದ್ದುಗಳ ಆಕರ್ಷಣೆ –ಎಎಫ್‌ಪಿ ಚಿತ್ರ



ಪ್ಯಾರಿಸ್ ಒಲಿಂಪಿಕ್ಸ್ ಸಮಾರೋಪ ಪಥಸಂಚಲನದಲ್ಲಿ ಭಾರತದ ಪಿ.ಆರ್. ಶ್ರೀಜೇಶ್ ಮತ್ತು ಮನು ಭಾಕರ್ –ಎಎಫ್‌ಪಿ ಚಿತ್ರ



ಸಮಾರೋಪ ಸಮಾರಂಭದಲ್ಲಿ ಫ್ರಾನ್ಸ್ ಅಧ್ಯಕ್ಷ ಮ್ಯಾಕ್ರಾನ್ –ಎಎಫ್‌ಪಿ ಚಿತ್ರ



ಸಮಾರೋಪದಲ್ಲಿ ಫ್ರೆಂಚ್ ಗಾಯಕಿ ಜಹೋ ಡಿ ಸಗಾಜನ್ –ಎಎಫ್‌ಪಿ ಚಿತ್ರ



ಒಲಿಂಪಿಕ್ ಜ್ಯೋತಿ ಹಿಡಿದು ನಿಂತಿರುವ ಫ್ರಾನ್ಸ್‌ನ ಈಜುಪಟು ಮಾರಶಾ

'ಒಲಿಂಪಿಕ್ಸ್ ಆಯೋಜನೆಯಿಂದ ಬದಲಾವಣೆ ಪರ್ವ'

'ಪ್ಯಾರಿಸ್‌ನಲ್ಲಿ ನಾನು ನೋಡಿದ್ದೇನೆ. ಒಲಿಂಪಿಕ್ಸ್ ಆಯೋಜನೆಯಿಂದ ದೇಶದಲ್ಲಿ ಬದಲಾವಣೆಯ ಪರ್ವ ಆರಂಭವಾಗುತ್ತದೆ' ಎಂದು ಮೇಯರ್ ಬಾಸ್ ಅವರು ಮಾಧ್ಯಮ ಪ್ರತಿನಿಧಿಗಳಿಗೆ ಹೇಳಿದರು.

1984ರಲ್ಲಿ ಮೇಯರ್ ಆಗಿದ್ದ ಟಾಮ್ ಬ್ರಾಡ್ಲಿ ಅವರು ಮಾಡಿದ್ದ ರೈಲು, ಬಸ್ ಮತ್ತು ಸಂಚಾರ ವ್ಯವಸ್ಥೆಯ ಯೋಜನೆಯಂತೆಯೇ ಈ ಬಾರಿಯೂ ಮಾಡಲಾಗುವುದು ಎಂದು ಹೇಳಿದ್ದಾರೆ. ಕೂಟದ ವೇಳೆಯಲ್ಲಿ ಸ್ಥಳೀಯ ಕಾರು ಮಾಲೀಕರು ತಮ್ಮ ಸಂಚಾರದ ಅವಧಿಯನ್ನು ಕಡಿತಗೊಳಿಸಬೇಕೆಂದು ಮನವಿ ಮಾಡಲು ನಗರಾಡಳಿತ ಸಿದ್ಧವಾಗಿದೆ.



ಒಲಿಂಪಿಕ್ಸ್ ಬಾವುಟವನ್ನು ಸೂಪರ್ ಬೈಕ್‌ನಲ್ಲಿ ತೆಗೆದುಕೊಂಡು ಹೊರಟ ಹಾಲಿವುಡ್ ತಾರೆ ಟಾಮ್ ಕ್ರೂಸ್ –ಎಪಿ/ಪಿಟಿಐ ಚಿತ್ರ

ಜರ್ಮನಿಗೆ ತೆರಳಿದ ನೀರಜ್ ಚೋಪ್ರಾ

ನವದೆಹಲಿ (ಪಿಟಿಐ): ಭಾರತದ ಜಾವೆಲಿನ್ ಥ್ರೋ ಅಥ್ಲೀಟ್ ಅವರು ಪ್ಯಾರಿಸ್‌ನಿಂದ ಜರ್ಮನಿಗೆ ತೆರಳಿದ್ದಾರೆ. ಆದ್ದರಿಂದ ಭಾರತಕ್ಕೆ ಮರಳುವುದು ವಿಳಂಬವಾಗಲಿದೆ ಎಂದು ಅವರ ಕುಟುಂಬದ ಮೂಲಗಳು ತಿಳಿಸಿವೆ.

ತಮ್ಮ ಗಾಯಕ್ಕೆ ಶಸ್ತ್ರಚಿಕಿತ್ಸೆಯ ಕುರಿತು ವೈದ್ಯರಿಂದ ಸಲಹೆ ಪಡೆಯಲು ನೀರಜ್ ಜರ್ಮನಿಗೆ ಹೋಗಿದ್ದಾರೆ. ಅವರು ಸುಮಾರು ಒಂದು ತಿಂಗಳ ನಂತರ ಭಾರತಕ್ಕೆ ಮರಳಬಹುದು ಎಂದು ಕುಟುಂಬದವರು ತಿಳಿಸಿದ್ದಾರೆ. ಈ ವಿಷಯವನ್ನು ಐಒಸಿ ಅಧಿಕಾರಿಗಳೂ ಖಚಿತಪಡಿಸಿದ್ದಾರೆ. 'ಅವರು ಜರ್ಮನಿಯಲ್ಲಿ ವೈದ್ಯರನ್ನು ಭೇಟಿ ಆಗಲಿದ್ದಾರೆಂಬುದು ಗೊತ್ತು. ಆದರೆ, ಉಳಿದ ಯಾವುದೇ ಮಾಹಿತಿ ಗಳು ಗೊತ್ತಿಲ್ಲ' ಎಂದು ನೀರಜ್ ಸಂಬಂಧಿಯೊಬ್ಬರು ಹೇಳಿದ್ದಾರೆ.

ಭಾರತದ ಚಿತ್ತ 2036ರ ಒಲಿಂಪಿಕ್ಸ್ ಬಿಡ್‌ನತ್ತ

ಪ್ಯಾರಿಸ್ (ಎಪಿ): ಭಾರತ ಸೇರಿದಂತೆ ಹಲವು ದೇಶಗಳು 2036ರ ಒಲಿಂಪಿಕ್ಸ್ ಆಯೋಜನೆ ಹಕ್ಕು ಪಡೆಯಲು ಸ್ಪರ್ಧೆಗಿಳಿದಿವೆ.

ಟರ್ಕಿ, ಕತಾರ್, ಸೌದಿ ಅರೇಬಿಯಾ, ಇಂಡೋನೇಷ್ಯಾ ದೇಶಗಳು ಪ್ರಮುಖವಾಗಿವೆ. ಈಗಾಗಲೇ 2028ರಲ್ಲಿ ಲಾಸ್ ಏಂಜಲೀಸ್ ಮತ್ತು 2032ರಲ್ಲಿ ಆಸ್ಟ್ರೇಲಿಯಾದ ಬ್ರಿಸ್ಬೇನ್ ನಗರಗಳು ಒಲಿಂಪಿಕ್ಸ್ ಆತಿಥ್ಯ ವಹಿಸಲಿವೆ. ಭಾರತವು 2036ರ ಕೂಟ ಆಯೋಜಿಸಲು ಆಸಕ್ತಿ ತೋರಿದೆ.

ಒಂದೊಮ್ಮೆ 2029ರೊಳಗೆ ಬಿಡ್ ಪ್ರಕ್ರಿಯೆ ಮುಗಿದರೆ, ಆಯೋಜನೆಯ ಅವಕಾಶ ಪಡೆಯುವ ದೇಶದ ಮುಂದೆ ದೊಡ್ಡ ಸವಾಲು ಎದುರಾಗಲಿದೆ. ಪ್ಯಾರಿಸ್ ಒಲಿಂಪಿಕ್ಸ್‌ನ ಅದ್ದೂರಿತನವನ್ನು ಮೀರಿಸುವಂತೆ ಆಯೋಜಿಸುವ ಸವಾಲು ಅದಾಗಿದೆ.

'ಐಒಸಿ ಏನು ನಿರೀಕ್ಷಿಸುತ್ತಿದೆ ಎಂದಷ್ಟೇ ನಾನು ಗಮನಿಸುತ್ತಿರುವೆ. ಅವರ ಕನಸೇನು ಮತ್ತು ಜಗತ್ತು ಏನು ಬಯಸುತ್ತದೆ ಎಂದು ನೋಡಬೇಕಿದೆ. ಬಿಡ್ ಗೆಲ್ಲಲು ಯಾವ ದೇಶಗಳು ಸ್ಪರ್ಧೆಯಲ್ಲಿವೆ ಎಂಬುದನ್ನು ನೋಡುತ್ತಿಲ್ಲ' ಎಂದು ಇಸ್ತಾನ್‌ಬುಲ್ ಮೇಯರ್ ಇಕ್ರೆಮ್ ಇಮಾಮೊಗ್ಲು ಅವರು ಸಂದರ್ಶನದಲ್ಲಿ ಹೇಳಿದ್ದಾರೆ.

ಐಒಸಿಯ ಮೂಲಗಳು ಹೇಳಿರುವ ಪ್ರಕಾರ ಈ ಪೈಪೋಟಿಯಲ್ಲಿರುವ ದೇಶಗಳ ಸಂಖ್ಯೆಯು ಎರಡಂಕಿಯಲ್ಲಿದೆ.

ಜುಲೈ 27ರಂದು ಪ್ಯಾರಿಸ್‌ನಲ್ಲಿ ಇಂಡಿಯಾ ಹೌಸ್ ಉದ್ಘಾಟನೆ ಸಂದರ್ಭದಲ್ಲಿ, ಐಒಸಿ ಸದಸ್ಯೆ ನೀತಾ ಅಂಬಾನಿ ಅವರು, 'ಒಲಿಂಪಿಕ್ಸ್ ಆಯೋಜನೆಯು 140 ಕೋಟಿ ಭಾರತೀಯರ ಕನಸು' ಎಂದಿದ್ದರು.

ಶ್ರೀಮಂತ ಉದ್ಯಮಿ ಅಂಬಾನಿಯವರ ಕುಟುಂಬ ಮತ್ತು ಪ್ರಧಾನಿ ನರೇಂದ್ರ ಮೋದಿಯವರ ವರ್ಚಸ್ಸು ಐಒಸಿಯ ಗಮನ ಸೆಳೆಯುವುದೇ ಎಂಬುದನ್ನು ನೋಡಬೇಕಿದೆ.



ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ರಿಲಯನ್ಸ್‌ನಿಂದ ಆರಂಭಿಸಲಾಗಿರುವ ಇಂಡಿಯಾ ಹೌಸ್‌ನಲ್ಲಿ ಐಒಸಿ ಸದಸ್ಯೆ ನೀತಾ ಅಂಬಾನಿ ಅವರು ಭಾರತ ಹಾಕಿ ತಂಡದ ಗೋಲ್‌ಕೀಪರ್ ಪಿ.ಆರ್. ಶ್ರೀಜೇಶ್ ಅವರನ್ನು ಗೌರವಿಸಿದರು. ಐಒಎ ಅಧ್ಯಕ್ಷೆ ಪಿ.ಟಿ. ಉಷಾ ಹಾಜರಿದ್ದರು –ಪಿಟಿಐ ಚಿತ್ರ

ತಿಗಣೆ ತಡೆಗೆ ಶ್ವಾನ ನಿಯೋಜಿಸಿದ ಕೊರಿಯಾ

ಇಂಚೆನ್: ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಿ ಮರಳುತ್ತಿರುವ ತನ್ನ ದೇಶದ ಕ್ರೀಡಾಪಟುಗಳು, ತರಬೇತುದಾರರು ಮತ್ತು ಅಭಿಮಾನಿಗಳ ಸರಂಜಾಮುಗಳೊಂದಿಗೆ ತಿಗಣೆಗಳು ಬರುವ ಸಾಧ್ಯತೆ ಇದೆ. ಅವುಗಳನ್ನು ಪತ್ತೆ ಹಚ್ಚಲು ವಿಮಾನ ನಿಲ್ದಾಣದಲ್ಲಿ ಸರಂಜಾಮುಗಳ ಪರೀಶೀಲನೆಗೆ ಶ್ವಾನವನ್ನು ನಿಯೋಜಿಸಲಾಗಿದೆ ಎಂದು ದಕ್ಷಿಣ ಕೊರಿಯಾದ ಅಧಿಕಾರಿಗಳು ತಿಳಿಸಿದ್ದಾರೆ.

ಬೀಗಲ್ ತಳಿಯ ಎರಡು ವರ್ಷದ ನಾಯಿ ಕೆಕೊ ಈ ಕಾರ್ಯಕ್ಕೆ ನಿಯೋಜನೆಗೊಂಡಿದೆ. ತಿಗಣೆಗಳ ದೇಹದಿಂದ ಹೊರಸೂಸುವ ಫೆರಮೋನ್‌ಗಳ ವಾಸನೆಯನ್ನು ಗ್ರಹಿಸುವ ತರಬೇತಿ ಪಡೆದ ದೇಶದ ಏಕೈಕ ನಾಯಿ ಕೆಕೊ. ಹೋಟೆಲ್‌ನ ಒಂದು ಕೊಠಡಿಯನ್ನು ಇದು ಕೇವಲ ಎರಡು ನಿಮಿಷಗಳಲ್ಲಿ ತಪಾಸಣೆ ನಡೆಸುವಷ್ಟರ ಮಟ್ಟಿಗೆ ಚುರುಕಾಗಿದೆ ಎಂದು ಸೆಸ್ಕೊ ಎಂಬ ಕೀಟನಿಯಂತ್ರಕ ಕಂಪನಿ ಹೇಳಿದೆ.

ಈ ಕೀಟನಿಯಂತ್ರಕ ಕಂಪನಿಯೊಂದಿಗೆ ದಕ್ಷಿಣ ಕೊರಿಯಾದ ಭದ್ರತೆ ಹಾಗೂ ಸಾರಿಗೆ ಸಚಿವಾಲಯವೂ ಈ ಕಾರ್ಯಾಚರಣೆಯಲ್ಲಿ ಭಾಗಿಯಾಗಿದೆ. ಇವರೊಂದಿಗೆ ರೋಗ ನಿಯಂತ್ರಕ ಮತ್ತು ಮುಂಜಾಗ್ರತಾ ಏಜೆನ್ಸಿ, ಇಂಚೆನ್ ಏರ್‌ಲೈನ್ಸ್ ಮತ್ತು ವಿಮಾನ ನಿಲ್ದಾಣಗಳು ಕೈಜೋಡಿಸಿವೆ. ವಿಮಾನ ನಿಲ್ದಾಣಕ್ಕೆ ಬಂದಿಳಿಯುವ ಪ್ರತಿಯೊಬ್ಬರ ತಪಾಸಣೆ ನಡೆಸಲಾಗುವುದು.

ಒಲಿಂಪಿಕ್ಸ್‌ಗೆ ಸಿದ್ಧತೆ ನಡೆಯುತ್ತಿದ್ದ ಸಂದರ್ಭದಲ್ಲಿ ಪ್ಯಾರಿಸ್‌ನಲ್ಲಿ ತಿಗಣೆ ಕಾಟದ ಕುರಿತು ಫ್ರಾನ್ಸ್ ರಾಷ್ಟ್ರದಾದ್ಯಂತ ಆತಂಕ ವ್ಯಕ್ತವಾಗಿತ್ತು. ಇವು ದೇಶವ್ಯಾಪಿ ಹರಡುವ ಭೀತಿಯನ್ನು ವ್ಯಕ್ತಪಡಿಸಿದ್ದ ಫ್ರಾನ್ಸ್, ಇವುಗಳ ನಿರ್ಮೂಲನೆಗೆ ಅಭಿಯಾನ ನಡೆಸಿತ್ತು.

'ಒಲಿಂಪಿಕ್ಸ್‌ಗಾಗಿ ಜಗತ್ತಿನ ಹಲವು ರಾಷ್ಟ್ರಗಳಿಂದ ಪ್ಯಾರಿಸ್‌ಗೆ ಜನರು ಬಂದಿದ್ದರು. ಹೀಗೆ ಬಂದವರ ಸಾಮಗ್ರಿಗಳೊಂದಿಗೆ ತಿಗಣೆಗಳೂ ಸೇರಿಕೊಳ್ಳುವ ಸಾಧ್ಯತೆಗಳಿವೆ. ಹೀಗಾಗಿ ಇವುಗಳು ದೇಶ ಪ್ರವೇಶಿಸದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ' ಎಂದು ದಕ್ಷಿಣ ಕೊರಿಯಾ ಸರ್ಕಾರ ತನ್ನ ಪ್ರಕಟಣೆಯಲ್ಲಿ ಹೇಳಿದೆ. ಕೆಕೊ ಹಾಗೂ ಅದರ ತಂಡ ಶುಕ್ರವಾರವೇ ವಿಮಾನ ನಿಲ್ದಾಣದಲ್ಲಿ ಬೀಡು ಬಿಟ್ಟಿದೆ. ಪ್ಯಾರಿಸ್‌ನಿಂದ ಮರಳುತ್ತಿರುವ ಕ್ರೀಡಾಪಟುಗಳು, ತರಬೇತುದಾರರ ತಪಾಸಣೆ ನಡೆಸುತ್ತಿದೆ. ಇದು ಸೆ. 8ರವರೆಗೂ ಮುಂದುವರಿಯಲಿದೆ ಎಂದು ಸರ್ಕಾರ ಹೇಳಿದೆ.

ಪ್ಯಾರಿಸ್ ಒಲಿಂಪಿಕ್ಸ್‌ಗೆ ದಕ್ಷಿಣ ಕೊರಿಯಾ ಈ ಬಾರಿ 144 ಅಥ್ಲೀಟ್‌ಗಳನ್ನು ಕಳುಹಿಸಿತ್ತು.

ಶಂಭು ಗಡಿ ತೆರವು: ಸಭೆಗೆ ಸುಪ್ರೀಂ ಕೋರ್ಟ್ ಸೂಚನೆ



ಪ್ರಜಾವಾಣಿ ವಾರ್ತೆ

ನವದೆಹಲಿ: ಶಂಭು ಗಡಿಯಲ್ಲಿ ರಸ್ತೆಗಳನ್ನು ಮತ್ತೆ ಭಾಗಶಃ ತೆರೆಯಲು ಪಂಜಾಬ್ ಮತ್ತು ಹರಿಯಾಣದ ಪೊಲೀಸ್ ಮುಖ್ಯಸ್ಥರು ಅಕ್ಕಪಕ್ಕದ ಜಿಲ್ಲೆಗಳ ಎಸ್‌ಪಿಗಳ ಜೊತೆ ವಾರದಲ್ಲಿ ಸಭೆ ನಡೆಸಬೇಕು ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ.

ಆಂಬುಲೆನ್ಸ್, ಅಗತ್ಯ ಸೇವೆಗಳ ವಾಹನ ಹಾಗೂ ಸ್ಥಳೀಯರ ಓಡಾಟಕ್ಕೆ ಅನುವು ಮಾಡಿಕೊಡಬೇಕೆಂದು ಸೂಚಿಸಿದೆ.

ಹೆದ್ದಾರಿಗಳು ಇರುವುದು ಟ್ರ್ಯಾಕ್ಟರ್‌ಗಳನ್ನು, ಟ್ರಾಲಿಗಳನ್ನು ಅಥವಾ ಜೆಸಿಬಿಗಳನ್ನು ನಿಲ್ಲಿಸಲು ಅಲ್ಲ ಎಂದು ಹೇಳಿರುವ ಕೋರ್ಟ್, ರೈತರು ಆ ಗಡಿಯಲ್ಲಿ ಬೀಡುಬಿಟ್ಟಿರುವ ಸಮಸ್ಯೆಗೆ ಸೌಹಾರ್ದಯುತವಾದ ಪರಿಹಾರವೊಂದು ಸಾಧ್ಯವಾಗಬಹುದು ಎಂಬ ಆಶಯ ವ್ಯಕ್ತಪಡಿಸಿದೆ. ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ಒದಗಿಸುವುದಕ್ಕೆ ಕಾನೂನಿನ ಖಾತರಿ ನೀಡಬೇಕು ಎಂಬ ಬೇಡಿಕೆಯೊಂದಿಗೆ ರೈತರು ಗಡಿಯಲ್ಲಿ ಬೀಡುಬಿಟ್ಟಿದ್ದಾರೆ.

ಆಂಬುಲೆನ್ಸ್‌ಗಳು, ಅಗತ್ಯ ಸೇವೆಗಳ ವಾಹನಗಳು ಹಾಗೂ ಸ್ಥಳೀಯರ ಸಂಚಾರಕ್ಕೆ ಶಂಭು ಗಡಿಯನ್ನು ಭಾಗಶಃ ತೆರೆಯುವ ಅಗತ್ಯ ಇದೆ ಎಂದು ವಿಭಾಗೀಯ ಪೀಠವು ಹೇಳಿದೆ.

190 ಸದಸ್ಯರ ತಂಡದಿಂದ ಕಾರ್ಯಾಚರಣೆ • ಪತ್ತೆಯಾಗದ 130 ಮಂದಿ

ಚಾಲಿಯಾರ್ ನದಿ ತೀರದಲ್ಲಿ ಶೋಧ ಕಾರ್ಯ

ವಯನಾಡ್/ತಿರುವನಂತಪುರ (ಪಿಟಿಐ): ವಯನಾಡ್ ಭೂಕುಸಿತದಲ್ಲಿ ಸಿಲುಕಿರುವವರಿಗಾಗಿ ಶೋಧ ಕಾರ್ಯಾಚರಣೆಯನ್ನು ಮುಂದುವರಿಸಲಾಗಿದೆ.

'ಸದ್ಯ ಚಾಲಿಯಾರ್ ನದಿ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿಯೇ ಶೋಧ ಕಾರ್ಯ ನಡೆಯಲಿದೆ' ಎಂದು ಎಡಿಜಿಪಿ ಎಂ.ಆರ್. ಅಜಿತ್ ಕುಮಾರ್ ಸೋಮವಾರ ತಿಳಿಸಿದರು.

'ಎನ್‌ಡಿಆರ್‌ಎಫ್, ಪೊಲೀಸರು, ಅಗ್ನಿಶಾಮಕ ದಳ ಸಿಬ್ಬಂದಿ, ಅರಣ್ಯ ಇಲಾಖೆ ಸಿಬ್ಬಂದಿ ಹಾಗೂ ಇತರ ಸಿಬ್ಬಂದಿಯನ್ನು ಒಳಗೊಂಡ 190 ಸದಸ್ಯರ ತಂಡವು ಶೋಧ ಕಾರ್ಯ ನಡೆಸುತ್ತಿದೆ' ಎಂದರು.

'ಭೂಕುಸಿತದಿಂದ ಹಾನಿಗೊಳಗಾದ ಎಲ್ಲ ಪ್ರದೇಶಗಳಲ್ಲಿಯೂ ಶೋಧ ಕಾರ್ಯ ನಡೆಸಲಾಗಿದೆ. ಚಾಲಿಯಾರ್ ನದಿಯ ನೀರಿನ ಮಟ್ಟವು ತುಸು ತಗ್ಗಿರುವುದರಿಂದ ಇನ್ನಷ್ಟು ಮೃತ ದೇಹಗಳು ದೊರೆಯುವ ಸಾಧ್ಯತೆ ಇದೆ. ಆದ್ದರಿಂದ, ಕೊನೆಯಲ್ಲಿ ಮತ್ತೊಮ್ಮೆ ಎಲ್ಲ ಪ್ರದೇಶಗಳಲ್ಲಿ ಶೋಧ ನಡೆಸಲಾಗುವುದು' ಎಂದರು.

ಶೋಧ ಕಾರ್ಯಕ್ಕೆ ಅನುಕೂಲವಾಗುವಂತೆ ದುರಂತ ಸಂಭವಿಸಿದ ಪ್ರದೇಶಗಳಲ್ಲಿ ಐದು ವಲಯಗಳನ್ನು ರಚಿಸಿಕೊಳ್ಳಲಾಗಿದೆ. ತೀವ್ರವಾಗಿ ಮಳೆ ಸುರಿಯುತ್ತಿದ್ದರಿಂದ ಭಾನುವಾರ ಶೋಧ ಕಾರ್ಯ ನಡೆಸಿರಲಿಲ್ಲ.

ಸಾವಿನ ಸಂಖ್ಯೆ 231ಕ್ಕೆ ಏರಿಕೆ: 'ದುರಂತದಲ್ಲಿ ಮೃತಪಟ್ಟವರ ಸಂಖ್ಯೆ 231ಕ್ಕೆ ಏರಿಕೆಯಾಗಿದೆ. ಸೋಮವಾರ ಒಂದು ಮೃತದೇಹ, ಮೂರು ಅಂಗಾಂಗಗಳು ಪತ್ತೆಯಾಗಿವೆ' ಎಂದು ಕಂದಾಯ ಸಚಿವ ಕೆ.ರಾಜನ್ ತಿಳಿಸಿದ್ದಾರೆ.

'ಮೃತದೇಹವು ನಿಲಂಬೂರು ಪ್ರದೇಶದಲ್ಲಿ ಹಾಗೂ ದೇಹದ ಭಾಗಗಳು ಕಾಂದನ್‌ಪಾರ ಎಂಬಲ್ಲಿ ದೊರೆತಿವೆ. 130 ಮಂದಿ ಇನ್ನೂ ನಾಪತ್ತೆಯಾಗಿದ್ದು, ಸುಮಾರು 51 ಮೃತ ದೇಹಗಳ ಗುರುತು ಪತ್ತೆಯಾಗಿಲ್ಲ' ಎಂದು ಅವರು ಮಾಹಿತಿ ನೀಡಿದ್ದಾರೆ.

ಕೇರಳ ಬ್ಯಾಂಕ್‌ನಿಂದ ಸಾಲ ಮನ್ನಾ

'ಭೂಕುಸಿತ ದುರಂತದಿಂದ ನಲುಗಿರುವ ಜನರ ಸಾಲವನ್ನು ಮನ್ನಾ ಮಾಡಲಾಗುವುದು' ಎಂದು ರಾಜ್ಯದ ವಿವಿಧ ಜಿಲ್ಲಾ ಸಹಕಾರಿ ಬ್ಯಾಂಕ್‌ಗಳ ಕೇಂದ್ರ ಬ್ಯಾಂಕ್ ಆಗಿರುವ 'ದಿ ಕೇರಳ ಬ್ಯಾಂಕ್' ಸೋಮವಾರ ಘೋಷಣೆ ಮಾಡಿದೆ.

ತನ್ನ ಚೂರಲ್‌ಮಲ ಶಾಖೆಯಲ್ಲಿ ಸಾಲ ಪಡೆದು, ದುರಂತದಲ್ಲಿ ಮೃತಪಟ್ಟಿರುವವರ ಸಾಲಗಳನ್ನು ಮನ್ನಾ ಮಾಡಲಾಗುವುದು. ಜೊತೆಗೆ, 'ಸಾಲ ಪಡೆಯಲು ತಮ್ಮ ಮನೆ ಆಸ್ತಿಗಳನ್ನು ಅಡ ಇಟ್ಟವರು ಒಂದೊಮ್ಮೆ ಈ ಎಲ್ಲವನ್ನೂ ದುರಂತದಲ್ಲಿ ಕಳೆದುಕೊಂಡಿದ್ದರೆ, ಅಂಥವರ ಸಾಲಗಳನ್ನೂ ಮನ್ನಾ ಮಾಡಲಾಗುವುದು' ಎಂದು ಬ್ಯಾಂಕ್ ಹೇಳಿದೆ.

ಈ ಬ್ಯಾಂಕ್ ಮುಖ್ಯಮಂತ್ರಿಯವರ ವಿಪತ್ತು ಪರಿಹಾರ ನಿಧಿಗೆ ₹50 ಲಕ್ಷ ದೇಣಿಗೆ ನೀಡಿದೆ.

'ಇದೇ ನಿಧಿಗೆ ನಮ್ಮೆಲ್ಲಾ ಉದ್ಯೋಗಿಗಳು ಸ್ವಯಂ ಪ್ರೇರಿತರಾಗಿ ತಮ್ಮ ಐದು ದಿನಗಳ ಸಂಬಳವನ್ನು ನೀಡಲು ನಿರ್ಧರಿಸಿದ್ದಾರೆ' ಎಂದು ಬ್ಯಾಂಕ್ ತಿಳಿಸಿದೆ.

ಹೊಸದಾಗಿ ಅಗತ್ಯ ದಾಖಲೆಗಳು

ಪಡಿತರ ಚೀಟಿ, ಆಧಾರ್ ಕಾರ್ಡ್, ಪಾಸ್‌ಬುಕ್, ಮತದಾರರ ಚೀಟಿ ಮುಂತಾದ ಅಗತ್ಯ ದಾಖಲೆಗಳನ್ನು ದುರಂತದ ಕಾರಣದಿಂದ ಕಳೆದುಕೊಂಡಿದ್ದರೆ, ಅಂಥ ದಾಖಲೆಗಳನ್ನು ಹೊಸದಾಗಿ ನೀಡಲು ವಿಶೇಷ ಶಿಬಿರವನ್ನು ವಯನಾಡ್‌ನಲ್ಲಿ ಸೋಮವಾರ ಆರಂಭಿಸಲಾಗಿದೆ.

AADHAAR

13.5 ಕೆ.ಜಿ 'ಹ್ಯಾಶಿಷ್ ಆಯಿಲ್' ಜಪ್ತಿ: ಇಬ್ಬರ ಬಂಧನ

ಬೆಂಗಳೂರಿಗೆ ಮಾದಕವಸ್ತು ಪೂರೈಕೆ

ಪ್ರಜಾವಾಣಿ ವಾರ್ತೆ

ಹೈದರಾಬಾದ್: 'ಹ್ಯಾಶಿಷ್ ಆಯಿಲ್' ಎಂಬ ಮಾದಕ ವಸ್ತುವನ್ನು ಬೆಂಗಳೂರಿಗೆ ಸಾಗಿಸುತ್ತಿದ್ದ ಇಬ್ಬರು ಅಂತರರಾಜ್ಯ ಪೆಡ್ಲರ್‌ಗಳನ್ನು ಭಾನುವಾರ ಹೈದರಾಬಾದ್‌ನಲ್ಲಿ ಬಂಧಿಸಲಾಗಿದೆ.

'ವಿಶಾಖಪಟ್ಟಣದಿಂದ ಹೈದರಾಬಾದ್ ಮೂಲಕ ಬೆಂಗಳೂರಿಗೆ ಸಾಗಿಸಲಾಗುತ್ತಿದ್ದ ಒಂದು ಕೋಟಿಗೂ ಹೆಚ್ಚು ಮೌಲ್ಯದ 13.5 ಕೆ.ಜಿ. 'ಹ್ಯಾಶಿಷ್ ಆಯಿಲ್' ಅನ್ನು ಜಪ್ತಿ ಮಾಡಲಾಗಿದೆ' ಎಂದು ರಾಚಕೊಂಡ ಪೊಲೀಸ್ ಕಮಿಷನರ್ ಜಿ. ಸುಧೀರ್ ಬಾಬು ಅವರು ಸೋಮವಾರ ತಿಳಿಸಿದ್ದಾರೆ.

ವಂಚುರ್ಭಾ ಕೊಂಡ ಬಾಬು(30) ಮತ್ತು ವಂಚುರ್ಭಾ ಬಾಲಕೃಷ್ಣ (20) ಬಂಧಿತ ಆರೋಪಿಗಳು. ಆರೋಪಿಗಳಿಬ್ಬರು ಆಂಧ್ರಪ್ರದೇಶದವರಾಗಿದ್ದು, ಒಂದೇ ಕುಟುಂಬಕ್ಕೆ ಸೇರಿದ್ದಾರೆ. ರೈತರಾಗಿರುವ ಇವರು ಸುಲಭವಾಗಿ ಹಣ ಸಂಪಾದಿಸುವ ಆಸೆಯಿಂದ ಮಾದಕವಸ್ತುಗಳ ಕಳ್ಳ ಸಾಗಾಣಿಕೆ ಜಾಲದಲ್ಲಿ ತೊಡಗಿಸಿಕೊಂಡಿದ್ದರು ಎಂದು ತಿಳಿಸಿದ್ದಾರೆ.

'ಆರೋಪಿಗಳು ಆಂಧ್ರಪ್ರದೇಶ ಮತ್ತು ಒಡಿಶಾದಿಂದ 'ಹ್ಯಾಶಿಷ್ ಆಯಿಲ್' ಅನ್ನು ಸಂಗ್ರಹಿಸಿ, ಬೆಂಗಳೂರಿನಲ್ಲಿ ಮಾರಾಟ ಮಾಡುತ್ತಿದ್ದರು' ಎಂದು ಮಾಹಿತಿ ನೀಡಿದ್ದಾರೆ.

'ಇತ್ತೀಚೆಗೆ ಬೆಂಗಳೂರಿನಿಂದ 14 ಕೆ.ಜಿ 'ಹ್ಯಾಶಿಷ್ ಆಯಿಲ್'ಗೆ ಬೇಡಿಕೆ ಬಂದಿತ್ತು. 'ಹ್ಯಾಶಿಷ್ ಆಯಿಲ್' ಅನ್ನು ಪೂರೈಸುವ ಸಲುವಾಗಿ ಆರೋಪಿಗಳು ಹೈದರಾಬಾದ್‌ನ ಹೋಟೆಲ್‌ವೊಂದರ ಬಳಿ ಭಾನುವಾರ ಸಂಜೆ ಕಾಯುತ್ತಿದ್ದರು. ಈ ವೇಳೆ ದಾಳಿ ನಡೆಸಿದ ಹಯ್ಯತ್ ನಗರ ಪೊಲೀಸರನ್ನೊಳಗೊಂಡ ವಿಶೇಷ ಕಾರ್ಯಾಚರಣಾ ಪಡೆಯು ಆರೋಪಿಗಳನ್ನು ಬಂಧಿಸಿದೆ' ಎಂದಿದ್ದಾರೆ.

'ಬೆಂಗಳೂರು ಮೂಲದ ಮಾದಕ ವಸ್ತುಗಳ ಖರೀದಿದಾರರು ತಲೆಮರೆಸಿಕೊಂಡಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

ಒಂದು ಕೆ.ಜಿ. ಹ್ಯಾಶಿಷ್ ಆಯಿಲ್‌ಗೆ 5ರಿಂದ 40 ಕೆ.ಜಿ. ಗಾಂಜಾವನ್ನು ಬಳಸಲಾಗುತ್ತದೆ. ಹೀಗಾಗಿ, 13.5 ಕೆ.ಜಿ. ಹ್ಯಾಶಿಷ್ ಆಯಿಲ್‌ಗೆ ಅಂದಾಜು 560 ಕೆ.ಜಿ. ಗಾಂಜಾ ಬಳಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಿಹಾರ: ಕಾಲ್ತುಳಿತ, 7 ಮಂದಿ ಸಾವು

ಕಾವಡ್ ಯಾತ್ರಿಕರು–ಹೂವು ಮಾರಾಟಗಾರರ ಘರ್ಷಣೆ

ಜಹಾನಾಬಾದ್ (ಬಿಹಾರ) (ಪಿಟಿಐ): ಇಲ್ಲಿಯ ಬಾಬಾ ಸಿದ್ದೇಶ್ವರನಾಥ ದೇವಾಲಯದಲ್ಲಿ ಭಾನುವಾರ ತಡರಾತ್ರಿ ಸಂಭವಿಸಿದ ಕಾಲ್ತುಳಿತದಲ್ಲಿ ಆರು ಮಹಿಳೆಯರು ಸೇರಿ ಏಳು ಮಂದಿ ಮೃತಪಟ್ಟಿದ್ದು, 40 ಮಂದಿ ಗಾಯಗೊಂಡಿದ್ದಾರೆ.

ಮೃತರನ್ನು ಪ್ಯಾರೆ ಪಾಸ್ವಾನ್ (30), ನಿಶಾ ದೇವಿ (30), ಪೂನಂ ದೇವಿ (30), ನಿಶಾ ಕುಮಾರಿ (21) ಮತ್ತು ಸುಶೀಲಾ ದೇವಿ (64) ಎಂದು ಗುರುತಿಸಲಾಗಿದೆ. ಮತ್ತೊಬ್ಬ ಮೃತ ಮಹಿಳೆಯ ಗುರುತು ಪತ್ತೆಯಾಗಿಲ್ಲ.

ಮೃತರಲ್ಲಿ ಬಹುತೇಕರು ಕಾವಡ್ ಯಾತ್ರಿಕರು. ಗಾಯಾಳುಗಳನ್ನು ಚಿಕಿತ್ಸೆಗಾಗಿ ಮುಕುಂದಪುರ ಮತ್ತಿತರ ಹತ್ತಿರದ ಸ್ಥಳಗಳಲ್ಲಿಯ ಆಸ್ಪತ್ರೆಗಳಿಗೆ ಕರೆದೊಯ್ಯಲಾಗಿತ್ತು. ಅವರಲ್ಲಿ 10 ಮಂದಿಗೆ ಪ್ರಾಥಮಿಕ ಚಿಕಿತ್ಸೆ ನೀಡಿ ಕಳುಹಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಾವಡ್ ಯಾತ್ರಿಕರು ಮತ್ತು ಹೂವು ಮಾರಾಟಗಾರರ ನಡುವೆ ನಡೆದ ಘರ್ಷಣೆಯಿಂದಾಗಿ ಈ ಘಟನೆ ಸಂಭವಿಸಿದೆ ಎಂದು ತಿಳಿದುಬಂದಿದೆ.

'ದುರ್ಘಟನೆಗೆ ನಿರ್ದಿಷ್ಟ ಕಾರಣ ಇನ್ನೂ ತಿಳಿದುಬಂದಿಲ್ಲ. ಕಾವಡ್ ಯಾತ್ರಿಕರ ನಡುವಣ ಜಗಳದಿಂದ ಕಾಲ್ತುಳಿತ ಸಂಭವಿಸಿರುವ ಸಾಧ್ಯತೆ ಇದೆ ಎಂದು ಸ್ಥಳೀಯರು ತಿಳಿಸಿದ್ದಾರೆ. ಅವರ ನಡುವೆ ವಾಗ್ವಾದವೂ ನಡೆದಿತ್ತು. ಘಟನೆಯ ಬಗ್ಗೆ ತನಿಖೆಗೆ ಆದೇಶಿಸಲಾಗಿದೆ' ಎಂದು ಜಿಲ್ಲಾ ಮ್ಯಾಜಿಸ್ಟ್ರೇಟ್ ಅಲಂಕೃತಾ ಪಾಂಡೆ ತಿಳಿಸಿದ್ದಾರೆ.

ದುಲೀಪ್ ಟ್ರೋಫಿ: ಅಶ್ವಿನ್, ಬೂಮ್ರಾಗೆ ರಿಯಾಯಿತಿ, ಆಡುವುದು ವಿರಾಟ್, ರೋಹಿತ್ ವಿವೇಚನೆಗೆ

ಬೆಂಗಳೂರಿಗೆ ಪಂದ್ಯಗಳು ಸ್ಥಳಾಂತರ

ಬೆಂಗಳೂರು(ಪಿಟಿಐ): ಅನಂತಪುರದಲ್ಲಿ ನಡೆಯಬೇಕಿದ್ದ ದುಲೀಪ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಆರಂಭಿಕ ಸುತ್ತಿನ ಪಂದ್ಯಗಳನ್ನು ಬೆಂಗಳೂರಿಗೆ ಸ್ಥಳಾಂತರಿಸಲಾಗಿದೆ.

ಈ ಪಂದ್ಯಗಳಲ್ಲಿ ಭಾರತ ತಂಡದ ಪ್ರಮುಖ ಆಟಗಾರರು ಭಾಗವಹಿಸುವ ಸಾಧ್ಯತೆಗಳಿವೆ. ಸೆಪ್ಟೆಂಬರ್ 5ರಿಂದ ಮೊದಲ ಸುತ್ತಿನ ಪಂದ್ಯಗಳು ಆಂಧ್ರಪ್ರದೇಶದ ಅನಂತಪುರದಲ್ಲಿ ನಡೆಯಬೇಕಿತ್ತು. ಈಗ ಆ ಪಂದ್ಯಗಳನ್ನು ಬೆಂಗಳೂರಿನ ಎಂ. ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಸ್ಥಳಾಂತರಿಸಲಾಗಿದೆ.

'ಭಾರತ ತಂಡದ ಪ್ರಮುಖ ಆಟಗಾರರು ಟೂರ್ನಿಯಲ್ಲಿ ಆಡುತ್ತಿದ್ದಾರೆ. ಅವರ ಪ್ರಯಾಣ, ವಸತಿ ಸೌಲಭ್ಯಗಳಿಗಾಗಿ ಬೆಂಗಳೂರನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಇದರಿಂದಾಗಿ ಅವರು ಟೆಸ್ಟ್ ಮಾದರಿಯ ಪಂದ್ಯಗಳನ್ನು ಆಡುವ ಅನುಭವ ಪಡೆಯಲು ಸಾಧ್ಯವಾಗಲಿದೆ. ಇದರ ನಂತರ ಅವರು ಬಾಂಗ್ಲಾದೇಶ ಎದುರಿನ ಟೆಸ್ಟ್ ಸರಣಿಯಲ್ಲಿ ಆಡಲಿದ್ದಾರೆ' ಎಂದು ಬಿಸಿಸಿಐ ಮೂಲಗಳು ಪಿಟಿಐಗೆ ತಿಳಿಸಿವೆ.


ಕುಲದೀಪ್ ಯಾದವ್ ಮತ್ತು ಕೆ.ಎಲ್. ರಾಹುಲ್

ಭಾರತ ಮತ್ತು ಬಾಂಗ್ಲಾ ತಂಡಗಳು ಎರಡು ಟೆಸ್ಟ್ ಪಂದ್ಯಗಳನ್ನು ಚೆನ್ನೈ (ಸೆ. 19ರಿಂದ) ಮತ್ತು ಕಾನ್ಪುರ (ಸೆ 27ರಿಂದ) ನಗರಗಳಲ್ಲಿ ಆಡಲಿವೆ.

ಬೆಂಗಳೂರಿನಿಂದ ಅನಂತಪುರವು 230 ಕಿ.ಮೀ ದೂರದಲ್ಲಿದೆ. ಉಭಯ ನಗರಗಳ ನಡುವಣ ವಿಮಾನಯಾನ ಸೌಲಭ್ಯವಿಲ್ಲ.

ಈ ಟೂರ್ನಿಯಲ್ಲಿ ತಾವು ಆಡುವ ಕುರಿತು ನಿರ್ಧರಿಸಲು ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರ ವಿವೇಚನೆಗೆ ಬಿಡಲಾಗಿದೆ. ರವೀಂದ್ರ ಜಡೇಜ, ಅಕ್ಷರ್ ಪಟೇಲ್, ಕೆ.ಎಲ್. ರಾಹುಲ್, ಶುಭಮನ್ ಗಿಲ್, ಶ್ರೇಯಸ್ ಅಯ್ಯರ್, ಕುಲದೀಪ್ ಯಾದವ್ ಮತ್ತಿತರರು ಆಡುವ ಸಾಧ್ಯತೆ ಇದೆ. ವೇಗಿ ಜಸ್‌ಪ್ರೀತ್ ಬೂಮ್ರಾ ಮತ್ತು ಅನುಭವಿ ಸ್ಪಿನ್ನರ್ ಆರ್. ಅಶ್ವಿನ್ ಅವರಿಗೆ ರಿಯಾಯಿತಿ ನೀಡಲಾಗಿದೆ.

ರಿಷಭ್ ಪಂತ್ ಅವರಿಗೂ ದುಲೀಪ್ ಟ್ರೋಫಿ ಟೂರ್ನಿಯಲ್ಲಿ ಆಡಲು ಆಯ್ಕೆ ಸಮಿತಿಯು ಸೂಚಿಸುವ ಸಾಧ್ಯತೆ ಇದೆ. ಒಂದೊಮ್ಮೆ ಪಂತ್ ಆಡಲು ಕಣಕ್ಕಿಳಿದರೆ 2022ರ ನಂತರ ಇದು ಅವರಿಗೆ ಮೊದಲ ಕೆಂಪು ಚೆಂಡಿನ ಮಾದರಿಯ ಟೂರ್ನಿಯಾಗಲಿದೆ.

ಶಸ್ತ್ರಚಿಕಿತ್ಸೆಗೊಳಗಾಗಿ ವಿಶ್ರಾಂತಿ ಪಡೆಯುತ್ತಿರುವ ಬೌಲರ್ ಮೊಹಮ್ಮದ್ ಶಮಿ ಅವರು ಟೂರ್ನಿಯಲ್ಲಿ ಆಡುವುದಿಲ್ಲ. ಟೆಸ್ಟ್ ಸರಣಿಗಾಗಿ ಪೂರ್ವಸಿದ್ಧತಾ ಶಿಬಿರವು ಚೆನ್ನೈನಲ್ಲಿ ನಡೆಯಲಿದ್ದು, ದಿನಾಂಕಗಳು ನಿಗದಿಯಾಗಿಲ್ಲ. ಆದ್ದರಿಂದ ಶಿಬಿರದ ದಿನಾಂಕಗಳು ನಿರ್ಧಾರವಾದ ನಂತರವಷ್ಟೇ ಪ್ರಮುಖ ಆಟಗಾರರು ದುಲೀಪ್ ಟ್ರೋಫಿ ಆಡುವ ಬಗ್ಗೆ ನಿರ್ಧಾರ ಕೈಗೊಳ್ಳುವರು ಎಂದೂ ಹೇಳಲಾಗುತ್ತಿದೆ.

ಸೀನಿಯರ್ ಆಟಗಾರರಿಗೆ ಅಂತರ ರಾಷ್ಟ್ರೀಯ ಟೂರ್ನಿಗಳು ಇಲ್ಲದ ಸಂದರ್ಭದಲ್ಲಿ ದೇಶಿ ಟೂರ್ನಿಗಳಲ್ಲಿ ಆಡಬೇಕು ಎಂದು ಬಿಸಿಸಿಐ ಈಚೆಗೆ ಹೇಳಿದೆ. ಆದ್ದರಿಂದ ಭಾರತ ಟಿ20 ಕ್ರಿಕೆಟ್ ತಂಡದ ನಾಯಕ ಸೂರ್ಯಕುಮಾರ್ ಯಾದವ್ (ಮುಂಬೈ) ಮತ್ತು ವಿಕೆಟ್‌ಕೀಪರ್ ಇಶಾನ್ ಕಿಶನ್ (ಜಾರ್ಖಂಡ್) ಅವರು ಇದೇ 15ರಿಂದ ಆರಂಭವಾಗಲಿರುವ ಬುಚಿಬಾಬು ಟ್ರೋಫಿ ಟೂರ್ನಿಯಲ್ಲಿ ಆಡಲಿದ್ದಾರೆ.

ಎನ್‌ಸಿಎನಲ್ಲಿ ತರಬೇತಿ ಪಡೆಯಲಿರುವ ನೇಪಾಳ ತಂಡ

ಕಠ್ಮಂಡು (ಪಿಟಿಐ): ಕೆನಡಾದಲ್ಲಿ ನಡೆಯಲಿರುವ ಕ್ರಿಕೆಟ್ ವಿಶ್ವ ಕಪ್ ಲೀಗ್ 2 ಸರಣಿಗೆ ಸಿದ್ಧತೆ ನಡೆಸಲು ನೇಪಾಳ ಕ್ರಿಕೆಟ್ ತಂಡವು, ಬೆಂಗಳೂರಿನ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯಲ್ಲಿ ತರಬೇತಿ ಪಡೆಯಲಿದೆ.

ಎರಡು ವಾರ ಬೆಂಗಳೂರಿನಲ್ಲಿ ತರಬೇತಿ ಪಡೆದ ನಂತರ ತಂಡವು ಕೆನಡಾದಲ್ಲಿ ಮೂರು ರಾಷ್ಟ್ರಗಳ ಸರಣಿಯನ್ನು ಆಡಲಿದೆ. ಒಮಾನ್ ಸರಣಿಯಲ್ಲಿ ಪಾಲ್ಗೊಳ್ಳಲಿರುವ ಇನ್ನೊಂದು ತಂಡ. ಲೀಗ್2 ಪಾಯಿಂಟ್ ಪಟ್ಟಿಯಲ್ಲಿ ನೇಪಾಳ ಆರನೇ ಸ್ಥಾನದಲ್ಲಿದೆ.

ಎನ್‌ಸಿಎನಲ್ಲಿ ತರಬೇತಿ ಪಡೆಯುತ್ತಿರುವ ವಿಷಯವನ್ನು ನೇಪಾಳ ಕ್ರಿಕೆಟ್ ಸಂಸ್ಥೆ ಎಕ್ಸ್‌ನಲ್ಲಿ ಸೋಮವಾರ ಹಂಚಿಕೊಂಡಿದೆ.

ನಾಯಕ ರೋಹಿತ್ ಪೌದೆಲ್, ದೀಪೇಂದ್ರ ಸಿಂಗ್ ಐರಿ ಮತ್ತು ಸಂದೀಪ್ ಲಮಿಚಾನೆ ಸೇರಿದಂತೆ ನೇಪಾಳದ ಕೆಲವು ಪ್ರಮುಖ ಆಟಗಾರರು ಇತ್ತೀಚೆಗೆ ಕೆನಡಾದಲ್ಲಿ ನಡೆದ ಗ್ಲೋಬಲ್ ಟಿ20 ಲೀಗ್‌ನಲ್ಲಿ ಆಡಿದ್ದರು.

ಹೋದ ಜೂನ್‌ನಲ್ಲಿ ಟಿ20 ವಿಶ್ವಕಪ್ ಆಡಲು ಅಮೆರಿಕಕ್ಕೆ ಹೋಗುವ ಮೊದಲ ನೇಪಾಳ ತಂಡ ಗುಜರಾತ್ ಮತ್ತು ಬರೋಡಾ ತಂಡಗಳ ಎದುರು ವಾಪಿಯಲ್ಲಿ ಕೆಲವು ಅಭ್ಯಾಸ ಪಂದ್ಯಗಳನ್ನು ಆಡಿತ್ತು.

'ರೈನೋಸ್' (ನೇಪಾಳ ತಂಡದ ಅಡ್ಡಹೆಸರು) ತಂಡ 2026ರ ಡಿಸೆಂಬರ್ ಒಳಗೆ ಲೀಗ್ 2 ಪಾಯಿಂಟ್‌ಪಟ್ಟಿಯಲ್ಲಿ ಮೊದಲ ನಾಲ್ಕರಲ್ಲಿ ಸ್ಥಾನ ಪಡೆಯುವ ಗುರಿಹೊಂದಿದೆ. ಇದರಿಂದ ತಂಡವು ವಿಶ್ವಕಪ್ ಕ್ವಾಲಿಫೈರ್‌ನಲ್ಲಿ ಆಡುವ ಅವಕಾಶ ಪಡೆಯುತ್ತದೆ.

ಸೇಂಟ್ ಲೂಯಿಸ್ ರಾಪಿಡ್ ಮತ್ತು ಬ್ಲಿಟ್ಜ್ ಚೆಸ್ ಟೂರ್ನಿ

ಪ್ರಜ್ಞಾನಂದಗೆ ಲೆವೊನ್ ಎದುರಾಳಿ

ಸೇಂಟ್ ಲೂಯಿಸ್ (ಪಿಟಿಐ): ಭಾರತದ ಆರ್.ಪ್ರಜ್ಞಾನಂದ ಅವರು ಸೇಂಟ್ ಲೂಯಿಸ್ ರಾಪಿಡ್ ಮತ್ತು ಬ್ಲಿಟ್ಜ್ ಚೆಸ್ ಟೂರ್ನಿಯಲ್ಲಿ ಅಮೆರಿಕದ ಲೆವೊನ್ ಅರೋನಿಯನ್ ವಿರುದ್ಧ ಕಪ್ಪು ಕಾಯಿಗಳೊಂದಿಗೆ ತಮ್ಮ ಅಭಿಯಾನವನ್ನು ಪ್ರಾರಂಭಿಸಲು ಸಜ್ಜಾಗಿದ್ದಾರೆ.

ಫ್ರಾನ್ಸ್‌ನ ಮ್ಯಾಕ್ಸಿಮ್ ವಾಚಿಯರ್-ಲಾಗ್ರೇವ್ ಮತ್ತು ಅಲಿರೆಜಾ ಫಿರೋಜಾ, ಅಮೆರಿಕದ ಫ್ಯಾಬಿಯಾನೊ ಕರುವಾನಾ ಮತ್ತು ಉಜ್ಬೇಕಿಸ್ತಾನ್‌ನ ನಾಡಿರ್ಬೆಕ್ ಅಬ್ದುಸತ್ತಾರೊವ್ ವಿರುದ್ಧ ಪ್ರಜ್ಞಾನಂದ ಆಡಲಿದ್ದಾರೆ. ಟೂರ್ನಿಯಲ್ಲಿನ ಪ್ರಸ್ತುತ ಮೂರನೇ ಶ್ರೇಯಾಂಕದಿಂದ ಸುಧಾರಿಸಿಕೊಳ್ಳಲು ಅವರಿಗೆ ಉತ್ತಮ ಅವಕಾಶವಿದೆ.

ವರ್ಷದ ಆರಂಭದಲ್ಲಿ ಉತ್ತಮವಾಗಿದ್ದ ಅವರ ಪ್ರದರ್ಶನ ನಂತರ ಗಮನಾರ್ಹವಾಗಿರಲಿಲ್ಲ. ಹೀಗಾಗಿ ಕೆಲವು ಪ್ರಮುಖ ರೇಟಿಂಗ್ ಅಂಕಗಳನ್ನು ಕೈಬಿಟ್ಟು ವಿಶ್ವದ ಹತ್ತು ಅಗ್ರ ಕ್ರಮಾಂಕಗಳಿಂದ ಹೊರ ಬಿದ್ದಿದ್ದರು. ಶೀಘ್ರವಾಗಿ ಉತ್ತಮ ಪ್ರದರ್ಶನಕ್ಕೆ ಮರಳುವ ವ್ಯಕ್ತಿ ಎಂದು ಕರೆಯಲ್ಪಡುವ ಅವರು ಕಳೆದ ವಾರ 19ನೇ ವಯಸ್ಸಿಗೆ ಕಾಲಿಟ್ಟಿದ್ದಾರೆ. ಇಲ್ಲಿನ ಎರಡು ಸ್ಪರ್ಧೆಗಳಲ್ಲಿ ಉತ್ತಮವಾಗಿ ಆಡುವ ನಿರೀಕ್ಷೆಯಲ್ಲಿ ಇದ್ದಾರೆ.

ಅಮೆರಿಕದ ಕರುವನಾ ಅವರು ರುಮೇನಿಯಾದ ಬುಕಾರೆಸ್ಟ್‌ನಲ್ಲಿ ನಡೆದ ಸೂಪರ್‌ಬೆಟ್ ಕ್ಲಾಸಿಕ್‌ನಲ್ಲಿ ಅಮೆರಿಕದ ನಾಲ್ಕು ಆಟಗಾರರ ಟೈಬ್ರೇಕರ್‌ನಲ್ಲಿ ಪ್ರಶಸ್ತಿಯನ್ನು ಗೆದ್ದುಕೊಂಡಿದ್ದಾರೆ ಮತ್ತು ಕ್ರೊವೇಷ್ಯಾದ ಜಾಗ್ರೆಬ್‌ನಲ್ಲಿ ನಡೆದ ಸೂಪರ್‌ಯುನೈಟೆಡ್ ರಾಪಿಡ್ ಮತ್ತು ಬ್ಲಿಟ್ಜ್‌ನಲ್ಲಿ ಕೂಡಾ ಪ್ರಶಸ್ತಿ ಪಡೆದಿದ್ದಾರೆ.


ಆರ್ ಪ್ರಜ್ಞಾನಂದ –ಪಿಟಿಐ ಚಿತ್ರ


ಹಿಕಾರು ನಕಮುರಾ ಯಾರ ಜಯವನ್ನು ಬೇಕಾದರೂ ಕಸಿಯಬಲ್ಲರು. ಟೂರ್ನಿಯ ಒಂಬತ್ತು ಆಹ್ವಾನಿತ ಆಟಗಾರರಲ್ಲಿ ನಕಮುರಾ ಅವರಿಲ್ಲ. ವೈಲ್ಡ್-ಕಾರ್ಡ್ ಪ್ರವೇಶ ಪಡೆದಿರುವ ಮೂವರಲ್ಲಿ ಅವರೂ ಒಬ್ಬರಾಗಿದ್ದು, ಸ್ವದೇಶದವರಾದ ಲೆನಿಯರ್ ಡೊಮಿಂಗೊಜ್ ಮತ್ತು ಅರೋನಿಯನ್ ಅವರೊಂದಿಗೆ ಸೆಣಸಲಿದ್ದಾರೆ.

ಐದು ದಿನಗಳ ಈ ಟೂರ್ನಿಯ ನಂತರ ಸಿಂಕ್‌ಫೀಲ್ಡ್ ಕಪ್ ನಡೆಯಲಿದೆ. ಇದು ಈ ವರ್ಷದ ಗ್ರ್ಯಾನ್ ಚೆಸ್ ಟೂರ್ನಿಯ ಕೊನೆಯ ಸ್ಪರ್ಧೆ. ಇದರಲ್ಲಿ ಭಾರತದ ಡಿ.ಗುಕೇಶ್ ಕೂಡ ಪ್ರಜ್ಞಾನಂದ ಜೊತೆ ಭಾಗಿಯಾಗಲಿದ್ದಾರೆ.

ಫುಟ್‌ಬಾಲ್ ಮಾತೃ ಪ್ರತಿಷ್ಠಾನ ಎಫ್‌ಸಿಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾತೃ ಪ್ರತಿಷ್ಠಾನ ಫುಟ್‌ಬಾಲ್ ಕ್ಲಬ್ ತಂಡವು ಸೋಮವಾರ ನಡೆದ ಇಂಡಿಯನ್ ವುಮೆನ್ಸ್ ಲೀಗ್ (ಐಡಬ್ಲ್ಯುಎಲ್) ಟೂರ್ನಿಯ ಪಂದ್ಯದಲ್ಲಿ ಜಯಿಸಿತು.



ಅಶೋಕನಗರದ ಕರ್ನಾಟಕ ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಮಾತೃ ಪ್ರತಿಷ್ಠಾನ ತಂಡವು 2–0ಯಿಂದ ಮಿಸಾಕಾ ಫುಟ್‌ಬಾಲ್ ಕ್ಲಬ್ ತಂಡದ ವಿರುದ್ಧ ಗೆದ್ದಿತು.

ಮಾತೃ ಪ್ರತಿಷ್ಠಾನ ತಂಡದ ಪ್ರೀತಿ (28ನೇ ಮತ್ತು 67ನೇ ನಿ) ಎರಡು ಗೋಲು ದಾಖಲಿಸಿದರು.

ರೆಬೆಲ್ ವುಮೆನ್ಸ್ ಫುಟ್‌ಬಾಲ್ ಕ್ಲಬ್ ಮತ್ತು ಯುನೈಟೆಡ್ ಫುಟ್‌ಬಾಲ್ ಕ್ಲಬ್ ಕೊಡಗು ತಂಡದ ನಡುವೆ ನಡೆದ ದಿನದ ಮತ್ತೊಂದು ಪಂದ್ಯ ಡ್ರಾನಲ್ಲಿ ಅಂತ್ಯಗೊಂಡಿತು. ರೆಬೆಲ್ಸ್ ತಂಡದ ಸೆನೊರಿಟಾ ನೊಂಗ್‌ಪ್ಲು (23ನೇ ಮತ್ತು 63ನೇ ನಿ) ಎರಡು ಗೋಲು ದಾಖಲಿಸಿದರು. ಯುನೈಟೆಡ್ ಎಫ್‌ಸಿ ಪರ ಆಯುಷ್ ಮಾಲ್ವಿ(23ನೇ ನಿ) ಮತ್ತು ದಿವ್ಯಾ ರಾಣಾ (93ನೇ ನಿ) ತಲಾ ಒಂದು ಗೋಲು ಗಳಿಸಿದರು.


ವಿನೇಶ್ ಫೋಗಟ್

ವಿನೇಶ್ ಪ್ರಕರಣ ತೀರ್ಪು ಇಂದು

ಪ್ಯಾರಿಸ್ (ಪಿಟಿಐ): ಕುಸ್ತಿಪಟು ವಿನೇಶ್ ಫೋಗಟ್ ಅವರು ತಮ್ಮ ಅನರ್ಹತೆಯನ್ನು ಪ್ರಶ್ನಿಸಿ ಕ್ರೀಡಾ ನ್ಯಾಯಮಂಡಳಿಗೆ ಸಲ್ಲಿಸಿರುವ ಮೇಲ್ಮನವಿಯ ತೀರ್ಪು ಮಂಗಳವಾರ ಹೊರಬೀಳಲಿದೆ.

ವಿನೇಶ್ ಅವರು ಪ್ಯಾರಿಸ್ ಒಲಿಂಪಿಕ್ ಕೂಟದ ಮಹಿಳೆಯರ 50 ಕೆ.ಜಿ. ಫ್ರೀಸ್ಟೈಲ್ ಕುಸ್ತಿ ಫೈನಲ್ ಪ್ರವೇಶಿಸಿದ್ದರು. ಬೌಟ್‌ಗೂ ಮುನ್ನ ಅವರು ದೇಹತೂಕ ಪರೀಕ್ಷೆಯಲ್ಲಿ 50 ಗ್ರಾಂ ಹೆಚ್ಚು ತೂಗಿದ್ದರು. ಇದರಿಂದಾಗಿ ಅವರನ್ನು ಸ್ಪರ್ಧೆಯಿಂದ ಅನರ್ಹಗೊಳಿಸಲಾಗಿತ್ತು. ಭಾರತಕ್ಕೆ ಚಿನ್ನ ಅಥವಾ ಬೆಳ್ಳಿ ಪದಕ ಲಭಿಸುವ ಅವಕಾಶ ಕೈಜಾರಿತ್ತು.

ಇದರಿಂದಾಗಿ ವಿನೇಶ್ ಅವರು ತಾವು ಸೆಮಿಫೈನಲ್ ಮುಕ್ತಾಯದ ವರೆಗೂ ದೇಹತೂಕ ನಿರ್ವಹಣೆಯನ್ನು ಮಾಡಿದ್ದ ಕಾರಣ ಬೆಳ್ಳಿಪದಕವನ್ನು ನೀಡಬೇಕು ಎಂದು ಮೇಲ್ಮನವಿ ಸಲ್ಲಿಸಿದ್ದರು. ಇದನ್ನು ಒಲಿಂಪಿಕ್ಸ್‌ನಲ್ಲಿರುವ ಕ್ರೀಡಾ ನ್ಯಾಯಮಂಡಳಿಯ ಹಂಗಾಮಿ ಪೀಠವು ವಿಚಾರಣೆ ನಡೆಸಿತ್ತು. ಆ.13ರಂದು ಪ್ರಕಟಿಸುವುದಾಗಿ ತಿಳಿಸಿತ್ತು.

ದಕ್ಷಿಣ ಆಫ್ರಿಕಾ–ವಿಂಡೀಸ್ ಟೆಸ್ಟ್ ಡ್ರಾ

ಪೋರ್ಟ್ ಆಫ್ ಸ್ಪೇನ್ (ಎಎಫ್‌ಪಿ): ದಕ್ಷಿಣ ಆಫ್ರಿಕಾ ಮತ್ತು ವೆಸ್ಟ್‌ಇಂಡೀಸ್ ನಡುವಿನ ಮೊದಲ ಟೆಸ್ಟ್ ಪಂದ್ಯವು ಡ್ರಾಗೊಂಡಿದೆ.

ಪಂದ್ಯದ ಅಂತಿಮ ದಿನವಾದ ಭಾನುವಾರ ವೆಸ್ಟ್ ಇಂಡೀಸ್‌ನ ಅಲಿಕ್ ಅಥಾಂಜೆ (92; 116ಎ) ಅವರು ದಕ್ಷಿಣ ಆಫ್ರಿಕಾ ವಿರುದ್ಧ ಡ್ರಾ ಸಾಧಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಅವರು ಚೊಚ್ಚಲ ಶತಕ ಬಾರಿಸುವ ಅವಕಾಶವನ್ನು ಕಳೆದುಕೊಂಡರು.

ಭೋಜನ ವಿರಾಮಕ್ಕೂ ಮೊದಲು ದಕ್ಷಿಣ ಆಫ್ರಿಕಾ ಮೂರು ವಿಕೆಟ್ ನಷ್ಟಕ್ಕೆ 173ರನ್ ಗಳಿಸಿ ಎರಡನೇ ಇನ್ನಿಂಗ್ಸ್ ಡಿಕ್ಲೇರ್ ಮಾಡಿಕೊಂಡು, ಎದುರಾಳಿಗೆ 298 ರನ್‌ಗಳ ಗೆಲುವಿನ ಗುರಿ ನೀಡಿತು. ಸಂಕಷ್ಟದಲ್ಲಿದ್ದ ವಿಂಡೀಸ್ ತಂಡಕ್ಕೆ ಅಥಾಂಜೆ ಮತ್ತು ಜೇಸನ್ ಹೋಲ್ಡರ್ ಅವರು ಐದನೇ ವಿಕೆಟ್‌ಗೆ 65 ರನ್ ಸೇರಿಸಿ ಚೇತರಿಕೆ ನೀಡಿದರು.

ಮೊದಲ ಇನ್ನಿಂಗ್ಸ್‌ನಂತೆ, ಸ್ಪಿನ್ನರ್ ಕೇಶವ್ ಮಹಾರಾಜ್ ಆತಿಥೇಯರಿಗೆ ದೊಡ್ಡ ಆಘಾತ ನೀಡಿದರು.

ಸಂಕ್ಷಿಪ್ತ ಸ್ಕೋರ್: ದಕ್ಷಿಣ ಆಫ್ರಿಕಾ: 357 ಮತ್ತು 3ಕ್ಕೆ 173 ಡಿಕ್ಲೇರ್. ವೆಸ್ಟ್ ಇಂಡೀಸ್: 233 ಮತ್ತು 56.2 ಓವರ್‌ಗಳಲ್ಲಿ 5ಕ್ಕೆ 201 (ಅಲಿಕ್ ಅಥಾಂಜೆ 92, ಕವೆಮ್ ಹಾಡ್ಜ್ 29, ಜೇಸನ್ ಹೋಲ್ಡರ್ 31; ಕೇಶವ್ ಮಹಾರಾಜ್ 88ಕ್ಕೆ 4).

ಅಲ್ಟಿಮೇಟ್ ಟಿಟಿ: ಶ್ರೀಜಾ ಅಲಭ್ಯ

ಚೆನ್ನೈ (ಪಿಟಿಐ): ಭಾರತದ ಟೇಬಲ್ ಟೆನಿಸ್ ಆಟಗಾರ್ತಿ ಶ್ರೀಜಾ ಅಕುಲಾ ಅವರು ಗಾಯದ ಸಮಸ್ಯೆಯಿಂದಾಗಿ ಮುಂಬರುವ ಅಲ್ಟಿಮೇಟ್ ಟೇಬಲ್ ಟೆನಿಸ್ ಲೀಗ್‌ನಿಂದ ಹೊರಗುಳಿದಿದ್ದಾರೆ.

ಎರಡು ಬಾರಿ ರಾಷ್ಟ್ರೀಯ ಚಾಂಪಿಯನ್ ಶ್ರೀಜಾ ಅವರು ಜೈಪುರ ಪೇಟ್ರಿಯಾಟ್ಸ್ ಪರ ಆಡುವುದಾಗಿ ಘೋಷಣೆಯಾಗಿತ್ತು. ಗಾಯದಿಂದ ಚೇತರಿಸಿಕೊಳ್ಳಲು ತಮಗೆ ಆರು ವಾರಗಳ ವಿಶ್ರಾಂತಿ ಅಗತ್ಯವಿದೆ ಎಂದು ಅವರು ತಿಳಿಸಿದ್ದಾರೆ.

'ನಾನು ಗಾಯದ ಸಮಸ್ಯೆಯಿಂದ (ಮೂಳೆಯಲ್ಲಿ ಬಿರುಕು) ಬಳಲುತ್ತಿದ್ದೇನೆ. ವೈದ್ಯರ ಸಲಹೆಯ ಮೇರೆಗೆ ವಿಶ್ರಾಂತಿ ಪಡೆಯಲಿದ್ದೇನೆ. ನಾನು ಯುಟಿಟಿಯಲ್ಲಿ ಭಾಗವಹಿಸಲು ಸಾಧ್ಯವಾಗುತ್ತಿಲ್ಲ' ಎಂದು ಶ್ರೀಜಾ ತಿಳಿಸಿದ್ದಾರೆ.

ಶ್ರೀಜಾ ಬದಲಿಗೆ ಯೂತ್ ನ್ಯಾಷನಲ್ ಚಾಂಪಿಯನ್ ನಿತ್ಯಶ್ರೀ ಮಣಿ ಆಯ್ಕೆಯಾಗಿದ್ದಾರೆ. ಯುಟಿಟಿಯ ಮುಂಬರುವ ಆವೃತ್ತಿಯು ಆಗಸ್ಟ್ 22ರಿಂದ ಸೆಪ್ಟೆಂಬರ್ 7ರವರೆಗೆ ಚೆನ್ನೈನಲ್ಲಿ ನಡೆಯಲಿದೆ.


ಶ್ರೀಜಾ ಅಕುಲಾ –ಪಿಟಿಐ ಚಿತ್ರ

ವಿಶ್ವ ಕ್ರಮಾಂಕ 25ನೇ ಸ್ಥಾನದಲ್ಲಿರುವ ಮಣಿಕಾ ಬಾತ್ರಾ ಅವರೊಂದಿಗೆ ಒಲಿಂಪಿಕ್ಸ್ ಟೇಬಲ್ ಟೆನಿಸ್ ವೈಯಕ್ತಿಕ ಸ್ಪರ್ಧೆಗಳಲ್ಲಿ ಕ್ವಾರ್ಟರ್‌ಫೈನಲ್ ಪ್ರವೇಶಿಸಿದ ಭಾರತದ ಮೊದಲ ಆಟಗಾರ್ತಿ ಎಂಬ ಕೀರ್ತಿಗೆ ಪಾತ್ರರಾಗಿದ್ದರು. ಶ್ರೀಜಾ ಅವರು 22ನೇ ಕ್ರಮಾಂಕದಲ್ಲಿದ್ದಾರೆ.

ಬೋಡೋಲ್ಯಾಂಡ್‌ಗೆ ರೋಚಕ ಜಯ

ಕೊಕ್ರಜಾರ್, ಅಸ್ಸಾಂ (ಪಿಟಿಐ): ಬೋಡೋಲ್ಯಾಂಡ್ ಎಫ್‌ಸಿ ತಂಡವು ಸೋಮವಾರ 133ನೇ ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯ ರೋಚಕ ಹಣಾಹಣಿಯಲ್ಲಿ 4-3 ಗೋಲುಗಳಿಂದ ಬಾರ್ಡರ್ ಸೆಕ್ಯುರಿಟಿ ಫೋರ್ಸ್ ಎಫ್‌ಟಿ ತಂಡವನ್ನು ಮಣಿಸಿತು.

ಆತಿಥೇಯ ಬೋಡೋಲ್ಯಾಂಡ್ ಪರ ಜಂಗ್ಬ್ಲಾ ಬ್ರಹ್ಮ (54, 71ನೇ ನಿಮಿಷ) ಎರಡು ಗೋಲು ಗಳಿಸಿದರೆ, ಮಿಟಿಂಗ ಡ್ವಿಮರಿ (2ನೇ ನಿ.) ಮತ್ತು ಸಿಬ್ರಾ ನರ್ಜಾರಿ (62ನೇ ನಿ) ತಲಾ ಒಂದು ಗೋಲು ಗಳಿಸಿದರು.

ಬಿಎಸ್‌ಎಫ್ ಪರ ಕಿಶೋರಿ (50 ಮತ್ತು 69ನೇ ನಿ.) ಎರಡು ಹಾಗೂ ಆಸಿಫ್ ಖಾನ್ (89ನೇ) ಒಮ್ಮೆ ಚೆಂಡನ್ನು ಗುರಿ ಸೇರಿಸಿದರು.

ಬೋಡೋಲ್ಯಾಂಡ್ ತಂಡವು ತನ್ನ ಗುಂಪು ಹಂತದ ಅಭಿಯಾನವನ್ನು ಆರು ಅಂಕಗಳೊಂದಿಗೆ ಪೂರ್ಣಗೊಳಿಸಿತು. 'ಇ' ಗುಂಪಿನಲ್ಲಿ ಮೂರು ಪಂದ್ಯಗಳಲ್ಲಿ ಎರಡನ್ನು ಗೆದ್ದರೆ, ಒಂದರಲ್ಲಿ ಸೋತಿದೆ.